
epaper - karnatakamalla.com




# ಕರ್ನಾಟಕ ಮಲ್ಲ

TEL: 24715208, Fax:24715237
ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ
KARNATAKA MALLA, MUMBAI
ಸಂಪುಟ : 35 ಸಂಚಿಕೆ : 138 ಶನಿವಾರ 20-06-2026 ಬೆಲೆ : ₹ 6 ಪುಟಗಳು - 10 ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ




ಎಲ್ಲಾ ನಮ್ಮವರು ಎನ್ನುವುದು ಭ್ರಮೆ.
ನಾನು ನನ್ನದು ಎನ್ನುವುದು ಸ್ವಾರ್ಥ.
ಅವರು ನನ್ನವರು ಎಂಬುದು ಶುದ್ಧ ಸುಳ್ಳು.
ನಿನಗಾಗಿ ನೀನು ಎಂಬುದಷ್ಟೇ ಸತ್ಯ.

3 ಕೇಂದ್ರ ಸಚಿವ ಸ್ಥಾನ ಸಿಗದ ಬಂಡಾಯ ಸಂಸದರಿಗೆ ಹೆಚ್ಚುವರಿ 25 ಕೋ.ರೂ; ಸಂಜಯ್ ರಾವುತ್ ಆರೋಪ

ಮರಾಠಿ ಪ್ರಮಾಣಪತ್ರವಿಲ್ಲದ ಆಟೋ, ಟ್ಯಾಕ್ಸಿ ಚಾಲಕರ ವಿರುದ್ಧ ಆ.15ರ ಬಳಿಕ ಕ್ರಮ 5

ಹಿಂದಿನ ಕಾಲದಲ್ಲಿ ಮನುಷ್ಯನ ಮನಸ್ಸು ಬಂಗಾರವಾಗಿತ್ತು.
ಗುಡಿಯ ಮೂರ್ತಿಗಳು ಕಲ್ಲಾಗಿದ್ದವು. ಆದರೆ
ಈಗ ಗುಡಿಯ ಮೂರ್ತಿ ಬಂಗಾರವಾಗಿದೆ.
ಮನುಷ್ಯನ ಮನಸ್ಸು ಕಲ್ಲಾಗಿದೆ.

## ಇದು ಕೇವಲ ಟ್ರೈಲರ್ ಅಷ್ಟೇ, ಪಿಕ್ಚರ್ ಅಬಿ ಬಾಕಿ ಹೈ ; ಏಕನಾಥ್ ಶಿಂದೆ

### ಶಿವಸೇನೆಯ 60ನೇ ಸಂಸ್ಥಾಪನಾ ದಿನ ; ಶಿವಸೈನಿಕರು ನನ್ನ ಸಂಪತ್ತು





ಮುಂಬಯಿ,ಜೂ.19 - 'ನಿನ್ನೆಯ ಹಿಂದಿನ ದಿನದಿಂದ ಕೆಲವು ನಾಯಿಗಳು ಪ್ರತಿದಿನ ಬೊಗಳುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ನಾಯಿಗಳು ಗುಂಪಾಗಿ ಬೊಗಳುತ್ತವೆ. ಹುಲಿ ಒಂಟಿಯಾಗಿ ಬರುತ್ತದೆ. ಹುಲಿ ಬೇಟೆಯಾಡುತ್ತದೆ. ಇದು ನಮ್ಮ ಶಿವಸೇನೆ. ಬಾಳಾಸಾಹೇಬರ ಆಲೋಚನೆಗಳು, ಧರ್ಮವೀರ್ ಆನಂದ್ ದಿಘೆಯವರ ಆಲೋಚನೆಗಳೊಂದಿಗೆ ನಾವು ಮುಂದುವರಿಯುತ್ತಿರುವ ಈ ಶಿವಸೇನೆ ಇಂದು ಮಹಾರಾಷ್ಟ್ರದಲ್ಲಿ ಕಂಡುಬರುತ್ತದೆ. ಇದು ಕೇವಲ ಟ್ರೈಲರ್ ಅಷ್ಟೇ. ಪಿಕ್ಚರ್ ಅಬಿ ಬಾಕಿ ಹೈ ಮುಂದೆ ಏನಾಗುತ್ತದೆ ಎಂದು ನೋಡೋಣ' ಎಂದು ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು ಹೇಳಿದರು.

ಎದುರಾಳಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ)ಯ 6 ಸಂಸದರು ತನ್ನ ಪಕ್ಷ ಸೇರುತ್ತಿರುವ ವರದಿ ಹಿನ್ನೆಲೆಯಲ್ಲಿ ಶಿಂದೆ ನೀಡಿದ ಈ ಹೇಳಿಕೆ ಮಹತ್ವ ಪಡೆದಿದೆ. ಶಿವಸೇನೆಯ 60ನೇ ಸಂಸ್ಥಾಪನಾ ದಿನದ ಅಂಗವಾಗಿ ಗೋರೆಗಾಂವ್‌ನ ನೆಸ್ಕೋ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಂದೆ ಅವರು ಮಾತನಾಡುತ್ತಿದ್ದರು.

ನಮ್ಮ ಶಿವಸೇನೆಯನ್ನು 60 ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಈ ವಜ್ರೋತ್ಸವದ ಸಂದರ್ಭದಲ್ಲಿ, ನಾನು ಎಲ್ಲರಿಗೂ ಶುಭ ಹಾರೈಸುತ್ತೇನೆ. ಇಂದು, ನಮ್ಮ ಮುಂದೆ ಕೇಸರಿ ಬಿರುಗಾಳಿ ಎದ್ದಿದೆ. ವೇದಿಕೆಯಲ್ಲಿ ಕುಳಿತಿರುವ ಎಲ್ಲಾ ನಾಯಕರು, ಮಂತ್ರಿಗಳು, ಉಪ ನಾಯಕರು, ಸಂಸದರು, ಶಾಸಕರು ನನ್ನ ಸಂಪತ್ತು. ಮುಂದೆ ಕುಳಿತಿರುವ ನನ್ನ ಶಿವಸೈನಿಕರು ನನ್ನ ಸಂಪತ್ತು. ಅನೇಕ ಜನರ ಕಣ್ಣುಗಳು ನಮ್ಮ ಮೇಲೆ ಇವೆ. ನಾನು ಏನು ಹೇಳುತ್ತೇನೆ, 5ನೇ ಪುಟಕ್ಕೆ

## ಪಕ್ಷದ ಮುಖ್ಯಸ್ಥ ಸ್ಥಾನದಿಂದ ಕೆಳಗಿಳಿಯಲು ಸಿದ್ಧ ; ಉದ್ಧವ್ ಠಾಕ್ರೆ

### "ಅನೇಕ ಬಿಕ್ಕಟ್ಟು, ಬಿರುಗಾಳಿಗಳು ಬಂದರೂ ನಾನು ಓಡಿಹೋಗುವವನಲ್ಲ"

ಮುಂಬಯಿ,ಜೂ.19 - 'ನನ್ನ ಮೇಲೆ ನಿಮಗೆ ವಿಶ್ವಾಸ ಮತ್ತು ನಂಬಿಕೆ ಇಲ್ಲದಿದ್ದರೆ ನಾನು ಪಕ್ಷದ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ ನೀಡಲು ಸಿದ್ಧನಿದ್ದೇನೆ' ಎಂದು ಶಿವಸೇನೆ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಅವರಿಂದು ತಮ್ಮ ಬೆಂಬಲಿಗರ ಮುಂದೆ ಭಾವುಕರಾಗಿ ಹೇಳಿದರು.




ಶಿವಸೇನೆಯ 60ನೇ ಸಂಸ್ಥಾಪನಾ ದಿನದ ಅಂಗವಾಗಿ ನಗರದ ಷಣ್ಮುಖಾನಂದ ಸಭಾಗೃಹದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಠಾಕ್ರೆ,ಬಿಜೆಪಿ ಮತ್ತು ಶಿವಸೇನಾ ಶಿಂದೆ ಬಣದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿ,ತನ್ನ ಪಕ್ಷದ ಬಂಡಾಯ ಸಂಸದರ ಮೇಲೂ ಕಿಡಿಕಾರಿದ್ದು,ದ್ರೋಹ ನಡೆದ ಮತದಾರರಲ್ಲಿ ನಾನು ಕ್ಷಮೆಯಾಚಿಸುವುದಾಗಿ ತುಂಬಾ ಭಾವುಕರಾಗಿ ತಿಳಿಸಿದರು.

ಸವಾಲುಗಳು ಮತ್ತು ದಾಳಿಗಳ ಹೊರತಾಗಿಯೂ ನಾನು ದೃಢಸಂಕಲ್ಪ ಕಳೆದುಕೊಂಡಿಲ್ಲ, ಆದರೆ ಪಕ್ಷವು ನನ್ನ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿಲ್ಲದಿದ್ದರೆ ನಾನು ನನ್ನ ಹುದ್ದೆಗೆ ರಾಜೀನಾಮೆ ನೀಡಲು ಸಿದ್ಧ ಎಂದು ಠಾಕ್ರೆ ಹೇಳಿದರು.

ಒಂದು ದಶಕಕ್ಕೂ ಹೆಚ್ಚು ಕಾಲ ನಾನು ಪಕ್ಷವನ್ನು ಮುನ್ನಡೆಸುತ್ತಿದ್ದೇನೆ ಮತ್ತು ನನ್ನ ಮೇಲಿನ ನಿರಂತರ ದಾಳಿಗಳನ್ನು ಗಮನಿಸಿದರೆ, ನಾನು ಉನ್ನತ ಶಿವಸೇನೆ (ಯುಬಿಟಿ) ಹುದ್ದೆಗೆ ರಾಜೀನಾಮೆ ನೀಡಲು ಸಿದ್ಧ ಎಂದು ಅವರು ತಿಳಿಸಿದರು.

ಪಕ್ಷದ ಶ್ರೇಣಿಯಿಂದ ಯಾರಾದರೂ ಮುಂದಿನ ಶಿವಸೇನಾ ಅಧ್ಯಕ್ಷರಾದರೆ ನನಗೆ ಸಂತೋಷವಾಗುತ್ತದೆ, ಆದರೆ ಅದನ್ನು ಕಳ್ಳರ ಕೈಯಲ್ಲಿ ಬಿಡುವುದಿಲ್ಲ ಎಂದು ಭಾವುಕರಾದ ಠಾಕ್ರೆ ತಮ್ಮ ಬೆಂಬಲಿಗರಿಗೆ ಹೇಳಿದರು. 5ನೇ ಪುಟಕ್ಕೆ

## 'ಬೆಸ್ಟ್' ಕಾರ್ಮಿಕರ ಅನಿರ್ದಿಷ್ಟಾವಧಿ ಮುಷ್ಕರ; ಲಕ್ಷಾಂತರ ಪ್ರಯಾಣಿಕರ ಪರದಾಟ





ಮುಂಬಯಿ, ಜೂ. 19- ದೀರ್ಘಕಾಲದ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಶುಕ್ರವಾರ ಬೆಸ್ಟ್ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿರುವುದರಿಂದ ದೈನಂದಿನ ಪ್ರಯಾಣಕ್ಕೆ ಬೆಸ್ಟ್ ಬಸ್ಸುಗಳನ್ನು ಅವಲಂಭಿಸಿರುವ ಲಕ್ಷಾಂತರ ಜನರು ಪರದಾಡುವಂತಾಗಿದ್ದು, ಪರ್ಯಾಯ ಸಾರಿಗೆಯನ್ನು ಆಯ್ದುಕೊಳ್ಳುವಂತಾಗಿದೆ.

ಬೃಹನ್ಮುಂಬಯಿ ಮಹಾನಗರಪಾಲಿಕೆ (ಬಿಎಂಸಿ)ಯ ಸಾರಿಗೆ ಸಂಸ್ಥೆ ಬೆಸ್ಟ್ ಹೊಂದಿರುವ 2,766 ಬಸ್ಸುಗಳನ್ನು ಇಂದು ಕೇವಲ 38 ಬಸ್ಸುಗಳು ಮಾತ್ರ ರಸ್ತೆಗೆ ಇಳಿದಿವೆ. ಬೆಸ್ಟ್ ಬಸ್ಸು ನೌಕರರ ಮುಷ್ಕರದಿಂದಾಗಿ ಬೆಳಗ್ಗಿನ ತುರ್ತು ಸಮಯದಲ್ಲಿ ಮುಂಬಯಿ ನಗರದ ಎಲ್ಲೆಡೆ ಬೆಸ್ಟ್ ಬಸ್ಸು ತಂಗುದಾಣಗಳಲ್ಲಿ ಮೈಲುದ್ದದ ಸರತಿ ಸಾಲುಗಳಲ್ಲಿ ನಿಂತ ಜನರು ಬಸ್ಸುಗಳಿಲ್ಲದೆ ಬಳಿಕ ಅಟೋರಿಕ್ಷಾ, ಟ್ಯಾಕ್ಸಿ, ಕ್ಯಾಬ್‌ಗಳು, ಲೋಕಲ್ ರೈಲುಗಳು ಮತ್ತು ಮೆಟ್ರೋ ರೈಲುಗಳನ್ನು ಆಶ್ರಯಿಸಬೇಕಾಯಿತು.

ಇಂದು ಬೆಳಗ್ಗಿನ ಹೊತ್ತು 48 ಬಸ್ಸುಗಳು ಕೆಲವು ಡಿಪೋಗಳಿಂದ ರಸ್ತೆಗೆ ಇಳಿದಿದ್ದವು. ಆದರೆ ಮುಷ್ಕರ ಬೆಂಬಲಿಗರು ಅಡ್ಡಿಪಡಿಸಿದ್ದರಿಂದಾಗಿ ಮತ್ತು ಕೆಲವೆಡೆ ಕಲ್ಲು ತೂರಾಟದಿಂದಾಗಿ ಅದರಲ್ಲಿ 16 ಬಸ್ಸುಗಳು ಮರಳಿ ಡಿಪೋ ಸೇರಿದರೆ 32 ಬಸ್ಸುಗಳು ಮಾತ್ರ ಸಂಚಾರ ಮುಂದುವರಿಸಿದವು ಎಂದು ಬೆಸ್ಟ್ ವಕ್ತಾರರೊಬ್ಬರು ತಿಳಿಸಿದ್ದಾರೆ.

ಮುಂಬಯಿಯಲ್ಲಿ ಉಪನಗರ ರೈಲುಗಳ ಬಳಿಕ ಬೆಸ್ಟ್ ಎರಡನೇ ದೊಡ್ಡ ಸಾರಿಗೆ ವ್ಯವಸ್ಥೆಯಾಗಿದೆ. ಪ್ರತಿದಿನ ಮುಂಬಯಿ ಮತ್ತು ಉಪನಗರಗಳಲ್ಲಿ 25 ಲಕ್ಷ ಜನರು ಬೆಸ್ಟ್ ಬಸ್ಸುಗಳನ್ನು ದೈನಂದಿನ ಪ್ರಯಾಣಕ್ಕೆ ಅವಲಂಭಿಸಿದ್ದಾರೆ.

ಇದೇ ವೇಳೆ, ಮಹಾರಾಷ್ಟ್ರ ಸಾರಿಗೆ ಮಂತ್ರಿ ಪ್ರತಾಪ್ ಸರ್‌ನಾಯ್ಕ್ ಅವರು, ಬೆಸ್ಟ್ ಕಾರ್ಮಿಕರ ಪ್ರತಿನಿಧಿಗಳ ಜತೆ ಸರಕಾರ ಮಾತುಕತೆ ನಡೆಸಿದೆ. ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ಅವರ ಸಲಹೆಯಂತೆ ಕಾರ್ಮಿಕ ನಾಯಕರ ಜತೆಯಲ್ಲಿ ಮಾತುಕತೆ ನಡೆಸಲಾಗಿದ್ದು ಕಾರ್ಮಿಕರ ಬೇಡಿಕೆಯನ್ನು ಅನುಕಂಪದ ನೆಲೆಯಲ್ಲಿ ಪರಿಗಣಿಸಲಾಗಿದೆ. ಮುಂದಿನ 8-10 ದಿನಗಳಲ್ಲಿ ಸೂಕ್ತ ನಿರ್ಧಾರಕ್ಕೆ ಬರಲಾಗುವುದು. ಕಾರ್ಮಿಕರು ಶೀಘ್ರ ಮುಷ್ಕರ ನಿಲ್ಲಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಹೇಳಿದ್ದಾರೆ. ಮೊದಲ ದಿನ ಶೇಕಡಾ 100ರಷ್ಟು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದು ಮುಷ್ಕರ ಅತ್ಯಂತ ಯಶಸ್ವಿಯಾಗಿದೆ ಎಂದು ಕಾರ್ಮಿಕ ನಾಯಕರು ಹೇಳಿದ್ದಾರೆ.

ಮುಷ್ಕರದಲ್ಲಿ ಸಾರಿಗೆ ಮತ್ತು ವಿದ್ಯುತ್ ವಿಭಾಗದ ಕಾರ್ಮಿಕರೂ ಭಾಗವಹಿಸಿದ್ದಾರೆ. ಆದರೆ ಬಸ್ಸು ಪ್ರಯಾಣಿಕರು ಅನುಭವಿಸಿರುವ ಸಮಸ್ಯೆ ವಿದ್ಯುತ್ ಗ್ರಾಹಕರಿಗೆ ಆಗಿಲ್ಲ.

ಗುರುವಾರ ಮಧ್ಯರಾತ್ರಿ ಬೆಸ್ಟ್ ಮುಷ್ಕರ ಆರಂಭವಾಗಿದೆ. ಬೆಸ್ಟ್‌ನ 12 ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಬೆಸ್ಟ್ ಸಂಯುಕ್ತ ಕಾಮ್ಗಾರ್ ಕೃತಿ ಸಮಿತಿ ಮುಷ್ಕರಕ್ಕೆ ಕರೆ ನೀಡಿದೆ.

ಮುಷ್ಕರ ಕೈಬಿಟ್ಟು ಕರ್ತವ್ಯಕ್ಕೆ ಹಾಜರಾಗುವಂತೆ ಮತ್ತು ನಗರವನ್ನು ಅತಂತ್ರಗೊಳಿಸಬೇಡಿ ಎಂದು ವಿನಂತಿಸಿಕೊಂಡಿರುವುದಾಗಿ ಬೆಸ್ಟ್ ಅಧ್ಯಕ್ಷೆ ತೃಷ್ಣಾ ವಿಶ್ವಾಸ್‌ರಾವ್ ಹೇಳಿದ್ದಾರೆ. ಆದರೆ ಕಾರ್ಮಿಕರು ಮುಷ್ಕರ ಆರಂಭಿಸಿದ್ದು ಬೆಸ್ಟ್ ಪ್ರಯಾಣಿಕರು ಭಾರೀ ಸಮಸ್ಯೆ ಎದುರಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಬೆಸ್ಟ್ ಬಜೆಟನ್ನು ಬಿಎಂಸಿ ಬಜೆಟ್ ಜತೆ ವಿಲೀನ ಮಾಡಬೇಕು, ನಿವೃತ್ತ ನೌಕರರ ಬಾಕಿಯನ್ನು ಒಂದೇ ಹಂತದಲ್ಲಿ ನೀಡಬೇಕು, 2016-2026ರ ಅವಧಿಯಲ್ಲಿ 5ನೇ ಪುಟಕ್ಕೆ







## ಲೆಬನಾನ್‌ನಲ್ಲಿ ತೀವ್ರ ಸಂಘರ್ಷ; ಅಮೆರಿಕ - ಇರಾನ್ ಮಾತುಕತೆ ಸ್ಥಗಿತ

### ಕದನ ವಿರಾಮಕ್ಕೆ ಇಸ್ರೇಲ್ - ಹೆಜ್ಬೊಲ್ಲಾ ಒಪ್ಪಿಗೆ

ಜೆರುಸಲೆಮ್, ಜೂ.19 - ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ಮತ್ತು ಹೆಜ್ಬೊಲ್ಲಾ ನಡುವಿನ ತೀವ್ರ ಸಂಘರ್ಷದ ಬಳಿಕ ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆ ಶುಕ್ರವಾರ ರದ್ದಾಗಿದೆ ಎಂದು ಮೂವರು ಅಧಿಕಾರಿಗಳು ಹೇಳಿಕೊಂಡಿದ್ದು,ಇದು ಇರಾನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ಹೊಸ ಒಪ್ಪಂದದ ಬಗ್ಗೆ ಪ್ರಶ್ನೆ ಸೃಷ್ಟಿಯಾಗುವಂತೆ ಮಾಡಿದೆ.

ಮಾತುಕತೆ ನಡೆಯುವ ಮೊದಲು ಲೆಬನಾನ್‌ನಲ್ಲಿ ಸಂಘರ್ಷ ನಿಲ್ಲಬೇಕು ಎಂದು ಒತ್ತಾಯಿಸಿ ಇರಾನಿನ ಅಧಿಕಾರಿಗಳು ಸ್ವಿಟ್ಜರ್‌ಲ್ಯಾಂಡ್‌ಗೆ ಪ್ರಯಾಣಿಸಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದು,ಮಾತುಕತೆಯನ್ನು ಮರು ನಿಗದಿಪಡಿಸಲು ಪ್ರಯತ್ನಿಸಲು ನಡೆಯುತ್ತಿರುವ ಮಧ್ಯಸ್ಥಿಕೆಯ ಬಗ್ಗೆ ತಕ್ಷಣಕ್ಕೆ ಖಚಿತತೆಯಿಲ್ಲ.ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಕೂಡ ತಮ್ಮ ಪ್ರವಾಸವನ್ನು ರದ್ದುಗೊಳಿಸಿದರು. ಇಸ್ರೇಲ್ ಸೇನೆಯು ದಕ್ಷಿಣ ಮತ್ತು ಪೂರ್ವ ಲೆಬನಾನ್‌ನಲ್ಲಿ ರಾತ್ರಿಯಿಡೀ ತನ್ನ ಗುರಿಗಳ ಮೇಲೆ ದಾಳಿ ಮಾಡಿತು ಮತ್ತು ಹೆಜ್ಬೊಲ್ಲಾ ತೀವ್ರ ಹೋರಾಟದ ಕುರಿತು ವರದಿಯಾಗಿದೆ.ದಾಳಿಯಲ್ಲಿ ಕನಿಷ್ಠ 21 ಜನರು ಸಾವನ್ನಪ್ಪಿದ್ದಾಗಿ ಲೆಬನಾನ್‌ನ ಆರೋಗ್ಯ ಸಚಿವಾಲಯ ಹೇಳಿದೆ ಮತ್ತು ಇಸ್ರೇಲ್‌ನ ನಾಲ್ಕು ಸೈನಿಕರು ಕೂಡ ಸಾವನ್ನಪ್ಪಿದ್ದಾರೆ. 5ನೇ ಪುಟಕ್ಕೆ

## ಪಿಎಂ - ವಿಬಿಆರ್‌ವೈ ಅಡಿಯಲ್ಲಿ ಇದುವರೆಗೆ 70 ಲಕ್ಷ ಉದ್ಯೋಗ ಸೃಷ್ಟಿ; ಪ್ರಧಾನಿ ಮೋದಿ

### 15 ಲಕ್ಷ ಮೊದಲ ಬಾರಿಯ ಉದ್ಯೋಗಿಗಳಿಗೆ 2,400 ಕೋ.ರೂ ಮೌಲ್ಯದ ಪ್ರೋತ್ಸಾಹಕ ವರ್ಗಾವಣೆ

ಹೊಸದಿಲ್ಲಿ,ಜೂ.19 - ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆ (ಪಿಎಂ- ವಿಬಿಆರ್‌ವೈ) ದೇಶಾದ್ಯಂತ ಇದುವರೆಗೆ 70 ಲಕ್ಷಕ್ಕೂ ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. 15 ಲಕ್ಷ ಮೊದಲ ಬಾರಿ ಉದ್ಯೋಗಿಗಳು ಮತ್ತು ಅವರ ಉದ್ಯೋಗದಾತರಿಗೆ



2,400 ಕೋ.ರೂ ಮೌಲ್ಯದ ಪ್ರೋತ್ಸಾಹಕಗಳನ್ನು ವರ್ಗಾಯಿಸುವ ಸಂದರ್ಭ ಮೋದಿ ಈ ವಿಷಯ ಹೇಳಿದರು. ನೇರ ಪ್ರಯೋಜನ ವರ್ಗಾವಣೆಯ ಮೂಲಕ ಈ ಮೊತ್ತವನ್ನು ಫಲಾನುಭವಿಗಳಿಗೆ ವರ್ಗಾಯಿಸಲಾಗುತ್ತದೆ.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಮೋದಿ, ಸರಕಾರ, ಯುವಕರು ಮತ್ತು ಉದ್ಯಮವು ಒಟ್ಟಾಗಿ ಕೆಲಸ ಮಾಡಿದಾಗ, ಉದ್ಯೋಗ ಸೃಷ್ಟಿ ಬಹು ಪಟ್ಟು ಬೆಳೆಯುತ್ತದೆ ಎಂದು ಅವರು ಹೇಳಿದರು. ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯು 70 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿದೆ ಮತ್ತು ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಸಾಮಾಜಿಕ ಭದ್ರತಾ ರಕ್ಷಣೆಯನ್ನು ಒದಗಿಸಿದೆ ಎಂದು ಅವರು ಮಾಹಿತಿ ನೀಡಿದರು. 5ನೇ ಪುಟಕ್ಕೆ

## 10ನೆಯ ವರ್ಷದ ಪುಣ್ಯಸ್ಮರಣೆ



### ಇರ್ವತ್ತೂರು ಹೊಸಮನೆ ಶ್ರೀಮತಿ ರತ್ನ ಎಂ. ಶೆಟ್ಟಿ

(ಕೊರಂಗ್ರಪಾಡಿ ದೊಡ್ಡಮನೆ ದಿ. ಮಾಧವ ಶೆಟ್ಟಿ ಅವರ ಧರ್ಮಪತ್ನಿ)

(ಜನನ : 13.06.1927) (ನಿಧನ: 20.06.2016)

ನೀವು ನಮ್ಮನ್ನಗಲಿ ಇಂದಿಗೆ ವರುಷ ಹತ್ತು ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರಾಗಿದೆ. ಕುಟುಂಬಕ್ಕೆ ನೀವು ತೋರಿದ ಶ್ರೇಷ್ಠ ಸಂಸ್ಕಾರ, ಆದರ್ಶ ನಡೆ-ನುಡಿ, ಪ್ರೀತಿ-ಮಮತೆ, ಪರೋಪಕಾರ ಎಲ್ಲವೂ ನಮಗೆ ನಿತ್ಯ ಸ್ಮರಣೀಯ. ತಮ್ಮ ಮಾರ್ಗದರ್ಶನ, ಆಶೀರ್ವಾದ ಸದಾ ನಿರಂತರವಾಗಿರಲಿ ಎಂದು ಶಿರಬಾಗಿ ಬೇಡುತ್ತ ನಮಿಪೆವು ನಿಮ್ಮ ಪಾದಾರವಿಂದಗಳಿಗೆ ಅನವರತ...

ಮಮತ ಶಂಕರ್ ಶೆಟ್ಟಿ
ಆಶಾ ಡಾ. ಪ್ರಕಾಶ್ ಶೆಟ್ಟಿ
ಅಮ್ಮಣ್ಣಿ ಜಯರಾಜ್ ಹೆಗ್ಡೆ
ವಿಶಾಲ ರತ್ನವರ್ಮ ಹೆಗ್ಡೆ

ಸವಿತ ಸುರೇಂದ್ರ ಶೆಟ್ಟಿ
ಮಲ್ಲಿಕಾ ಪ್ರಸಾದ್ ಶೆಟ್ಟಿ
ಶಶಿ ಸುಭಾಸ್ ರೈ

GOLDFINCH
The Finest Boutique Hotel
BENGALURU | MANGALURU | MUMBAI | DELHI

MRG group
Redefining Lifestyle & Hospitality





# ಬಂಟರ ಸಂಘ ಮುಂಬಯಿ : ಸಿಟಿ ಪ್ರಾದೇಶಿಕ ಸಮಿತಿಯ ವತಿಯಿಂದ ವಿಶ್ವ ಯೋಗ ದಿನಾಚರಣೆ

# ಯೋಗವು ಮಾನಸಿಕ ಮತ್ತು ದೈಹಿಕ ದೃಢತೆಯನ್ನು ಕಾಪಾಡುತ್ತದೆ - ಪ್ರವೀಣ್ ಭೋಜ ಶೆಟ್ಟಿ





( ಚಿತ್ರ, ವರದಿ : ಗುರುದತ್ತ್ ಪೂಂಜ, ಮುಂಡ್ಕೂರು)

ಮುಂಬಯಿ, ಜೂ. 19- ಬಂಟರ ಸಂಘ ಮುಂಬಯಿ ಇದರ ಸಿಟಿ ಪ್ರಾದೇಶಿಕ ಸಮಿತಿಯ ಆಯೋಜನೆಯಲ್ಲಿ ಜೂನ್ 18 ಗುರುವಾರ ಬೆಳಿಗ್ಗೆ 10.30 ರಿಂದ ಬಂಟರ ಭವನದ ಶ್ರೀಮತಿ ರಂಜನಿ ಸುಧಾಕರ್ ಹೆಗ್ಡೆ ಎನೆಕ್ಸ್ ಕಟ್ಟಡದ ಎರಡನೇ ಮಹಡಿಯ ಶ್ರೀಮತಿ ವಿಜಯಲಕ್ಷ್ಮಿ ಮಹೇಶ್ ಶೆಟ್ಟಿ ಸಭಾಭವನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ನಡೆಯಿತು.

ಯೋಗ ಶಿಕ್ಷಣದ ಮೊದಲು ಬಂಟರ ಸಂಘದ ಅಧ್ಯಕ್ಷರಾದ ಪ್ರವೀಣ್ ಭೋಜ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು. ಸಭೆಯಲ್ಲಿ ಸಿಟಿ ಪ್ರಾದೇಶಿಕ ಸಮಿತಿಯ ಉಪಕಾರ್ಯಾಧ್ಯಕ್ಷ ಪದ್ಮನಾಭ ಎಸ್ ಶೆಟ್ಟಿ ಮತ್ತು ದಿವ್ಯ ಪಿ ಶೆಟ್ಟಿ ಅವರ ವಿವಾಹ ವಾರ್ಷಿಕೋತ್ಸವದ ಬೆಳ್ಳಿ ಹಬ್ಬ ಆಚರಣೆಯನ್ನು ಹಾಗೂ ಬಂಟರ ಸಂಘದ ಮಹಿಳಾ ವಿಭಾಗದ ಕೋಶಾಧಿಕಾರಿ ಹಾಗೂ ಸಿಟಿ ಪ್ರಾದೇಶಿಕ ಸಮಿತಿಯ ಮಾಜಿ ಕಾರ್ಯಾಧ್ಯಕ್ಷೆ ಸುಚಿತಾ ಕೆ ಶೆಟ್ಟಿಯವರ 50ನೇ ವರ್ಷದ ಹುಟ್ಟುಹಬ್ಬವನ್ನು ಮತ್ತು ಸಿಟಿ ಪ್ರಾದೇಶಿಕ ಸಮಿತಿಯ ಮಾಜಿ ಕಾರ್ಯಾಧ್ಯಕ್ಷೆ ಕಲ್ಪನಾ ಕೃಷ್ಣ ಶೆಟ್ಟಿ ಯವರ 75 ವರ್ಷದ ಹುಟ್ಟುಹಬ್ಬವನ್ನು ಆಚರಿಸಲಾಯಿತು. 25-50-75 ಎಂಬ ವಿಶೇಷ ಪರಿಕಲ್ಪನೆಯೊಂದಿಗೆ ಅವರೆಲ್ಲರನ್ನೂ ನೆನಪಿನ ಕಾಣಿಕೆಯೊಂದಿಗೆ ಗೌರವಿಸಲಾಯಿತು.

ಅಧ್ಯಕ್ಷ ಸ್ಥಾನ ವಹಿಸಿ, ದೀಪ ಪ್ರಜ್ವಲಿಸಿ ಮಾತನಾಡಿದ ಪ್ರವೀಣ್ ಭೋಜ ಶೆಟ್ಟಿಯವರು, ಯೋಗವು ಮಾನಸಿಕ ಮತ್ತು ದೈಹಿಕ ದೃಢತೆಯನ್ನು ಕಾಪಾಡುತ್ತದೆ. ಪ್ರತಿನಿತ್ಯವೂ ನಿಯಮಿತವಾಗಿ ದೇಹವನ್ನು ವ್ಯಾಯಾಮದ ಮೂಲಕ, ಯೋಗ ಮಾಡುವುದರ ಮೂಲಕ ದಂಡಿಸುವುದರಿಂದ ನಮ್ಮ ಆರೋಗ್ಯ ವೃದ್ಧಿಸುತ್ತದೆ ಹಾಗೂ ಮಾನಸಿಕವಾಗಿ ನೆಮ್ಮದಿಯನ್ನು ಪಡೆಯುತ್ತೇವೆ ಎಂದರು. ಸಿಟಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ ಪಕ್ಕಳ ಈ ವಿಶೇಷ ಪರಿಕಲ್ಪನೆ 25 -50 -75, ಸಂತಸ





ಪದ್ಮನಾಭ ಎಸ್ ಶೆಟ್ಟಿ ಮತ್ತು ದಿವ್ಯ ಪಿ ಶೆಟ್ಟಿ ಹಾಗೂ ಕಲ್ಪನಾ ಕೃಷ್ಣ ಶೆಟ್ಟಿ ಹಾಗೂ ಸುಚಿತಾ ಕೆ ಶೆಟ್ಟಿ ಅವರನ್ನು ಗೌರವಿಸಿದಾಗ

ತಂದಿದೆ. ಇಂದು ಗೌರವಿಸಲ್ಪಟ್ಟ ಪ್ರತಿಯೋರ್ವರು ಸಮಾಜಕ್ಕಾಗಿ ದುಡಿದವರು, ದುಡಿಯುತ್ತಿರುವವರು. ಮನೆ ಮನೆಯಲ್ಲಿ ಭಜನೆ ಇಂದು ಒಳ್ಳೆಯ ಕಾರ್ಯಕ್ರಮ. ಅದನ್ನು ಮುಂದುವರಿಸಿ, ನಾನು ಸದಾ ನಿಮಗೆ ಬೆಂಬಲವನ್ನು ನೀಡುತ್ತೇನೆ ಎಂದರು.

ಸಂಘದ ಉಪಾಧ್ಯಕ್ಷ ಮಹೇಶ್ ಎಸ್ ಶೆಟ್ಟಿ ಅವರು ಸಮಯೋಚಿತವಾಗಿ ಮಾತನಾಡಿ ನಾವೆಲ್ಲರೂ ನಮ್ಮ ಆರೋಗ್ಯಕ್ಕೆ ಪ್ರಥಮ ಆದ್ಯತೆ ನೀಡಬೇಕು ಎಂದು ನುಡಿದರು.

ಜಯಲಕ್ಷ್ಮಿ ಶೆಟ್ಟಿ ಅವರು ಯೋಗದಿಂದ ನಮ್ಮ ದೇಹದ ಅಂಗಾಂಗಗಳಿಗೆ ಆಗುವ ಆರೋಗ್ಯಕರ ಸಹಾಯವನ್ನು ವಿವರವಾಗಿ ತಿಳಿಸಿದರು. ಪ್ರತಿನಿತ್ಯ ಸುಲಭವಾಗಿ ನಾವು ಮಾಡಬಹುದಾದ ಕೆಲವೊಂದು ಮಾಹಿತಿಗಳನ್ನು ತಿಳಿಸಿಕೊಟ್ಟರು.

ವೇದಿಕೆಯಲ್ಲಿ ಸಂಘದ ಮಹಿಳಾ ವಿಭಾಗದ ಉಪ ಕಾರ್ಯಾಧ್ಯಕ್ಷೆ ಕವಿತಾ ಐ ಆರ್ ಶೆಟ್ಟಿ, ಸಮಿತಿಯ ಪದಾಧಿಕಾರಿಗಳಾದ ಪದ್ಮನಾಭ ಶೆಟ್ಟಿ, ಸುರೇಂದ್ರ ಶೆಟ್ಟಿ ಮಾರ್ನಾಡು, ನಿತೇಶ್ ಶೆಟ್ಟಿ, ಕೇಶವ ಶೆಟ್ಟಿ,ಮತ್ತು ಜ್ಯೋತಿ ಎಸ್ ಶೆಟ್ಟಿ ಮೊದಲಾದವರು ಉಪಸ್ಥಿತರಿದ್ದರು.

ಕೃಷ್ಣ ವಿ ಶೆಟ್ಟಿ, ಪ್ರಸಾದ್ ಶೆಟ್ಟಿ ಅಂಗಡಿ ಗುತ್ತು, ಆಶಾ ಸುಧೀರ್‌ಶೆಟ್ಟಿ,ಸುಜಯ ಆರ್‌ಶೆಟ್ಟಿ, ಕಲ್ಪನಾ ಕೆ ಶೆಟ್ಟಿ ಯವರು ದೀಪ ಪ್ರಜ್ವಲನೆಗೆ ಜೊತೆಯಾದರು.

ಸಿಟಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಅಶೋಕ ಪಕ್ಕಳರು ಪ್ರಸ್ತಾವಿಕವಾಗಿ ಮಾತನಾಡಿ, ವೇದಿಕೆಯ ಗಣ್ಯರೆಲ್ಲರನ್ನೂ, ನೆರೆದಿರುವ ಸದಸ್ಯರೆಲ್ಲರನ್ನು ಸ್ವಾಗತಿಸಿ ಗೌರವಿಸಿದರು. ಕಾರ್ಯದರ್ಶಿ ಸುರೇಂದ್ರ ಮಾರ್ನಾಡ್‌ರವರು ಕಾರ್ಯಕ್ರಮ ನಿರ್ವಹಿಸಿದರು. ಶೋಭಾ ಶೆಟ್ಟಿಯವರು ಪ್ರಾರ್ಥನೆಗೈದರು.

ಯೋಗ ಶಿಕ್ಷಕರಾದ ಯಶೋದಾ ಶೆಟ್ಟಿ ಮತ್ತು ತಂಡದವರು ಒಂದೂವರೆ ಗಂಟೆಗಳ ಕಾಲ ಯೋಗ ಶಿಕ್ಷಣ ಹೇಳಿಕೊಟ್ಟರು. ಬಹಳ ಶಿಸ್ತು ಬದ್ಧವಾಗಿ ನಡೆದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಪ್ರೀತಿ ಭೋಜನದೊಂದಿಗೆ ಸಮಾಪ್ತಿಯಾಯಿತು.

# ಬಂಟರ ಸಂಘ ಪುಣೆ ಯುವ ವಿಭಾಗ : ವನ ಮಹೋತ್ಸವ ಆಚರಣೆ

## ಪ್ರಕೃತಿ ಮತ್ತು ಪರಿಸರ ಜಾಗೃತಿ ಮೂಡಿಸುವ ಕಾರ್ಯಕ್ರಮ ನಿರಂತರವಾಗಿರಲಿ - ಅಜಿತ್ ಹೆಗ್ಡೆ



ನಾವೆಲ್ಲರೂ ಪ್ರಕೃತಿಯ ಆರಾಧಕರು. ಪ್ರಕೃತಿ ಪ್ರೇಮ, ಪ್ರಕೃತಿ ರಕ್ಷಣೆ ಮತ್ತು ಪೂಜಿಸುವುದು ನಮ್ಮ ಕರ್ತವ್ಯ ಕೂಡಾ ಹೌದು. ಮರಗಿಡ ನೆಟ್ಟು ಬೆಳೆಸುವ ಕಾಳಜಿ ನಮ್ಮಲ್ಲಿರಬೇಕು. ಪ್ರಕೃತಿ ನಮ್ಮ ಜೀವ ಪೋಷಕ, ಜೀವ ರಕ್ಷಕ. ಇದೆಲ್ಲದರ ಮಹತ್ವವನ್ನು ಅರಿಯಬೇಕು. ಭೂಮಿಯಲ್ಲಿಯ ತೇವಾಂಶ ಭರಿತ ಜಾಗ ಆರಿಸಿ ಮರ ಬೆಳೆಸಿ ರಕ್ಷಣೆ ಪೋಷಣೆ ನೀಡಿದರೆ ಅರಣ್ಯ ಸಂಪತ್ತು ಯಥೇಚ್ಛವಾಗಿ ಬೆಳೆಯಲು ಸಾಧ್ಯ. ಇದಕ್ಕೆ ಪ್ರಾಮಾಣಿಕ ಬದ್ಧತೆ ಬೇಕು. ಪ್ರಕೃತಿ ರಕ್ಷಣೆ ಕೂಡಾ ಹಾಗೂ ದೇಶ ರಕ್ಷಣೆ ಕೂಡಾ ನಮ್ಮಿಂದಲೇ ಆಗಬೇಕು. ಉದ್ಯಮ ಕ್ಷೇತ್ರದಲ್ಲಿ ಸಾಧನೆ ಮಾಡಿದ ಪುಣೆಯ ಬಂಟರ ಸಮಾಜ ಪ್ರಕೃತಿ ಮೇಲಿನ ಪ್ರೀತಿ ಕಾಳಜಿಯಿಂದ ಪ್ರೇರಣಾ ದಾಯಕ ಈ ವನ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಿ ಪ್ರಕೃತಿಗೆ ತಮ್ಮ ಕೊಡುಗೆಯನ್ನು ನೀಡಿದ್ದಿರಿ. ನಿಮ್ಮನ್ನು ಅಭಿನಂದಿಸುತ್ತೇನೆ. **- ಭೀಮ್ ರಾವ್ ತಾಪ್ಕಿರ್ (ಶಾಸಕ : ಖಡಕ್‌ವಾಸ್ಲ ವಿಧಾನಸಭಾ ಕ್ಷೇತ್ರ ಮಹರಾಷ್ಟ್ರ)**

ಪ್ರಕೃತಿಯನ್ನು ಕಾಪಾಡುವುದರ ಜೊತೆಯಲ್ಲಿ ಪ್ರಕೃತಿಯನ್ನು ಬೆಳೆಸುವ ಕಾರ್ಯವನ್ನು ನಾವು ಮಾಡಬೇಕು. ಪ್ರಕೃತಿಯಿಂದಲೇ ನಮ್ಮ ಜೀವನ ಆರೋಗ್ಯಪೂರ್ಣವಾಗಿರುತ್ತದೆ. ನಮ್ಮ ಸಂಘದ ಯುವ ವಿಭಾಗದ ಕಾರ್ಯಾಧ್ಯಕ್ಷ ಅಭಿನಂದನ್ ಶೆಟ್ಟಿ ಮತ್ತು ಅವರ ಎಲ್ಲಾ ಸದಸ್ಯರು ಕೈಗೊಳ್ಳುವ ಕಾರ್ಯಕ್ರಮಗಳಿಗೆ ನಾವು ಬೆನ್ನೆಲುಬಾಗಿ ನಿಂತು ಸಹಕರಿಸಬೇಕು. ನಮ್ಮ ಅಧ್ಯಕ್ಷ ಅಜಿತ್ ಹೆಗ್ಡೆ ಯವರ ಅಮೂಲ್ಯವಾದ ಮಾರ್ಗದರ್ಶನದಲ್ಲಿ, ಮಹಿಳಾ ವಿಭಾಗ, ದಕ್ಷಿಣ, ಉತ್ತರ, ಪೂರ್ವ, ಪಶ್ಚಿಮ ಪ್ರಾದೇಶಿಕ ಸಮಿತಿಗಳ ಸದಸ್ಯರು ಇಲ್ಲಿ ಸೇರಿದ್ದಾರೆ. ಸಂಪೂರ್ಣ ಸಹಕಾರ ಮತ್ತು ಉತ್ಸಾಹಭರಿತವಾಗಿ ಭಾಗವಹಿಸುವಿಕೆಯೊಂದಿಗೆ ನಾವು ಈ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ. ಇಂತಹ ಕಾರ್ಯಕ್ರಮಗಳಿಗೆ ಪ್ರತಿಯೊಬ್ಬರ ಕೊಡುಗೆ ಬಹಳಷ್ಟಿದೆ. ಭವಿಷ್ಯದ ಪೀಳಿಗೆಗೆ ಪ್ರಕೃತಿಯನ್ನು ಕಾಪಾಡುವ ಕಡೆಗೆ ನಮ್ಮ ಸಾಮೂಹಿಕ ಜವಾಬ್ದಾರಿಯನ್ನು ತೋರಿಸಿದ್ದೇವೆ. ಅಭಿನಂದನ್ ಮತ್ತು ತಂಡದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. **- ಶಮ್ಮಿ ಎ. ಹೆಗ್ಡೆ (ಕಾರ್ಯಾಧ್ಯಕ್ಷೆ : ಮಹಿಳಾ ವಿಭಾಗ ಬಂಟರ ಸಂಘ ಪುಣೆ)**

ನಮ್ಮ ಟ್ರೀ ಪ್ಲಾಂಟೇಶನ್ ಡ್ರೈವ್‌ನ್ನು ನಾವು ಪ್ರಕೃತಿಯನ್ನು ಮತ್ತಷ್ಟು ಹಚ್ಚ ಹಸುರಾಗಿ ಮಾಡುವ ಕಾಳಜಿಯೊಂದಿಗೆ ಆಚರಿಸಿಕೊಂಡು ಬರುತಿದ್ದೇವೆ. ನಾವು ಮಳೆಯ ಕಾರಣದಿಂದ ಈ ಬಾರಿ ಸ್ವಲ್ಪ ತಡವಾಗಿ ವನ ಮಹೋತ್ಸವ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಇಂದಿನ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿ ನಗರ ಸೇವಕ ಭೀಮ್ ರಾವ್ ತಾಪ್ಕಿರ್ ಬಂದು ಗಿಡ ನೆಡುವ ಮೂಲಕ ಕಾರ್ಯಕ್ರಮನ್ನು ಉದ್ಘಾಟಿಸಿದ್ದಾರೆ.ನಮ್ಮ ಗೌರವಾಧ್ಯಕ್ಷರಾದ ಸಂತೋಷ್ ಶೆಟ್ಟಿ ಯವರ ಮಾರ್ಗದರ್ಶನ ಮತ್ತು ಅಧ್ಯಕ್ಷರಾದ ಅಜಿತ್ ಹೆಗ್ಡೆ ಯವರು ಇಲ್ಲಿ ಬಂದು ನಮ್ಮೊಂದಿಗೆ ಇದ್ದು ಸಲಹೆ ಸೂಚನೆ ನೀಡಿ ಸಹಕರಿಸಿದ್ದಾರೆ,ಹಾಗೆಯೇ ಮಹಿಳಾ ವಿಬಾಗದ ಕಾರ್ಯಾಧ್ಯಕ್ಷೆ ಶಮ್ಮಿ ಎ ಹೆಗ್ಡೆ,ಉಪ ಕಾರ್ಯಾಧ್ಯಕ್ಷೆ ದಿವ್ಯಾ ಎಸ್.ಶೆಟ್ಟಿ ಪ್ರಾದೇಶಿಕ ಸಮಿತಿಗಳ ಕಾರ್ಯಾಧ್ಯಕ್ಷರುಗಳು ಯುವ ವಿಬಾಗದ ಸದಸ್ಯರುಗಳು ಸಹಕಾರ ನೀಡಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದ್ದಾರೆ. ಸುಮಾರು 50ಕ್ಕೂ ಹೆಚ್ಚಿನ ಗಿಡಗಳನ್ನು ನೆಟ್ಟು ಹಾಗೆಯೇ ಸುಮಾರು 30ಕ್ಕೂ ಮಿಕ್ಕಿದ ಗಿಡಗಳನ್ನು ನೀಡಿದ್ದೇವೆ. ಸಹಕರಿಸಿದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸುತ್ತೇನೆ.
**- ಅಭಿನಂದನ್ ಶೆಟ್ಟಿ (ಕಾರ್ಯಾಧ್ಯಕ್ಷ : ಯುವ ವಿಭಾಗ ಬಂಟರ ಸಂಘ ಪುಣೆ)**

(ಚಿತ್ರ, ವರದಿ : ಹರೀಶ್ ಮೂಡುಬಿದ್ರಿ)

ಪುಣೆ, ಜೂ. 19- ಇಂದಿನ ನಗರಾಭಿವೃದ್ಧಿ, ಕೈಗಾರಿಕೋದ್ಯಮದಿಂದ ಹಾಗೂ ಇಂದಿನ ಜನರ ಜೀವನ ಶೈಲಿಯಿಂದ ಪ್ರಕೃತಿ ನಷ್ಟವಾಗುತಿದೆ. ಆದರೆ ನಮ್ಮ ದೇಹಕ್ಕೆ ಬೇಕಾಗುವ ಆಮ್ಲಜನಕ ಪ್ರಕೃತಿಯಿಂದಲೇ ಬರಬೇಕು. ಗಿಡ ಮರ ನೆಟ್ಟು ಬೆಳೆಸಿದರೆ ಮಾತ್ರ ಇದು ಸಿಗಲು ಸಾಧ್ಯ. ಈ ನಿಟ್ಟಿನಲ್ಲಿ ಪ್ರಕೃತಿ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ ಎಂದು ಅರಿತು ಪ್ರಕೃತಿ ಬೆಳೆಸುವಲ್ಲಿ ನಮ್ಮ ಕಿಂಚಿತ್ತೂ ಕಾರ್ಯವನ್ನಾದರು ಮಾಡಬೇಕು. ಸಂಘದ ಯುವ ವಿಭಾಗದ ಕಾರ್ಯಾಧ್ಯಕ್ಷ ಅಭಿನಂದನ್ ಶೆಟ್ಟಿ ಮತ್ತು ಸದಸ್ಯರಿಂದ ಪ್ರಕೃತಿಯ ಬಗ್ಗೆ ಇರುವ ಸಾಮಾನ್ಯ ಚಿಂತನೆಯಿಂದ ಅರ್ಥಪೂರ್ಣವಾದ ಕಾರ್ಯಕ್ರಮವನ್ನು ಇಲ್ಲಿ ಆಯೋಜಿಸಿದ್ದಾರೆ. ಪ್ರಕೃತಿಗೆ ಕೊಡುಗೆ ನೀಡಲು ಪ್ರತಿಯೊಬ್ಬರೂ ತಮ್ಮ ಶಕ್ತಿ ಮತ್ತು ಉದಾತ್ತ ಮನೋಭಾವದಿಂದ ಒಗ್ಗೂಡಿ ತಮ್ಮ ಕರ್ತವ್ಯವನ್ನು ಮಾಡಿ ತೋರಿಸಿದ್ದಾರೆ. ಭವಿಷ್ಯದ ಪೀಳಿಗೆಗೆ ಪ್ರಕೃತಿಯನ್ನು ಕಾಪಾಡುವ ಕಡೆಗೆ ನಮ್ಮ ಸಾಮೂಹಿಕ ಜವಾಬ್ದಾರಿಯನ್ನು ತೋರಿಸೋಣ. ಪರಿಸರ ಜಾಗೃತಿ ಮೂಡಿಸಲು ಶ್ರಮಿಸಬೇಕು. ನಮ್ಮ ಸಂಘದ ಎಲ್ಲಾ ವಿಭಾಗದವರ ಸಹಕಾರ ಯುವ ವಿಭಾಗದ ಜೊತೆಯಲ್ಲಿ ಇದೆ. ಮುಂದೆಯೂ ಉತ್ತಮ ಕಾರ್ಯಗಳು ಆಗುತಿರಲಿ ಎಂದು ಪುಣೆ ಬಂಟರ ಸಂಘದ ಅಧ್ಯಕ್ಷ ಅಜಿತ್ ಹೆಗ್ಡೆ ಕೆಂಜಾರು ಗುತ್ತು ನುಡಿದರು.

ಪುಣೆ ಬಂಟರ ಸಂಘದ ಯುವ ವಿಭಾಗದ ವತಿಯಿಂದ ಜೂನ್. 13ರ ಶನಿವಾರದಂದು ಪುಣೆಯ ದನಕವಾಡಿಯ ತಲ್ಜಾಯಿ ಹಿಲ್ಸ್‌ನಲ್ಲಿಯ ಟ್ರೀ ಪ್ಲಾಂಟೇಶನ್ ಡ್ರೈವ್ ಎಂಬ ಕಾರ್ಯಕ್ರಮದಡಿಯಲ್ಲಿ ವನ ಮಹೋತ್ಸವವನ್ನು ಆಚರಿಸಲಾಯಿತು. ಯುವ ವಿಭಾಗದ ಕಾರ್ಯಾಧ್ಯಕ್ಷ ಅಭಿನಂದನ್ ಶೆಟ್ಟಿ ಮುಂದಾಳತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಪುಣೆ ಬಂಟರ ಸಂಘದ ಗೌರವಾಧ್ಯಕ್ಷ ಸಂತೋಷ್ ಶೆಟ್ಟಿ ಇನ್ನ ಕುರ್ಕಿಲ್‌ಬೆಟ್ಟು ಬಾಳಿಕೆ ಮಾರ್ಗದರ್ಶನದಲ್ಲಿ, ಅಧ್ಯಕ್ಷ ಅಜಿತ್ ಹೆಗ್ಡೆ ಕೆಂಜಾರು ಗುತ್ತು ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯ ಅತಿಥಿಯಾಗಿ ಮಹರಾಷ್ಟ್ರ ವಿಧಾನಸಭಾ ಖಡಕ್ ವಾಸ್ಲ ಕ್ಷೇತ್ರದ ಶಾಸಕ ಭೀಮ್ ರಾವ್ ತಾಪ್ಕೀರ್ ಆಗಮಿಸಿ ಟ್ರೀ ಪ್ಲಾಂಟೇಶನ್ ಡ್ರೈವ್‌ನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಪುಣೆ ಬಂಟರ ಸಂಘದ ಕೋಶಾಧಿಕಾರಿ ಪ್ರಶಾಂತ್ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶಮ್ಮಿ ಎ. ಹೆಗ್ಡೆ, ಸಮಿತಿ ಪದಾಧಿಕಾರಿಗಳಾದ ಶೇಖರ್ ಸಿ. ಶೆಟ್ಟಿ, ವಿವೇಕಾನಂದ ಶೆಟ್ಟಿ, ದಕ್ಷಿಣ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಸುಧಾಕರ್ ಸಿ. ಶೆಟ್ಟಿ, ಉತ್ತರ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ನಾರಾಯಣ ಹೆಗ್ಡೆ, ಯುವ ವಿಭಾಗದ ನಿಕಟಪೂರ್ವ ಕಾರ್ಯಾಧ್ಯಕ್ಷ ಉದಯ ಶೆಟ್ಟಿ, ಸಂಪತ್ ಶೆಟ್ಟಿ, ಕಾತ್ರಜ್ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷ ಜಗದೀಶ್ ಶೆಟ್ಟಿ, ಮಹಿಳಾ ವಿಭಾಗದ ಉಪ ಕಾರ್ಯಾಧ್ಯಕ್ಷೆ ದಿವ್ಯಾ ಎಸ್. ಶೆಟ್ಟಿ, ಕೋಶಾಧಿಕಾರಿ ವೀಣಾ ಪಿ. ಶೆಟ್ಟಿ, ದಕ್ಷಿಣ ಪ್ರಾದೇಶಿಕ ಸಮಿತಿ ಕಾರ್ಯಾಧ್ಯಕ್ಷೆ ವಿನೋದಾ ಶೆಟ್ಟಿ, ಪೂರ್ವ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷೆ ಪ್ರೇಮಾ ಆರ್. ಶೆಟ್ಟಿ ಮತ್ತು ವಿವಿಧ ಸಮಿತಿಯ ಪದಾಧಿಕಾರಿಗಳು, ಯುವ ವಿಭಾಗದ ಹೆಚ್ಚಿನ ಸಂಖ್ಯೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಭಿನಂದನ್ ಶೆಟ್ಟಿ ಮತ್ತು ಯುವ ವಿಭಾಗದ ಪದಾಧಿಕಾರಿಗಳು ಮುಖ್ಯ ಅತಿಥಿ ಭೀಮ್ ರಾವ್ ತಾಪ್ಕೀರ್, ಅಧ್ಯಕ್ಷ ಅಜಿತ್ ಹೆಗ್ಡೆ, ಮಹಿಳಾ ಕಾರ್ಯಾಧ್ಯಕ್ಷೆ ಶಮ್ಮಿ ಹೆಗ್ಡೆ ಯವರಿಗೆ ಗಿಡ ನೀಡಿ ವನ ಮಹೋತ್ಸವಕ್ಕೆ ಚಾಲನೆ ನೀಡಿದರು ಮತ್ತು ಶಾಲು ಹೊದಿಸಿ ಗೌರವಿಸಿದರು. ನಂತರ ಸೇರಿದ ಎಲ್ಲರೂ ವಿವಿಧ ಜಾತಿಯ ಗಿಡಗಳನ್ನು ನೆಟ್ಟು ನೀರೆರೆದರು.

# ಬಂಟರ ಸಂಘ ಮುಂಬಯಿ : ಭಿವಂಡಿ-ಬದ್ಲಾಪುರ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ

## ಜೂ.21 ರಂದು ಯೋಗ ದಿನಾಚರಣೆ, ರಕ್ತದಾನ ಶಿಬಿರ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮ



ಪ್ರವೀಣ್ ಶೆಟ್ಟಿ, ಡಾ. ದಿವಾಕರ ಶೆಟ್ಟಿ, ಸುಬೋಧ್ ಭಂಡಾರಿ, ಸುಕುಮಾರ್ ಶೆಟ್ಟಿ, ಸಂತೋಷ್ ಶೆಟ್ಟಿ, ಡಾ। ಸ್ವರೂಪ್ ಹೆಗ್ಡೆ, ಶೋಭಾ ಶೆಟ್ಟಿ, ಸುಶಾಂತ್ ಶೆಟ್ಟಿ, ವಿದುಲಾ ಶೆಟ್ಟಿ, ಡಾ। ಪೂಜಾ ಶೆಟ್ಟಿ

ಕಲ್ಯಾಣ್, ಜೂ. 19- ಭಿವಂಡಿ, ಕಲ್ಯಾಣ್, ಉಲ್ಲಾಸನಗರ, ಅಂಬರ್‌ನಾಥ್, ಬದ್ಲಾಪುರ ಪರಿಸರದ ಬಂಟ ಬಾಂಧವರನ್ನು ಒಗ್ಗೂಡಿಸುವ ಕಾರ್ಯವನ್ನು ಮಾಡುತ್ತಿರುವ ಬಂಟರ ಸಂಘ ಮುಂಬಯಿಯ ಭಿವಂಡಿ-ಬದ್ಲಾಪುರ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಜೂ. 21ರ ಭಾನುವಾರದಂದು ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಸುಬೋಧ್ ಭಂಡಾರಿ ಮುಂದಾಳುತ್ವದಲ್ಲಿ ಪ್ರಾದೇಶಿಕ ಸಮಿತಿಯ ಸಮನ್ವಯಕ ಸುಕುಮಾರ ಶೆಟ್ಟಿ ಮಾರ್ಗದರ್ಶನದಲ್ಲಿ ಸಮಾಜ ಬಾಂಧವರ ಏಳಿಗೆಗಾಗಿ ಮೂರು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದೆ.

ಅಂದು ಬೆಳಿಗ್ಗೆ 8:30 ರಿಂದ 9:30ರ ತನಕ ವಿಠಲವಾಡಿ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಪ್ರವೀಣ್ ಇಂಟರ್‌ನ್ಯಾಷನಲ್ ಹೋಟೆಲ್ ಸಭಾಗೃಹದಲ್ಲಿ ಮಹಿಳಾ ವಿಭಾಗದ ಅಧ್ಯಕ್ಷೆ ಚಿತ್ರಾ ಶೆಟ್ಟಿ ಮತ್ತು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷೆ ಶೋಭಾ ಅರುಣ್ ಶೆಟ್ಟಿ ಮುಂದಾಳುತ್ವದಲ್ಲಿ ಮಹಿಳಾ ವಿಭಾಗದ ವತಿಯಿಂದ ಯೋಗ ದಿನಾಚರಣೆ ಕಾರ್ಯಕ್ರಮ ಜರಗಲಿದ್ದು ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವಿದುಲಾ ಶೆಟ್ಟಿ ಉಪಸ್ಥಿತರಿರುವರು.

ಬೆಳಿಗ್ಗೆ 10:00 ಗಂಟೆಗೆ ಸರಿಯಾಗಿ ಪ್ರಾದೇಶಿಕ ಸಮಿತಿಯ ಯುವ ವಿಭಾಗದ ವತಿಯಿಂದ ಮತ್ತು ಬಂಟ್ಸ್ ಹೆಲ್ತ್ ಕೇರ್ ಸಮಿತಿಯ ಜಂಟಿ ಆಯೋಜನೆಯಲ್ಲಿ ಹೆಲ್ತ್ ಕೇರ್ ಸಮಿತಿಯ ಕಾರ್ಯಾಧ್ಯಕ್ಷ ಡಾ। ಸ್ವರೂಪ್ ಹೆಗ್ಡೆ ಮತ್ತು ಪ್ರಾದೇಶಿಕ ಸಮಿತಿಯ ಅರೋಗ್ಯ ಸಮಿತಿಯ ಕಾರ್ಯಾಧ್ಯಕ್ಷೆ ಡಾ। ಪೂಜಾ ಎಸ್. ಶೆಟ್ಟಿ ಮಾರ್ಗದರ್ಶನದಲ್ಲಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಶುಶಾಂತ್ ಶೆಟ್ಟಿ ಮುಂದಾಳುತ್ವದಲ್ಲಿ ರಕ್ತದಾನ ಶಿಬಿರ ಮತ್ತು ಆರೋಗ್ಯ ತಪಾಸಣೆ ಕ್ಯಾಂಪ್ ನಡೆಯಲಿದೆ.

ಮಧ್ಯಾಹ್ನ 12:30ಕ್ಕೆ ಸರಿಯಾಗಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಡಾ. ದಿವಾಕರ ಟಿ. ಶೆಟ್ಟಿ ಇಂದ್ರಾಳಿ ಮತ್ತು ಪ್ರಾದೇಶಿಕ ಸಮಿತಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸಂತೋಷ್ ಎಚ್. ಶೆಟ್ಟಿ ಮಾರ್ಗದರ್ಶನದಲ್ಲಿ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಹಾಯವನ್ನು ನೀಡಲಾಗುವುದು ಹಾಗೂ ಹಿರಿಯ ನಾಗರಿಕ ವೆಲ್ಫೇರ್ ಸಮಿತಿಯ ವತಿಯಿಂದ ಹಿರಿಯ ನಾಗರಿಕ ವಿಠಲ್ ಎನ್. ಶೆಟ್ಟಿ ಮತ್ತು ಕುಮಾರಿ ವಿಠಲ್ ಶೆಟ್ಟಿ ದಂಪತಿ ಮತ್ತು ವಿನೋದಾ ಸಾಧು ಶೆಟ್ಟಿ ಅವರನ್ನು ಸನ್ಮಾನಿಸಲಾಗುವುದು.

ಈ ಕಾರ್ಯಕ್ರಮವು ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಬಿ. ಶೆಟ್ಟಿ ಅಧ್ಯಕ್ಷತೆಯಲ್ಲಿ ಮತ್ತು ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ಸುಬೋಧ್ ಭಂಡಾರಿ ನೇತೃತ್ವದಲ್ಲಿ ನಡೆಯಲಿದೆ.

ಸಮಾಜ ಬಾಂಧವರ ಏಳಿಗೆಗಾಗಿ ನಡೆಯಲಿರುವ ಯೋಗ ದಿನಾಚರಣೆ, ಆರೋಗ್ಯ ಶಿಬಿರ ಮತ್ತು ರಕ್ತದಾನ ಶಿಬಿರ, ಸಮಾಜ ಕಲ್ಯಾಣ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಸಮಾಜ ಬಾಂಧವರು ಉಪಸ್ಥಿತರಿದ್ದು ಇದರ ಲಾಭವನ್ನು ಪಡೆಯಬೇಕೆಂದು ಬಂಟರ ಸಂಘದ ಉಪಾಧ್ಯಕ್ಷ ಮಹೇಶ್ ಎಸ್. ಶೆಟ್ಟಿ, ಕಾರ್ಯದರ್ಶಿ ಡಾ. ಆರ್. ಕೆ. ಶೆಟ್ಟಿ, ಕೋಶಾಧಿಕಾರಿ ಸಿಎ ರಮೇಶ್ ಬಿ. ಶೆಟ್ಟಿ, ಜೊತೆ ಕಾರ್ಯದರ್ಶಿ ಗಿರೀಶ್ ಶೆಟ್ಟಿ ತೆಳ್ಳಾರ್, ಜೊತೆ ಕೋಶಾಧಿಕಾರಿ ಶಶಿಧರ್ ಶೆಟ್ಟಿ ಇನ್ನಂಜೆ, ಯುವ ವಿಭಾಗದ ಕಾರ್ಯಾಧ್ಯಕ್ಷ ಸವೀನ್ ಜೆ. ಶೆಟ್ಟಿ, ಪ್ರಾದೇಶಿಕ ಸಮಿತಿಯ ಪರವಾಗಿ ಸಂಚಾಲಕ ರವೀಂದ್ರ ವೈ. ಶೆಟ್ಟಿ, ಉಪ ಕಾರ್ಯಾಧ್ಯಕ್ಷ ಪ್ರಕಾಶ್ ಆರ್. ಶೆಟ್ಟಿ, ಕಾರ್ಯದರ್ಶಿ ಹರೀಶ್ ಶೆಟ್ಟಿ, ಕೋಶಾಧಿಕಾರಿ ಸುಧೀರ್ ಜೆ. ಶೆಟ್ಟಿ, ಜೊತೆ ಕಾರ್ಯದರ್ಶಿ ದಯಾನಂದ ವಿ. ಶೆಟ್ಟಿ, ಜೊತೆ ಕೋಶಾಧಿಕಾರಿ ನಾಗಕಿರಣ್ ಶೆಟ್ಟಿ, ಸಮಾಜ ಕಲ್ಯಾಣ ಸಮಿತಿಯ ಉಪ ಕಾರ್ಯಾಧ್ಯಕ್ಷ ಸುರೇಂದ್ರ ಟಿ. ಶೆಟ್ಟಿ, ಮಹಿಳಾ ವಿಭಾಗದ ಉಪ ಕಾರ್ಯಾಧ್ಯಕ್ಷೆ ಜಯಶ್ರೀ ಎಚ್. ಶೆಟ್ಟಿ, ಕಾರ್ಯದರ್ಶಿ ಪ್ರಮೀತಾ ಆರ್. ಶೆಟ್ಟಿ, ಕೋಶಾಧಿಕಾರಿ ಕವಿತಾ ಎನ್. ಶೆಟ್ಟಿ, ಜೊತೆ ಕಾರ್ಯದರ್ಶಿ ಯಶೋಧಾ ಎಸ್. ಶೆಟ್ಟಿ, ಜೊತೆ ಕೋಶಾಧಿಕಾರಿ ಮಹಾಲಕ್ಷ್ಮೀ ಎಸ್. ರೈ, ಯುವ ವಿಭಾಗದ ಉಪ ಕಾರ್ಯಾಧ್ಯಕ್ಷ ಪ್ರಣಯ್ ಪಿ. ರೈ, ಕಾರ್ಯದರ್ಶಿ ಶ್ರದ್ಧಾ ವಿ. ಆಳ್ವ, ಕೋಶಾಧಿಕಾರಿ ಪ್ರೇಕ್ಷಾ ಬಿ. ಶೆಟ್ಟಿ, ಜೊತೆ ಕಾರ್ಯದರ್ಶಿ ಸುದರ್ಶನ್ ಶೆಟ್ಟಿ, ಜೊತೆ ಕೋಶಾಧಿಕಾರಿ ಸುಶಾಂಕ್ ಬಿ. ಶೆಟ್ಟಿ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಬಂಟರ ಸಂಘ ಪುಣೆ : ಜೂ.21 ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ



ಸಂತೋಷ್ ಶೆಟ್ಟಿ, ಅಜಿತ್ ಹೆಗ್ಡೆ, ಶಮ್ಮಿ ಹೆಗ್ಡೆ, ಪ್ರಮೀಳಾ ಶೆಟ್ಟಿ

ಪುಣೆ, ಜೂ. 19- ಬಂಟರ ಸಂಘ ಪುಣೆಯ ಸಮಾಜ ಕಲ್ಯಾಣ ಕಲ್ಪವೃಕ್ಷ ಕ್ರೀಡಾದಾತ ಯೋಜನೆಯ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಜೂ. 21ರವಿವಾರ ಬೆಳಿಗ್ಗೆ ಗಂಟೆ 9:00ರಿಂದ ಬಂಟರ ಭವನದ ಬ್ಯಾಂಕ್ವೇಟ್ ಹಾಲ್‌ನಲ್ಲಿ ನಡೆಯಲಿದೆ. ಪುಣೆಯ ಶೆಟ್ಟಿ ಯೋಗ ಕ್ಲಾಸ್‌ನ ನಿರ್ದೇಶಕಿ ಪ್ರಮೀಳಾ ಜೆ. ಶೆಟ್ಟಿ, ಈ ಯೋಗ ದಿನಾಚರಣೆಯನ್ನು ನಡೆಸಿಕೊಡಲಿದ್ದಾರೆ.

ಬಂಟರ ಸಂಘ, ಮಹಿಳಾ ವಿಭಾಗ, ಯುವ ವಿಭಾಗ ಹಾಗೂ ಪ್ರಾದೇಶಿಕ ಸಮಿತಿಗಳ ಸಂಯುಕ್ತ ಕೂಡುವಿಕೆಯಲ್ಲಿ ನಡೆಯಲಿರುವ ಈ ಯೋಗ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯ ಸಮಾಜದ ಬಾಂಧವರು ಪಾಲ್ಗೊಳ್ಳುವಂತೆ ಪುಣೆ ಬಂಟರ ಸಂಘದ ಗೌರವಾಧ್ಯಕ್ಷ ಸಂತೋಷ್ ಶೆಟ್ಟಿ ಇನ್ನ ಕುರ್ಕಿಲ್ ಬೆಟ್ಟು ಬಾಳಿಕೆ, ಅಧ್ಯಕ್ಷ ಅಜಿತ್ ಹೆಗ್ಡೆ, ಪ್ರಧಾನ ಕಾರ್ಯದರ್ಶಿ ಸುಧೀರ್ ಶೆಟ್ಟಿ ಕಣಂಜಾರು, ಕ್ರೀಡಾ ಕಾರ್ಯಾಧ್ಯಕ್ಷ ವಿವೇಕಾನಂದ ಶೆಟ್ಟಿ ಅರ್ವರ್, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಶಮ್ಮಿ ಎ. ಹೆಗ್ಡೆ, ಯುವ ವಿಭಾಗದ ಕಾರ್ಯಾಧ್ಯಕ್ಷ ಅಭಿನಂದನ್ ಶೆಟ್ಟಿ ಹಾಗೂ ಸಮಿತಿ ಪದಾಧಿಕಾರಿಗಳು, ದಕ್ಷಿಣ, ಉತ್ತರ,ಪೂರ್ವ, ಪಶ್ಚಿಮ ಪ್ರಾದೇಶಿಕ ಸಮಿತಿಗಳ ಕಾರ್ಯಾಧ್ಯಕ್ಷರುಗಳು ಮಹಿಳಾ ಕಾರ್ಯಾಧ್ಯಕ್ಷೆಯರುಗಳು ಹಾಗೂ ಸಮಿತಿ ಪದಾಧಿಕಾರಿಗಳು ವಿನಂತಿಸಿಕೊಂಡಿರುತ್ತಾರೆ.

# ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್, ಮುಂಬಯಿ :

## ಜೂ.21 ರಂದು ಯೋಗ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮುಂಬಯಿ, ಜೂ.19- ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್ (ರಿ.), ಮುಂಬೈ ಇದರ ವತಿಯಿಂದ ಜೂನ್ 21ರ ರವಿವಾರದಂದು ಅಂತಾರಾಷ್ಟ್ರೀಯ ಯೋಗ ದಿವಸದ ಅಂಗವಾಗಿ ಉಚಿತ ಯೋಗ ಹಾಗೂ ಆರೋಗ್ಯ ತಪಾಸಣಾ ಶಿಬಿರಗಳನ್ನು ಸಂಘದ ಪ್ರಿಯಾ ವಿಶ್ವಕರ್ಮ ಸಭಾ ಭವನ, 16 ಎ ಹಿಲ್ ವೀಲ್ ಸೊಸೈಟಿ, ಸಾಯಿ ಕೃಪಾ ಕಾಂಪ್ಲೆಕ್ಸ್, ಕಾಶಿಗಾಂವ್, ಮೀರಾರೋಡ್ ಇಲ್ಲಿ ಅಸೋಸಿಯೇಷನ್ ಅಧ್ಯಕ್ಷರಾದ ರವೀಶ್ ಆಚಾರ್ಯ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ.

ಯೋಗ ಶಿಬಿರ ಬೆಳಗ್ಗೆ 8.30 ಯಿಂದ - 10.30 ರ ವರೆಗೆ. ಈ ಯೋಗ ಶಿಬಿರವನ್ನು 20 ವರ್ಷಗಳ ದೀರ್ಘ ಯೋಗ ಅನುಭವಿ ಸಂದೀಪ್ ಕದಂ, ಯೋಗ ಟೀಚರ್(ಅಂಬಿಕಾ ಯೋಗಾಶ್ರಮ) ನಡೆಸಿ ಕೊಡಲಿದ್ದಾರೆ.

ಉಚಿತ ಆರೋಗ್ಯ ತಪಾಸಣೆಯು ಮೀರಾ ರೋಡಿನ ವೋಕರ್ಡ್ ಹಾಸ್ಪಿಟಲ್ ಇದರ ಸಹಯೋಗದೊಂದಿಗೆ ಬೆಳಿಗ್ಗೆ 11.00 ರಿಂದ ಸಾಯಂಕಾಲ 3.00ರ ವರೆಗೆ ಜರಗಲಿದೆ. ಈ ಕಾರ್ಯಕ್ರಮಕ್ಕೆ ಡಾ. ಅನಿಲ್ ಮೋಹನ್ ಕೊಡವೂರು ಮಲಾಡ್ ಪೂರ್ವದ ಆಚಾರ್ಯ ಡೆಂಟಲ್ ಕ್ಲಿನಿಕ್‌ನ ಡಾ. ಶಶಿನ್ ಕುಮಾರೇಶ್ ಆಚಾರ್ಯ ಆಗಮಿಸಲಿದ್ದಾರೆ. ವಿಶ್ವಕರ್ಮ ಸಮಾಜ ಹಾಗೂ ತುಳು ಕನ್ನಡಿಗರು ಆರೋಗ್ಯ ತಪಾಸಣೆಯಲ್ಲಿ ಭಾಗವಹಿಸಬೇಕಾಗಿ ಕರ್ನಾಟಕ ವಿಶ್ವಕರ್ಮ ಅಸೋಸಿಯೇಷನ್, ಮುಂಬೈ ಪ್ರಕಟಣೆಯಲ್ಲಿ ತಿಳಿಸಿದೆ.

# ಬಿಲ್ಲವರ ಎಸೋಸಿಯೇಶನ್ ಮುಂಬಯಿ : ನವಿಮುಂಬಯಿ ಸಮುದಾಯ ಭವನದಲ್ಲಿ ನಾಳೆ

## ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಉಚಿತ ವೈದ್ಯಕೀಯ ಶಿಬಿರ ಮತ್ತು ರಕ್ತದಾನ ಶಿಬಿರ

ನವಿಮುಂಬಯಿ, ಜೂ. 19- ಬಿಲ್ಲವರ ಎಸೋಸಿಯೇಶನ್ ಮುಂಬಯಿ ಇದರ ನವಿಮುಂಬಯಿ ಸ್ಥಳೀಯ ಕಚೇರಿಯ ವತಿಯಿಂದ ನವಿಮುಂಬಯಿ ಸಮುದಾಯ ಭವನ, ಸೆಕ್ಟರ್-10, ಅಂಬೇಡ್ಕರ್ ಭವನದ ಎದುರುಗಡೆ, ಜೂಯಿ ನಗರ, ಸಾನ್ಪಾಡದಲ್ಲಿ ಜೂ. 21ರ ರವಿವಾರದಂದು ಬೆಳ್ಳಿಗೆ 9:00 ಗಂಟೆಯಿಂದ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯು ಎಸೋಸಿಯೇಶನಿನ ಅಧ್ಯಕ್ಷ ಹರೀಶ್ ಜಿ. ಅಮೀನ್ ಅಧ್ಯಕ್ಷತೆಯಲ್ಲಿ ಹಾಗೂ ಅಂತಾರಾಷ್ಟ್ರೀಯ ಯೋಗಾ ಶಿಕ್ಷಕಿ ಡಾ. ರೀಚಾ ಭಾರ್ಗವ್ ನೇತೃತ್ವದಲ್ಲಿ ಜರಗಲಿದೆ.

ನಂತರ ಬೆಳ್ಳಿಗೆ 10:00 ಗಂಟೆಯಿಂದ ಮಧ್ಯಾಹ್ನ 2:00 ಗಂಟೆಯವರೆಗೆ ಡಾ। ಶುಭಾಂಗಿ (M.D. MGM Hospital) ನೇತೃತ್ವದಲ್ಲಿ ರಕ್ತದಾನ ಶಿಬಿರ ಮತ್ತು ನಾಯರ್ ಹಾಸ್ಪಿಟಲ್ ಮುಂಬಯಿಯ ಅನುಭವಿ ವೈದ್ಯರಿಂದ ರಕ್ತದೊತ್ತಡ, ರಕ್ತದಲ್ಲಿನ ಸಕ್ಕರೆ, ಕಣ್ಣಿನ ಸಮಸ್ಯೆ, ಸಾಮಾನ್ಯ ವೈದ್ಯರ ಸಲಹೆ, ಸ್ತ್ರೀರೋಗ ತಜ್ಞರ ಸಲಹೆ, ಮೂಳೆ ಮತ್ತು ಕೀಲು ತಜ್ಞರ ಸಲಹೆ, ಇಸಿಜಿ, ದಂತ ತಪಾಸಣೆ, ಕ್ಯಾನ್ಸರ್ ರೋಗ ತಪಾಸಣೆ, ಮನೋರೋಗ ತಪಾಸಣೆ ಮುಂತಾದ ವೈದ್ಯಕೀಯ ತಪಾಸಣೆಯನ್ನು ಉಚಿತವಾಗಿ ಒದಗಿಸಲಾಗುವುದು.

ಈ ಕಾರ್ಯಕ್ರಮದಲ್ಲಿ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಅಪೂರ್ವ ಅವಕಾಶದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಎಸೋಸಿಯೇಶನಿನ ಗೌ. ಅಧ್ಯಕ್ಷ ಎಲ್. ವಿ. ಅಮೀನ್, ಗೌ. ಪ್ರ. ಕಾರ್ಯದರ್ಶಿ ಹರೀಶ್ ಜಿ. ಸಾಲ್ಯಾನ್, ಉಪಾಧ್ಯಕ್ಷ ಪುರುಷೋತ್ತಮ ಎಸ್. ಕೋಟ್ಯಾನ್, ನವಿಮುಂಬಯಿ ಸ್ಥಳೀಯ ಕಚೇರಿಯ ಕಾರ್ಯಾಧ್ಯಕ್ಷ ವಿಶ್ವನಾಥ ಕೆ. ಪೂಜಾರಿ, ಗೌ. ಕಾರ್ಯದರ್ಶಿ ಡಾ. ಹರೀಶ್ ಪೂಜಾರಿ, ಗೌ. ಕೋಶಾಧಿಕಾರಿ ಮೋಹಿನಿ ಪೂಜಾರಿ, ನವಿಮುಂಬಯಿ ಯುವ ಅಭ್ಯುದಯ ಸದಸ್ಯರು ಪ್ರಕಟಣೆಯಲ್ಲಿ ವಿನಂತಿಸಿರುವರು.

# ಮಲಾಡ್ ಕನ್ನಡ ಸಂಘ: ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಮುಂಬಯಿ, ಜೂ. 19- ಮಲಾಡ್ ಕನ್ನಡ ಸಂಘ (ರಿ.) ಇದರ ಆಶ್ರಯದಲ್ಲಿ ಸಂಘದ ಬೆಳ್ಳಿಹಬ್ಬದ ಆಚರಣೆಯ ಸಲುವಾಗಿ ತಮ್ಮೆಲ್ಲರ ದೈಹಿಕ ಮತ್ತು ಮಾನಸಿಕ ಯೋಗ ಕ್ಷೇಮದ ದೃಷ್ಟಿಕೋನದಲ್ಲಿ ಯೋಗದ ಪಾತ್ರ, ಯೋಗದ ಅರಿವು ಮತ್ತು ಪ್ರಾಮುಖ್ಯತೆಯನ್ನು ತಿಳಿಯಪಡಿಸುವ ನಿಟ್ಟಿನಲ್ಲಿ ಜೂ. 21ರ ರವಿವಾರ ಸಂಜೆ 6:00 ರಿಂದ ಮಲಾಡ್ ಪೂರ್ವ, ಯುನಿಟಿ ಅಪಾರ್ಟ್‌ಮೆಂಟ್ಸ್, ಎಂ.ಕೆ.ಎಸ್ ಕಚೇರಿ, 4ಬಿ - 21ನಲ್ಲಿನ ರಮಾನಾಥ್ ಎಸ್. ಪಯ್ಯಡೆ ಸ್ಮಾರಕ ಸಭಾಗೃಹದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಖ್ಯಾತ ಯೋಗ ಶಿಕ್ಷಕಿ ದೀಪಿಕಾ ಅತುಲ್ ಭಾಗವಹಿಸಿ, ಯೋಗದ ಬಗ್ಗೆ ಮಾಹಿತಿಯನ್ನು ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಎಲ್ಲರೂ ಕುಟುಂಬ ಸಮೇತರಾಗಿ, ತಮ್ಮ ಹಿತೈಷಿ ಮಿತ್ರರೊಂದಿಗೆ ಪಾಲ್ಗೊಂಡು, ಯೋಗದ ಪ್ರಯೋಜನಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವಂತೆ ಮತ್ತು ಈ ಅವಕಾಶದ ಸದುಪಯೋಗವನ್ನು ಪಡೆದುಕೊಳ್ಳುವಂತೆ ಮಲಾಡ್ ಕನ್ನಡ ಸಂಘದ ವತಿಯಿಂದ ಅಧ್ಯಕ್ಷ ನ್ಯಾಯವಾದಿ ಜಗದೀಶ್ ಎಸ್. ಹೆಗ್ಡೆ, ಉಪಾಧ್ಯಕ್ಷ ದಯಾನಂದ ಎಂ. ಶೆಟ್ಟಿ, ಗೌರವ ಪ್ರಧಾನ ಕಾರ್ಯದರ್ಶಿ ಆಶಾಲತಾ ಎಸ್. ಕೋಟ್ಯಾನ್, ಗೌರವ ಕೋಶಾಧಿಕಾರಿ ಶಾಂಭವಿ ಬಿ. ಶೆಟ್ಟಿ, ಜೊತೆ ಕಾರ್ಯದರ್ಶಿ ಸತೀಶ್ ಆರ್. ಶೆಟ್ಟಿ, ಜೊತೆ ಕೋಶಾಧಿಕಾರಿ ಜಯಪ್ರಕಾಶ್ ಎಸ್. ಸಾಲ್ಯಾನ್, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಸಾರಿಕಾ ಆರ್. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಯೋಗೇಶ್ ವಿ. ಶೆಟ್ಟಿ, ಕಾನೂನು ವಿಭಾಗದ ಕಾರ್ಯಾಧ್ಯಕ್ಷ ನ್ಯಾಯವಾದಿ ಎಸ್. ಬಿ. ಅಮೀನ್ ಹಾಗೂ ಕಾರ್ಯಕಾರಿ ಸಮಿತಿ, ಉಪ ಸಮಿತಿಯವರು ಮತ್ತು ಸರ್ವ ಸದಸ್ಯರು ವಿನಂತಿಸಿಕೊಂಡಿದ್ದಾರೆ.

# ಶ್ರೀ ಗಣಪತಿ ಅಯ್ಯಪ್ಪ ದುರ್ಗಾದೇವಿ ಕ್ಷೇತ್ರ ನೆರೊಲ್ : ಜೂ. 22ರಂದು ತಾಳಮದ್ದಲೆ ಕಾರ್ಯಕ್ರಮ

ನವಿಮುಂಬಯಿ, ಜೂ. 19- ವಿಶಾಲ ಯಕ್ಷ ಕಲಾ ಬಳಗ ನಂದಳಿಕೆ ಕಾರ್ಕಳ ತಾಲೂಕು ಉಡುಪಿ ಜಿಲ್ಲೆಯವರಿಂದ 'ತಾಳಮದ್ದಳೆ ಜ್ಞಾನಯಜ್ಞ' ಎಂಬ ವಿಶೇಷ ಮುಂಬಯಿ ಅಭಿಯಾನವನ್ನು ಕೈಗೊಂಡಿದ್ದಾರೆ. ಜೂ. 22ರ ಸಂಜೆ 5:00ರಿಂದ ಶ್ರೀ ಗಣಪತಿ ಅಯ್ಯಪ್ಪ ದುರ್ಗಾದೇವಿ ಕ್ಷೇತ್ರ ನೆರೊಲ್ ಪೂರ್ವ ಇಲ್ಲಿ 'ಜಾಬಲಿ ನಂದಿನಿ' ಎಂಬ ಕಟೀಲು ಕ್ಷೇತ್ರ ಮಹಾತ್ಮೆ ಪ್ರಸಂಗದ ಆಯ್ದ ಭಾಗವನ್ನು ಕವಿ ಶಿಮಂತೂರು ನಾರಾಯಣ ಶೆಟ್ಟಿ ವಿರಚಿತ, ಹಿಮ್ಮೇಳದಲ್ಲಿ ಗಣೇಶ ಮಯ್ಯ ವರ್ಕಾಡಿ, ಮೋಹನದಾಸ ರೈ, ಶ್ರೀನಿವಾಸ ಸೋಮಯಾಜಿ ಇರುಬೈಲು, ಆದಿತ್ಯ ಪಡ್ರೆ ಭಾಗವಹಿಸಲಿದ್ದಾರೆ.

ಅರ್ಥಗಾರಿಕೆಯಲ್ಲಿ ಡಾ. ಶಿವಕುಮಾರ ಅಳಗೋಡ, ಸಂತೋಷ್ ಭಟ್ ಭಕ್ರೇಮಠ, ಸುಬ್ರಹ್ಮಣ್ಯ ಬೈಪಾಡಿತ್ತಾಯ ನಂದಳಿಕೆ ಮಾತನಾಡಲಿದ್ದಾರೆ.

ಶ್ರೀ ಕ್ಷೇತ್ರದ ಪ್ರಧಾನ ಅರ್ಚಕ ಶ್ರೀಧರ ಭಟ್ ಹಾಗೂ ಜ್ಯೋತಿಷಿ ದಿನೇಶ ಉಪಾರ್ಣ ಈ ತಾಳಮದ್ದಳೆಯ ಸೇವಾದಾರರಾಗಿದ್ದಾರೆ. ವೇದಿಕೆ ನೆರವನ್ನು ಶ್ರೀ ಕ್ಷೇತ್ರದ ಆಡಳಿತ ಮಂಡಳಿ ಮಾಡಿಕೊಡಲಿದ್ದಾರೆ. ಮುಂಬಯಿ ಹಾಗೂ ನವಿಮುಂಬಯಿಯ ಹೆಚ್ಚಿನ ಕಲಾಭಿಮಾನಿಗಳು ಈ ತಾಳಮದ್ದಳೆಯ ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ಕ್ಷೇತ್ರದ ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಕಾತ್ರಜ್ ಪುಣೆ : ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

ಪುಣೆ, ಜೂ. 19- ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನ ಕಾತ್ರಜ್, ಶ್ರೀ ಅಯ್ಯಪ್ಪ ಸ್ವಾಮೀ ಸೇವಾ ಸಮಿತಿ, ಕಾರ್ಯಕಾರಿ ಸಮಿತಿ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯೋಗಾ ದಿನದಂಗವಾಗಿ ಯೋಗ ದಿನಾಚರಣೆಯು ಜೂ. 21ರ ಆದಿತ್ಯವಾರದಂದು ಬೆಳಿಗ್ಗೆ ಗಂಟೆ 8:30ರಿಂದ ದೇವಸ್ಥಾನದ ವಠಾರದಲ್ಲಿ ನಡೆಯಲಿದೆ. ಪುಣೆಯ ಯೋಗ ಶಿಕ್ಷಕಿ ಶಾಲಿನಿ ವಿಶ್ವನಾಥ್ ಪೂಜಾರಿ ನೇತೃತ್ವದಲ್ಲಿ ನಡೆಯಲಿರುವ ಈ ಯೋಗ ದಿನಾಚರಣೆಯಲ್ಲಿ ಹೆಚ್ಚಿನ ಸಂಖ್ಯೆಯ ತುಳು-ಕನ್ನಡ ಬಾಂಧವರು ಪಾಲ್ಗೊಳ್ಳುವಂತೆ ಶ್ರೀ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಕಾರ್ಯಾಧ್ಯಕ್ಷರು ಹಾಗೂ ಪದಾಧಿಕಾರಿಗಳು ಮಹಿಳಾ ವೃಂದದವರು ವಿನಂತಿಸಿಕೊಂಡಿರುತ್ತಾರೆ.

# ಮುಂಬಯಿನಲ್ಲಿ ರಾಷ್ಟ್ರೀಯ ಪರೀಕ್ಷಾ ಕೇಂದ್ರದ ಮೂಲಸೌಕರ್ಯ ವಿಸ್ತರಣೆ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಭೂಮಿಪೂಜೆ






ಮುಂಬಯಿ,ಜೂ.19- ದೇಶದ ಗುಣಮಟ್ಟ ಭರವಸೆ ಮತ್ತು ಪರೀಕ್ಷಾ ಮೂಲಸೌಕರ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆಯ ಅಡಿಯಲ್ಲಿ ಬರುವ ರಾಷ್ಟ್ರೀಯ ಪರೀಕ್ಷಾ ಕೇಂದ್ರದ (ಎನ್‌ಟಿಎಚ್) ಮುಂಬಯಿ ಪಶ್ಚಿಮ ವಲಯ ಆವರಣದಲ್ಲಿ ನೂತನ ವಿಸ್ತರಣಾ ಕಾಮಗಾರಿಗಳಿಗೆ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ, ಸಾರ್ವಜನಿಕ ವಿತರಣೆ ಹಾಗೂ ನವೀಕರಿಸಬಹುದಾದ ಇಂಧನ ಸಚಿವ ಪ್ರಹ್ಲಾದ್ ಜೋಶಿ ಅವರು ಶುಕ್ರವಾರ ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಸಚಿವರು, ಬಲಿಷ್ಠ ಪರೀಕ್ಷೆ ಮತ್ತು ಪ್ರಮಾಣೀಕರಣ ಮೂಲಸೌಕರ್ಯವು ಗ್ರಾಹಕರ ಹಿತಾಸಕ್ತಿಗಳನ್ನು ಕಾಯುವಲ್ಲಿ, ಉತ್ಪನ್ನಗಳ ವಿಶ್ವಾಸಾರ್ಹತೆಯನ್ನು ಹೆಚ್ಚಿಸುವಲ್ಲಿ ಮತ್ತು ಸುಲಭ ವಾಣಿಜ್ಯ ವಹಿವಾಟಿಗೆ ನೆರವಾಗುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದರು. ದೇಶದ ಗುಣಮಟ್ಟದ ಪರಿಸರ ವ್ಯವಸ್ಥೆಯನ್ನು ಬಲಪಡಿಸುವುದು ಭಾರತೀಯ ಉತ್ಪನ್ನಗಳ ಜಾಗತಿಕ ಸ್ಪರ್ಧಾತ್ಮಕತೆಯನ್ನು ಸುಧಾರಿಸಲು ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನವನ್ನು ಮುನ್ನಡೆಸಲು ಅತ್ಯಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದರು. ಇದೇ ಸಂದರ್ಭದಲ್ಲಿ ಸಚಿವರು ಮುಂಬಯಿನ ಎನ್‌ಟಿಎಚ್ ಪ್ರಯೋಗಾಲಯಗಳಿಗೆ ಭೇಟಿ ನೀಡಿ ವಿಜ್ಞಾನಿಗಳು ಮತ್ತು ತಾಂತ್ರಿಕ ತಜ್ಞರೊಂದಿಗೆ ಸಂಸ್ಥೆಯ ಸಾಮರ್ಥ್ಯಗಳ ಕುರಿತು ಪರಾಮರ್ಶೆ ನಡೆಸಿದರು.

ಕಾರ್ಯಕ್ರಮದಲ್ಲಿ ಮುಂಬಯಿ ವಾಯುವ್ಯ ಕ್ಷೇತ್ರದ ಸಂಸದ ರವೀಂದ್ರ ವೈಕರ್ ಉಪಸ್ಥಿತರಿದ್ದು, ಕೈಗಾರಿಕಾ ಪ್ರಗತಿಯಲ್ಲಿ ಗುಣಮಟ್ಟದ ಮೂಲಸೌಕರ್ಯಗಳ ಮಹತ್ವವನ್ನು ಶ್ಲಾಘಿಸಿದರು. ಇದೇ ವೇಳೆ ಸಚಿವ ಜೋಶಿ ಅವರು ಮುಂಬಯಿನ ಎನ್‌ಟಿಎಚ್‌ನಲ್ಲಿ ಮೈಕ್ರೋಬಯೋಲಾಜಿಕಲ್ ಟೆಸ್ಟಿಂಗ್ ಲ್ಯಾಬೊರೇಟರಿ, ಘಾಜಿಯಾಬಾದ್‌ನ ಉತ್ತರ ವಲಯ ಕೇಂದ್ರದಲ್ಲಿ ಶೂ ಟೆಸ್ಟಿಂಗ್ ಸೌಲಭ್ಯ ಹಾಗೂ ಛತ್ರಪತಿ ಸಂಭಾಜಿನಗರದ ಆರಿಕ್ ಸಿಟಿಯಲ್ಲಿ ಎನ್‌ಟಿಎಚ್-ಆರಿಕ್ ಸ್ಯಾಟಲೈಟ್ ಸೆಂಟರ್‌ನ್ನು ಉದ್ಘಾಟಿಸಿದರು. ಈ ಹೊಸ ಸೌಲಭ್ಯಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾನದಂಡಗಳ ಅನುಸರಣೆಯನ್ನು ಉತ್ತೇಜಿಸುವ ಮೂಲಕ ಕೈಗಾರಿಕಾ ವಲಯಕ್ಕೆ ಹೆಚ್ಚಿನ ಶಕ್ತಿ ತುಂಬಲಿವೆ. ಕಾರ್ಯಕ್ರಮದಲ್ಲಿ ಗ್ರಾಹಕ ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ ನಿಧಿ ಖರೆ, ಅಪರ ಕಾರ್ಯದರ್ಶಿ ರಿಚಾ ಮಿಶ್ರಾ ಮತ್ತು ಎನ್‌ಟಿಎಚ್ ಮಹಾನಿರ್ದೇಶಕ ಡಾ. ಅಲೋಕ್ ಕುಮಾರ್ ಶ್ರೀವಾಸ್ತವ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ನನ್ನ ಬಳಿ ಪಿಸ್ತೂಲ್ ಇದ್ದಿದ್ದರೆ,6 ದೇಶದ್ರೋಹಿಗಳನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸುತ್ತಿದ್ದೆ; ಠಾಕ್ರೆಸೇನೆ ನಾಯಕನ ಆಕ್ರೋಶ

## "ನನ್ನ ಶೂ ತೆಗೆದು ಅವರ ಮುಖಕ್ಕೆ ಹೊಡೆಯದೆ ನಾನು ಬಿಡುವುದಿಲ್ಲ"



ನಾಂದೇಡ್,ಜೂ.19- ಉದ್ಧವ್ ಠಾಕ್ರೆ ತಮ್ಮ ಮೃದು ನಿಲುವನ್ನು ತ್ಯಜಿಸಿ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ ಶಿವಸೇನೆ (ಯುಬಿಟಿ)ಯ ನಾಂದೇಡ್ ಉಪ ಜಿಲ್ಲಾ ಮುಖ್ಯಸ್ಥ ಮಹೇಶ್ ಪಾಟೀಲ್ ಅವರು,'ನನ್ನ ಬಳಿ ಪಿಸ್ತೂಲ್ ಇದ್ದಿದ್ದರೆ ಈ 6 ದೇಶದ್ರೋಹಿಗಳನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸುತ್ತಿದ್ದೆ' ಎಂದು ಪಕ್ಷದ ಬಂಡಾಯ ಸಂಸದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಠಾಕ್ರೆಸೇನೆಯ 9 ಸಂಸದರಲ್ಲಿ 6 ಸಂಸದರು ಪಕ್ಷದಿಂದ ಬೇರ್ಪಟ್ಟು ಶಿಂದೆಸೇನೆಗೆ ಸೇರುತ್ತಾರೆ ಎಂದು ಹೇಳಲಾಗುತ್ತಿದೆ. ಈ ಆರು ಸಂಸದರು ಪಕ್ಷವನ್ನು ತೊರೆದ ಕಾರಣ ಶಿವಸೈನಿಕರು ಕೋಪಗೊಂಡಿದ್ದು, ನಾಲ್ಕು ವರ್ಷಗಳಲ್ಲಿ ಎರಡನೇ ಬಾರಿಗೆ ಪಕ್ಷ ವಿಭಜನೆಯಾಗುತ್ತಿದ್ದಂತೆ ಶಿವಸೈನಿಕರ ಕೋಪ ಸ್ಫೋಟಗೊಂಡಿದೆ.

ಠಾಕ್ರೆಸೇನೆ ವಿವಿಧ ಸ್ಥಳಗಳಲ್ಲಿ ಈ ಬಂಡಾಯ ಸಂಸದರ ವಿರುದ್ಧ ಪ್ರತಿಭಟನೆಗಳನ್ನು ಆರಂಭಿಸಿದೆ. ಠಾಕ್ರೆಸೇನೆ ಕಾರ್ಯಕರ್ತರು ಮತ್ತು ಪದಾಧಿಕಾರಿಗಳ ಕೋಪ ಎಷ್ಟರ ಮಟ್ಟಿಗೆ ತಲುಪಿದೆಯೆಂದರೆ, ಒಬ್ಬ ಪದಾಧಿಕಾರಿ ಅಂತೂ 'ನನ್ನ ಬಳಿ ಬಂದೂಕು ಇದ್ದಿದ್ದರೆ, ನಾನು ಈ 6 ಸಂಸದರನ್ನೂ ಸಾಲಾಗಿ ನಿಲ್ಲಿಸಿ ಗುಂಡು ಹಾರಿಸುತ್ತಿದ್ದೆ' ಎಂದು ಹೇಳಿದ್ದಾರೆ.

ನಾಂದೇಡ್ ಜಿಲ್ಲೆಯ ದೆಗ್ಲೂರ್‌ನ ಠಾಕ್ರೆಸೇನೆ ಉಪ ಜಿಲ್ಲಾ ಮುಖ್ಯಸ್ಥ ಮಹೇಶ್ ಪಾಟೀಲ್ ಅವರು ಈ ಕೋಪವನ್ನು ವ್ಯಕ್ತಪಡಿಸಿದ್ದಾರೆ. 'ನನ್ನ ಬಳಿ ಪಿಸ್ತೂಲ್ ಇದ್ದಿದ್ದರೆ, ನಾನು ಈ 6 ದೇಶದ್ರೋಹಿಗಳಿಗೆ ಗುಂಡು ಹಾರಿಸುತ್ತಿದ್ದೆ, ಆದರೆ ದುರದೃಷ್ಟವಶಾತ್ ನನ್ನ ಬಳಿ ಪಿಸ್ತೂಲ್ ಇಲ್ಲ. ಆದರೆ ಅವರು ನನ್ನ ಮುಂದೆ ಬಂದರೆ, ನನ್ನ ಶೂ ತೆಗೆದು ಅವರ ಮುಖಕ್ಕೆ ಹೊಡೆಯದೆ ನಾನು ಮೌನವಾಗಿರುವುದಿಲ್ಲ' ಎಂದು ಎಚ್ಚರಿಕೆ ನೀಡಿದ್ದಾರೆ.

ಪಕ್ಷದ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರು ಪಕ್ಷ ಬಿಟ್ಟು ಹೋಗಲು ಬಯಸುವವರಿಗೆ ಹೋಗುವಂತೆ ಹೇಳುವ ಬದಲು ಅವರನ್ನು ಹತ್ತಿಕ್ಕಲು ಆದೇಶ ನೀಡಬೇಕೆಂದು ಅವರು ವಿನಂತಿಸಿದ್ದಾರೆ.

ಶಿವಸೇನೆಯ ಸ್ಥಾಪನೆಯಿಂದಲೂ ದ್ರೋಹದ ಶಾಪ, ಪಕ್ಷದ ವಿಭಜನೆಯ ಶಾಪ ಶಿವಸೇನೆಯ ಮೇಲೆ ಇದೆ. ಶಿವಸೇನೆಯು ಅಂತಹ ವಿಭಜನೆಗಳನ್ನು ಹಲವು ಬಾರಿ ಜೀರ್ಣಿಸಿಕೊಂಡಿದೆ.ತಾಯಿಯಂತೆ ಇರುವ ಶಿವಸೇನೆಯ ಬೆನ್ನಿಗೆ ಇರಿದ 6 ದೇಶದ್ರೋಹಿಗಳು, ಉದ್ಧವ್ ಸಾಹೇಬರ ಸಹಾನುಭೂತಿಯ ಅಲೆಯ ಮೇಲೆ ಅಮಿತ್ ಶಾಹ, ಮೋದಿ, ಏಕನಾಥ್ ಶಿಂದೆ ಮತ್ತು ಫಡ್ನವೀಸ್ ಅವರ ನೀತಿಗಳ ವಿರುದ್ಧ ಆಯ್ಕೆಯಾಗಿದ್ದಾರೆ. ಈ ದೇಶದ್ರೋಹಿಗಳು ಶಿವಸೇನೆಯ ಬೆನ್ನಿಗೆ ಇರಿದ ಕೆಲಸವನ್ನು ಮಾಡಿದ್ದಾರೆ, ಅದು ತಾಯಿಯಂತೆ. ಶಿವಸೇನೆ ಫೀನಿಕ್ಸ್ ಪಕ್ಷದಂತೆ ಮತ್ತೆ ಎದ್ದು ಬರುತ್ತದೆ. ಸಾಮರ್ಥ್ಯವಿಲ್ಲದವರನ್ನು, ನಾಯಿ ಕೂಡ ಕೇಳದವರನ್ನು ಶಿವಸೇನೆ ಸೃಷ್ಟಿಸಿದೆ ಎಂದು ಪಾಟೀಲ್ ಹೇಳಿದ್ದಾರೆ.

ಆನಂದ್ ದಿಘೆ ಅವರು ದೇಶದ್ರೋಹಿಗಳಿಗೆ ಕ್ಷಮೆ ಇಲ್ಲ ಎಂದು ಹೇಳಿದ್ದರು. ಅಲ್ಲದೆ, ಈ ದೇಶದ್ರೋಹಿಗಳನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸಬೇಕು. ಉದ್ಧವ್ ಠಾಕ್ರೆ ಅವರಿಗೆ ನನ್ನ ವಿನಂತಿಯೆಂದರೆ... ನಾವು ಮೃದು ನಿಲುವು ತೆಗೆದುಕೊಳ್ಳಬಾರದು. ಹೋಗಲು ಬಯಸುವವರನ್ನು ಹೋಗಲಿ ಎಂದು ಹೇಳಬೇಡಿ. ಪಕ್ಷವನ್ನು ತೊರೆದವರನ್ನು ಶೂಗಳಿಂದ ಹೊಡೆಯಲು ಶಿವಸೇನಾ ಸೈನಿಕರಿಗೆ ಆದೇಶ ನೀಡಿ ಎಂದು ಅವರು ಮನವಿ ಮಾಡಿದರು.

ನಮ್ಮ ಮೃದು ನಿಲುವಿನಿಂದಾಗಿ ಯೋಗ್ಯರಲ್ಲದವರು ಶಿವಸೇನೆಯ ಬೆನ್ನಿಗೆ ಇರಿಯುತ್ತಿದ್ದಾರೆ. ಅಂತಹ ದೇಶದ್ರೋಹಿಗಳಿಗೆ ಪಾಠ ಕಲಿಸಬೇಕು. ಅವರನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸುವಂತೆ ಮಾಡಬೇಕು. ದುರದೃಷ್ಟವಶಾತ್, ನನ್ನ ಬಳಿ ಪಿಸ್ತೂಲ್ ಇಲ್ಲ. ನನ್ನ ಬಳಿ ಪಿಸ್ತೂಲ್ ಇದ್ದಿದ್ದರೆ, ನಾನು ಈ ಎಲ್ಲಾ ಅಣ್ಣತಮ್ಮಂದಿರನ್ನು ಸಾಲಾಗಿ ನಿಲ್ಲಿಸಿ ಗುಂಡು ಹಾರಿಸುತ್ತಿದ್ದೆ ಎಂದು ನನ್ನ ತಾಯಿಯ ಮೇಲೆ ನಾನು ಪ್ರಮಾಣ ಮಾಡಿ ಹೇಳುತ್ತೇನೆ. ಈ ದೇಶದ್ರೋಹಿ ಮಕ್ಕಳು ಒಬ್ಬ ತಂದೆಗೆ ಸೇರಿದವರಲ್ಲ. ಮುಂಬರುವ ಕಾಲದಲ್ಲಿ ಶಿವಸೈನಿಕರು ಈ ದೇಶದ್ರೋಹಿಗಳ ವಿರುದ್ಧ ಹೋರಾಡುತ್ತಾರೆ ಎಂದು ಅವರು ಎಚ್ಚರಿಸಿದರು.

'ಹಣದಿಂದ ನೀವು ಏನು ಮಾಡುತ್ತಿದ್ದೀರಿ? ಹಣ ಎಷ್ಟು ಕಾಲ ಉಳಿಯುತ್ತದೆ? ಆದರೆ ದ್ರೋಹದ ಗುರುತು ನಿಮ್ಮ ಮೇಲೆ ಸಾವಿನವರೆಗೂ ಮತ್ತು ಸಾವಿನ ನಂತರವೂ ಇರುತ್ತದೆ. ಹಿಟ್ಲರ್‌ನ ಹಿಟ್ಲರ್‌ಶಾಹಿಯೇ ಉಳಿದಿಲ್ಲ.ಮೋದಿಶಾಹಿ, ಅಮಿತ್‌ಶಾಹಿ, ಶಿಂದೆಶಾಹಿ ಎಷ್ಟು ಕಾಲ ಉಳಿಯುತ್ತದೆ. ಮುಂಬರುವ ಸಮಯಗಳು ನಿಮ್ಮನ್ನು ಹೋರಾಡುವಂತೆ ಅಥವಾ ಪಲಾಯನ ಮಾಡುವಂತೆ ಮಾಡುತ್ತದೆ. ನೀವು ಎಲ್ಲಿ ಭೇಟಿಯಾದರೂ, ಮದುವೆಗಳಲ್ಲಿ, ಸಾವಿನಲ್ಲಿ ಜನರು ನಿಮ್ಮನ್ನು ಚಪ್ಪಲಿಯಿಂದ ಹೊಡೆಯಲಿದ್ದಾರೆ' ಎಂದು ಅವರು ಬಂಡಾಯ ಸಂಸದರಿಗೆ ಎಚ್ಚರಿಸಿದರು.

# ಬಂಡುಕೋರ ಶಿವಸೇನೆ(ಯುಬಿಟಿ) ಸಂಸದರು ಕೃತಜ್ಞತೆಯಿಲ್ಲದ, ಭ್ರಷ್ಟ ಜನರು ; ಆದಿತ್ಯ ಠಾಕ್ರೆ ವಾಗ್ದಾಳಿ



ಮುಂಬಯಿ,ಜೂ.19 - ತಮ್ಮ ಪಕ್ಷದ ಬಂಡುಕೋರ ಸಂಸದರನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಗೆಲ್ಲಲು ಸಹಾಯ ಮಾಡಿದವರಿಗೆ ದ್ರೋಹ ಮಾಡಿದ ನಾಚಿಕೆಯಿಲ್ಲದ, ಕೃತಜ್ಞತೆಯಿಲ್ಲದ ಮತ್ತು ಭ್ರಷ್ಟ ಜನರೆಂದು ಶಿವಸೇನೆ (ಯುಬಿಟಿ) ನಾಯಕ ಆದಿತ್ಯ ಠಾಕ್ರೆ ಅವರು ವಾಗ್ದಾಳಿ ನಡೆಸಿದ್ದಾರೆ.

6 ಸಂಸದರು ಪಕ್ಷದ ವಿರುದ್ಧ ಬಂಡಾಯವೆದ್ದ ಬಳಿಕ ತಮ್ಮ ಮೊದಲ ಪ್ರತಿಕ್ರಿಯೆ ನೀಡಿದ ಠಾಕ್ರೆ, ಮಹಾರಾಷ್ಟ್ರ ಈ ಕೊಳಕು ರಾಜಕೀಯವನ್ನು ಸಹಿಸುವುದಿಲ್ಲ ಎಂದು ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಹೇಳಿದರು.

'ಮತ್ತೊಮ್ಮೆ, ಕೊಳಕು ರಾಜಕೀಯದ ಆಘಾತಕಾರಿ ಉದಾಹರಣೆಯನ್ನು ನಾವು ನೋಡುತ್ತಿದ್ದೇವೆ. 2024 ರಲ್ಲಿ ಕೆಲವು ಜನರಿಂದ ಗೆದ್ದ ಈ ನಾಚಿಕೆಯಿಲ್ಲದ, ಕೃತಜ್ಞತೆಯಿಲ್ಲದ ಮತ್ತು ಭ್ರಷ್ಟ ವ್ಯಕ್ತಿಗಳು ಈಗ ಅವರಿಗೆ ದ್ರೋಹ ಮಾಡುತ್ತಿದ್ದಾರೆ' ಎಂದು ಠಾಕ್ರೆ ಟೀಕಿಸಿದರು. ಅವರು ಎಷ್ಟೇ ನೆಪಗಳನ್ನು ನೀಡಿದರೂ, ಅವರು ನಾಚಿಕೆಯಿಲ್ಲದೆ ತಮ್ಮನ್ನು ಮಾರಿಕೊಂಡಿದ್ದಾರೆ ಎಂಬುದು ಸತ್ಯ.ಅವರು ತಮ್ಮನ್ನು ತಾವು ಮಾರಿಕೊಂಡಿರುವುದು ಮಾತ್ರವಲ್ಲದೆ,ತಮ್ಮೊಂದಿಗೆ, ಅವರು ತಮ್ಮ ಖ್ಯಾತಿ, ಹೆಸರು ಮತ್ತು ಕುಟುಂಬದ ಹೆಸರನ್ನೂ ಪಣಕ್ಕಿಟ್ಟಿದ್ದಾರೆ ಎಂದು ಮಹಾರಾಷ್ಟ್ರದ ಮಾಜಿ ಸಚಿವರು ಹೇಳಿದರು. 'ಈ ಕತ್ತಲೆಯಲ್ಲಿ, ಬೆಳಕನ್ನು ತರುವವರು ನಮ್ಮ ಜ್ವಲಂತ ಜ್ಯೋತಿಯಲ್ಲದೆ ಬೇರೆ ಯಾರೂ ಅಲ್ಲ' ಎಂದು ಆದಿತ್ಯ ಠಾಕ್ರೆ ಸೇನಾ (ಯುಬಿಟಿ) ಚಿಹ್ನೆಯನ್ನು ಉಲ್ಲೇಖಿಸಿ ತಿಳಿಸಿದರು.

ಸೇನಾ (ಯುಬಿಟಿ) ಸಂಸದರಾದ ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್ಚೌರೆ, ನಾಗೇಶ್ ಪಾಟೀಲ್-ಅಷ್ಟಿಕರ್ ಮತ್ತು ಓಂಪ್ರಕಾಶ್ ರಾಜೇ ನಿಂಬಾಳ್ಕರ್ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನೆಗೆ ಸೇರುವ ಸಾಧ್ಯತೆಯಿದೆ.

# 'ನಾನು ಬಾತ್ರೂಮ್‌ನಲ್ಲಿದ್ದೇನೆ, ನಾನು ಫೋಟೋ ಕಳುಹಿಸಬೇಕೇ'?; ಬಂಡಾಯ ಸಂಸದ ಸಂಜಯ್ ದಿನಾ ಪಾಟೀಲ್‌ರ ಆಡಿಯೋ ಕ್ಲಿಪ್ ವೈರಲ್

ಮುಂಬಯಿ,ಜೂ.19- ಉದ್ಧವ್ ಠಾಕ್ರೆ ಅವರ ಪಕ್ಷದ 6 ಸಂಸದರು ಬಂಡಾಯ ಎದ್ದಿದ್ದು,ಈ ಸಂಸದರು ತಮ್ಮನ್ನು ಪ್ರತ್ಯೇಕ ಗುಂಪು ಆಗಿ ಪರಿಗಣಿಸುವಂತೆ ಕೋರಿ ಲೋಕಸಭೆ ಸ್ಪೀಕರ್‌ಗೆ ಪತ್ರವನ್ನು ಕೂಡ ನೀಡಿದ್ದಾರೆ. ಈ ಬಂಡಾಯ ಸಂಸದರಲ್ಲಿ ಸಂಜಯ್ ದಿನಾ ಪಾಟೀಲ್ ಅವರ ಹೆಸರೂ ಇದೆ. ಈ ಮಧ್ಯೆ ಸಂಜಯ್ ದಿನಾ ಪಾಟೀಲ್ ಅವರ ಕೆಲವು ಆಡಿಯೋ ತುಣುಕುಗಳು ಹೊರಬಂದಿವೆ.

ಈ ಆಡಿಯೋ ಕ್ಲಿಪ್‌ನಲ್ಲಿ, ಅವರು ತುಂಬಾ ಉದ್ರೇಕಗೊಂಡಿರುವುದು ಕಂಡುಬರುತ್ತದೆ. ವಿಶೇಷವೆಂದರೆ ಅವರು 'ನಾನು ಬಾತ್ರೂಮ್‌ನಲ್ಲಿದ್ದೇನೆ, ನಾನು ಫೋಟೋ ಕಳುಹಿಸಬೇಕೇ' ಎಂಬಂತೆ ಭಾಷೆಯನ್ನು ಬಳಸಿದ್ದಾರೆ. ಸಂಜಯ್ ದಿನಾ ಪಾಟೀಲ್,ನನಗೂ ಸಂಜಯ್ ರಾವುತ್‌ಗಿಂತ ಚೆನ್ನಾಗಿ ಅವಮಾನಿಸಲು ಬರುತ್ತದೆ ಎಂದು ಈ ಆಡಿಯೋ ಕ್ಲಿಪ್‌ನಲ್ಲಿ ಹೇಳುತ್ತಿರುವುದು ಕಂಡುಬರುತ್ತದೆ.

ಬಂಡಾಯ ಸಂಸದರ ಪಟ್ಟಿಯಲ್ಲಿ ಸಂಜಯ್ ದಿನಾ ಪಾಟೀಲ್ ಅವರ ಹೆಸರು ಕಾಣಿಸಿಕೊಂಡ ಬಳಿಕ ಕೋಲಾಹಲ ಉಂಟಾಯಿತು. ತಾನು ಎಲ್ಲಿಗೂ ಹೋಗುವುದಿಲ್ಲ ಎಂದು ಹೇಳಿದ್ದ ಈ ಸಂಜಯ್ ದಿನಾ ಪಾಟೀಲ್, ಠಾಕ್ರೆಸೇನೆಯ ಸಂಸದೀಯ ಪಕ್ಷದ ಸಭೆಗೆ ಗೈರುಹಾಜರಾಗಿದ್ದರು. ಬಳಿಕ ಅವರು ಬಂಡಾಯವೆದ್ದಿರುವುದು ಬಹುತೇಕ ಖಚಿತವಾಯಿತು.

ಪತ್ರಕರ್ತರು ಸಂಜಯ್ ದಿನಾ ಪಾಟೀಲ್ ನಿಜವಾಗಿಯೂ ಬಂಡಾಯವೆದ್ದಾರಾ? ಎಂದು ಕಂಡುಹಿಡಿಯಲು ಪ್ರಯತ್ನಿಸಿ ಅವರಿಗೆ ಕರೆ ಮಾಡಿದರು. ಆದರೆ ಈ ಫೋನ್ ಕರೆಯಲ್ಲಿ, ಸಂಜಯ್ ದಿನಾ ಪಾಟೀಲ್ ತುಂಬಾ ಕೋಪಗೊಂಡಿರುವುದು ಕಂಡುಬಂದಿದೆ.

'ನೀವು ಮುಂಬಯಿನಲ್ಲಿದ್ದೀರಾ?'ಎಂದು ಪತ್ರಕರ್ತರು ಕೇಳಿದರು. ಇದಕ್ಕೆ ಉತ್ತರಿಸುವಾಗ 'ನಾನು ಬಾತ್ರೂಮ್‌ನಲ್ಲಿದ್ದೇನೆ. ನಾನು ಈಗ ವೀಡಿಯೊ ಕರೆ ಮೂಲಕ ಅದನ್ನು ತೋರಿಸಲು ಸಾಧ್ಯವಿಲ್ಲ. ನಾನು ಫೋಟೋ ತೆಗೆದುಕೊಂಡು ನಿಮಗೆ ಕಳುಹಿಸಬೇಕೇ?' ಸಂಜಯ್ ದಿನಾ ಪಾಟೀಲ್ ತಮ್ಮ ಕೋಪವನ್ನು ವ್ಯಕ್ತಪಡಿಸಿದರು.

' ನೀವು ಯಾರಿಗಾದರೂ ಎಷ್ಟು ತೊಂದರೆ ನೀಡಬಹುದು ಎಂಬುದಕ್ಕೆ ಮಿತಿಗಳಿವೆ. ಪ್ರಸ್ತುತ, ನಾನು ಮುಂಬಯಿನಲ್ಲಿದ್ದೇನೆ. ನಾನು ಎಲ್ಲಿಗೆ ಹೋಗಬೇಕೆಂದು, ಏನು ಮಾಡಬೇಕೆಂದು ನೀವು ಅರ್ಥಮಾಡಿಕೊಳ್ಳುವಿರಿ. ನಾನು ಇದನ್ನು ಅಡಗಿಕೊಂಡು ಮಾಡಲು ಸಾಧ್ಯವಿಲ್ಲ. ನೀವು ಎಲ್ಲವನ್ನೂ ಅರ್ಥಮಾಡಿಕೊಳ್ಳುವಿರಿ' ಎಂದು ಸಂಜಯ್ ದಿನಾ ಪಾಟೀಲ್ ಪತ್ರಕರ್ತರಿಗೆ ಹೇಳಿದರು.

'ನನಗೆ ಮತ್ತು ನನ್ನ ಕುಟುಂಬಕ್ಕೆ ತೊಂದರೆ ಕೊಡಬೇಡಿ. ನನಗೂ ಸಂಜಯ್ ರಾವುತ್‌ಗಿಂತ ಉತ್ತಮವಾಗಿ ಅವಮಾನ ಮಾಡಲು ಬರುತ್ತದೆ' ಎಂದು ಪಾಟೀಲ್ ಹೇಳುತ್ತಿರುವುದು ಈ ಆಡಿಯೋ ಕ್ಲಿಪ್‌ನಲ್ಲಿ ಕಂಡುಬರುತ್ತದೆ.

# ಸಿಎ ಪರೀಕ್ಷೆಯಲ್ಲಿ ಆಶಿಶ್ ಶೆಟ್ಟಿ ಉತ್ತೀರ್ಣ



ಉಡುಪಿ, ಜೂ. 19 - ಇಲ್ಲಿಗೆ ಸಮೀಪದ ಶಿರೂರು ಹೊಸಮನೆ ನಿವಾಸಿ, ಆಶಿಶ್ ಶೆಟ್ಟಿ ಅವರು 2025-26ನೇ ಸಾಲಿನ ಸಿಎ ಪರೀಕ್ಷೆಯಲ್ಲಿ ಅತ್ಯುತ್ತಮ ಅಂಕ ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಇವರು ಮುಂಬೈ ಮತ್ತು ಮಂಗಳೂರಿನಲ್ಲಿ ಸಿಎ ವ್ಯಾಸಂಗ ಮಾಡಿರುತ್ತಾರೆ. ಇವರು ಶಿರೂರು ಹೊಸ ಮನೆ ದಿವಂಗತ ಬಿ ಶಿವರಾಮ ಶೆಟ್ಟಿ ಅವರ ಮೊಮ್ಮಗ ಹಾಗೂ ಮುಂಬೈ ಪರೇಲ್ ಬೋಯ್‌ವಾಡ ಮಿಲೇನಿಯಂ ಹೋಟೆಲ್‌ನ ರಮಾನಾಥ ಶೆಟ್ಟಿಯವರ ಸಂಬಂಧಿ ಹಾಗೂ ಶಿರೂರು ಹೊಸಮನೆ ಅನಿತಾ ಶೆಟ್ಟಿ ದಂಪತಿಯ ಪುತ್ರ.

# ಸಂಜಯ್ ದಿನಾ ಪಾಟೀಲ್ ಮಗಳಿಗೆ ಬಿಎಂಸಿ ಟಿಕೆಟ್ ನೀಡಬೇಡಿ ಎಂದು ಠಾಕ್ರೆಗೆ ಮೊದಲೇ ಹೇಳಿದ್ದೆ; ಮನಸೇ ನಾಯಕ

ಮುಂಬಯಿ,ಜೂ.19 - ಸಂಜಯ್ ದಿನಾ ಪಾಟೀಲ್ ಅವರ ಮಗಳಿಗೆ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಟಿಕೆಟ್ ನೀಡಬೇಡಿ.ಅವರು ಏಕನಾಥ್ ಶಿಂದೆ ಅವರ ಶಿವಸೇನೆಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ಉದ್ಧವ್ ಠಾಕ್ರೆ ಅವರಿಗೆ ಈಗಾಗಲೇ ತಿಳಿಸಲಾಗಿತ್ತು ಎಂದು ಮನಸೇ ನಾಯಕ ಸಂದೀಪ್ ದೇಶಪಾಂಡೆ ಬಹಿರಂಗಪಡಿಸಿದ್ದಾರೆ.

ಈ ಹಂತದಲ್ಲಿ ಮಾಜಿ ಮನಸೇ ಕಾರ್ಪೊರೇಟರ್‌ಗೆ ಟಿಕೆಟ್ ನೀಡಲು ನಾವು ಒತ್ತಾಯಿಸುತ್ತಿದ್ದೇವೆ ಎಂದು ಅವರು ಹೇಳಿದರು.

ಈಶಾನ್ಯ ಮುಂಬಯಿ ಸಂಸದ ಸಂಜಯ್ ದಿನಾ ಪಾಟೀಲ್ ಸೇರಿದಂತೆ 6 ಠಾಕ್ರೆಸೇನೆ ಸಂಸದರು ಶಿಂದೆ ಅವರ ಶಿವಸೇನೆಗೆ ಹೋಗುತ್ತಿದ್ದಾರೆ. ಅವರ ಮಗಳು ರಾಜುಲ್ ಪಾಟೀಲ್ (ರಾಜೂಲ್ ಸಂಜಯ್ ಪಾಟೀಲ್) ಭಾಂಡೂಪ್‌ನ ಠಾಕ್ರೆಸೇನೆ ಕಾರ್ಪೊರೇಟರ್.

ಸಂಜಯ್ ದಿನಾ ಪಾಟೀಲ್ ಅವರ ಮಗಳು ರಾಜುಲ್ ಪಾಟೀಲ್ ಭಾಂಡೂಪ್‌ನ ವಾರ್ಡ್ ಸಂಖ್ಯೆ 114ರ ಕಾರ್ಪೊರೇಟರ್. ಮನಸೇ ಈ ಸ್ಥಾನವನ್ನು ಪಡೆದುಕೊಂಡಿತ್ತು. ಆದರೆ ಸರಿಯಾದ ಸಮಯದಲ್ಲಿ ಉದ್ಧವ್ ಠಾಕ್ರೆ, ಸಂಜಯ್ ರಾವುತ್ ಮತ್ತು ಆದಿತ್ಯ ಠಾಕ್ರೆ ಅವರ ಹಸ್ತಕ್ಷೇಪದಿಂದಾಗಿ, ರಾಜುಲ್ ಪಾಟೀಲ್ ಅವರಿಗೆ ನಾಮನಿರ್ದೇಶನ ನೀಡಲಾಯಿತು. ಈಗ ಮನಸೇಯ ಸಂದೀಪ್ ದೇಶಪಾಂಡೆ ಈ ಬಗ್ಗೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಠಾಕ್ರೆಸೇನೆ ಸಂಸದ ಸಂಜಯ್ ದಿನಾ ಪಾಟೀಲ್ ಏಕನಾಥ್ ಶಿಂದೆ ಅವರ ಶಿವಸೇನೆಯೊಂದಿಗೆ ಸಂಪರ್ಕದಲ್ಲಿದ್ದಾರೆ. ಆ ಸಮಯದಲ್ಲಿ ನಾನು ಉದ್ಧವ್ ಠಾಕ್ರೆ ಅವರಿಗೆ ಸಂಜಯ್ ದಿನಾ ಪಾಟೀಲ್ ಅವರ ಮಗಳಿಗೆ ಬಿಎಂಸಿ ಟಿಕೆಟ್ ನೀಡಬೇಡಿ ಎಂದು ಹೇಳಿದ್ದೆ ಎಂದು ದೇಶಪಾಂಡೆ ಹೇಳಿದ್ದಾರೆ.

ಸಂಸದ ಸಂಜಯ್ ದಿನಾ ಪಾಟೀಲ್ ಶಿಂದೆ ಅವರ ಶಿವಸೇನೆಯೊಂದಿಗೆ ಸಂಪರ್ಕದಲ್ಲಿದ್ದಾರೆ ಎಂದು ನನಗೆ ಈಗಾಗಲೇ ತಿಳಿದಿತ್ತು. ಆ ಸ್ಥಳದ ನಮ್ಮ ಮಾಜಿ ಕಾರ್ಪೊರೇಟರ್ ಅನಿಶಾ ಮಜ್ಗಾಂವ್ಕರ್ ಅವರಿಗೆ ಬಿಎಂಸಿ ಟಿಕೆಟ್ ನೀಡಬೇಕೆಂದು ನಾವು ಒತ್ತಾಯಿಸಿದ್ದೇವೆ. ಆ ಸಮಯದಲ್ಲಿ, ಸಂಜಯ್ ದಿನಾ ಪಾಟೀಲ್ ನಿಮ್ಮ ಪಕ್ಷದಲ್ಲಿ ಉಳಿಯುವುದಿಲ್ಲ ಎಂದು ನಾನು ಉದ್ಧವ್ ಠಾಕ್ರೆ ಮತ್ತು ಸಂಜಯ್ ರಾವುತ್ ಅವರಿಗೆ ಐಡಿಯಾ ನೀಡಿದ್ದೆ ಎಂದು ಅವರು ತಿಳಿಸಿದರು.

ಈ ಹಿಂದೆ 7 ಮನಸೇ ಕಾರ್ಪೊರೇಟರ್‌ಗಳು ಶಿವಸೇನೆಗೆ ಸೇರಿದ್ದರು.ಆ ಸಮಯದಲ್ಲಿ ಅನಿಲ್ ಪರಬ್ ಮೂರನೇ ಎರಡರಷ್ಟು ನಿಯಮವಿದೆ ಎಂದು ಕೂಗುತ್ತಿದ್ದರು. ಈಗ ತಮ್ಮದೇ ಪಕ್ಷದ ಅರವಿಂದ್ ಸಾವಂತ್ ಮತ್ತು ಸಂಜಯ್ ರಾವುತ್ ಇದೆಲ್ಲದರ ವಿರುದ್ಧ ಮಾತನಾಡುತ್ತಿದ್ದಾರೆ. ಆ ಸಮಯದಲ್ಲಿ, ನಮ್ಮ ಕಾರ್ಪೊರೇಟರ್‌ಗಳನ್ನು ಮುರಿದರು, ಇಂದು ಅವರ ಸಂಸದರು ಮುರಿದರು. ಇದೆಲ್ಲ ಸರಿಯಲ್ಲ ಎಂದು ಅವರು ಹೇಳಿದರು. ಇಂದು ಬೆಸ್ಟ್ ಬಸ್ ಮುಷ್ಕರವಿದೆ, ರಾಜ್ಯದಲ್ಲಿ ರೈತರು ಸಂಕಷ್ಟದಲ್ಲಿದ್ದಾರೆ, ಹಲವು ಪ್ರಶ್ನೆಗಳಿವೆ. ಆದರೆ ಸರಕಾರ ಪಕ್ಷ ಒಡೆಯುವಲ್ಲಿ ನಿರತವಾಗಿದೆ ಎಂದು ದೇಶಪಾಂಡೆ ಟೀಕಿಸಿದರು.

# ಸಂಸತ್ತಿನಲ್ಲಿ ಎನ್‌ಡಿಎ ಸಂಖ್ಯಾಬಲ ಹೆಚ್ಚಳಕ್ಕೆ ಬಿಜೆಪಿ ಯೋಜನೆ: ಶಿವಸೇನಾ (ಯುಬಿಟಿ) ನಾಯಕ ದಾನ್ವೆ

ಸಂಭಾಜಿನಗರ, ಜೂ.19 - ತಮ್ಮ ಪಕ್ಷವು ಪ್ರಸ್ತುತ ಎದುರಿಸುತ್ತಿರುವ ಬಂಡಾಯಕ್ಕೆ ಬಿಜೆಪಿಯನ್ನು ದೂಷಿಸಿರುವ ಶಿವಸೇನಾ (ಯುಬಿಟಿ) ನಾಯಕ ಅಂಬಾದಾಸ್ ದಾನ್ವೆ ಅವರು, ಇದು 2029ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋಲುವ ಭಯದಿಂದಾಗಿ ಸಂಸತ್ತಿನಲ್ಲಿ ಎನ್‌ಡಿಎಯ ಸಂಖ್ಯೆಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿರುವ ಆಡಳಿತ ಪಕ್ಷದ ಯೋಜನೆಯಾಗಿದೆ ಎಂದು ಆರೋಪಿಸಿದ್ದಾರೆ.

ಉದ್ಧವ್ ಠಾಕ್ರೆ ನೇತೃತ್ವದ ಸೇನಾ (ಯುಬಿಟಿ) ಕಳೆದ 4 ವರ್ಷಗಳಲ್ಲಿ ಎರಡನೇ ದೊಡ್ಡ ಬಂಡಾಯವನ್ನು ಎದುರಿಸುತ್ತಿದ್ದು, ಪಕ್ಷದ 6 ಸಂಸದರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನೆಗೆ ಸೇರುವ ಸಾಧ್ಯತೆಯಿದೆ.

ಗುರುವಾರ ಕರೆಯಲಾದ ಸೇನಾ (ಯುಬಿಟಿ) ಸಂಸದೀಯ ಪಕ್ಷದ ಸಭೆಯಲ್ಲಿ ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್ಚೌರೆ, ನಾಗೇಶ್ ಪಾಟೀಲ್-ಅಷ್ಟಿಕರ್‌ಮತ್ತು ಓಂಪ್ರಕಾಶ್ ರಾಜೇ ನಿಂಬಾಳ್ಕರ್ ಎಂಬ ಸಂಸದರು ಭಾಗವಹಿಸಲಿಲ್ಲ.

'ಈ ಸಂಪೂರ್ಣ ಯೋಜನೆಯ ಹಿಂದೆ ಬಿಜೆಪಿ ಇದೆ, ಆದರೆ ಏಕನಾಥ್ ಶಿಂದೆ ಅವರನ್ನು ಪ್ರಮುಖರನ್ನಾಗಿ ಮಾಡಲಾಗಿದೆ. ಡಿಲಿಮಿಟೇಶನ್ ಮಸೂದೆಯನ್ನು ಅಂಗೀಕರಿಸಲು ಸಂಸತ್ತಿನಲ್ಲಿ ಸಂಸದರ ಸಂಖ್ಯೆಯನ್ನು ಹೆಚ್ಚಿಸಲು ಈ ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ' ಎಂದು ದಾನ್ವೆ ಹೇಳಿದರು.

2029ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ತನ್ನ ಬಹುಮತವನ್ನು ಕಳೆದುಕೊಳ್ಳುವ ಭಯದಲ್ಲಿದೆ. ಶಿವಸೇನೆ (ಯುಬಿಟಿ) ಸಂಸದರನ್ನು ಒಳಗೊಂಡ ನಡೆಯುತ್ತಿರುವ ಚಟುವಟಿಕೆಗಳು ಸಂಸತ್ತಿನಲ್ಲಿ ಮಸೂದೆಯನ್ನು ಅಂಗೀಕರಿಸುವ ಭಾಗವಾಗಿದೆ. ಇದನ್ನು ಖಚಿತಪಡಿಸಿಕೊಳ್ಳಲು, ಬಿಜೆಪಿ ಈ ರೀತಿಯಲ್ಲಿ ಸಂಸದರನ್ನು ಸೆಳೆಯುತ್ತಿದೆ. ಅವರಿಗೆ ಯಾವುದೇ ಪಕ್ಷದ ಸಂಸದರ ಮೇಲೆ ಪ್ರೀತಿ ಇಲ್ಲ. ಆದರೆ ನಮ್ಮ ಪಕ್ಷದ ಸಂಸದರನ್ನು ಒಳಗೊಂಡ ಈ ಎಲ್ಲಾ ಗದ್ದಲವು ಈ ಯೋಜನೆಯ ಒಂದು ಭಾಗವಾಗಿದೆ ಎಂದು ಅವರು ಹೇಳಿದರು. 6 ಸಂಸದರ ಗುಂಪಿನ ಇಬ್ಬರು ಸದಸ್ಯರು ಕಳೆದ ವರ್ಷ ಈಗಾಗಲೇ ನಿರ್ಧಾರ ತೆಗೆದುಕೊಂಡಿದ್ದಾರೆ (ಪಕ್ಷ ಬದಲಾವಣೆಯ ಬಗ್ಗೆ) ಎಂದು ದಾನ್ವೆ ಛತ್ರಪತಿ ಸಂಭಾಜಿನಗರದಲ್ಲಿ ಆರೋಪಿಸಿದರು.

'ಒಂದು ವರ್ಷದ ಹಿಂದೆ ಪಕ್ಷದಲ್ಲಿ ಅಶಾಂತಿ ಕಂಡುಬಂದಿದೆ. 2025ರ ಸೆಪ್ಟೆಂಬರ್‌ನಲ್ಲಿ ಇಬ್ಬರು ಸದಸ್ಯರು ವಿಭಿನ್ನ ನಿರ್ಧಾರ ತೆಗೆದುಕೊಂಡರು. ಆದರೆ ಅವರು 6(ಪಕ್ಷಾಂತರ ವಿರೋಧಿ ಕಾನೂನಿನಡಿಯಲ್ಲಿ ಅನರ್ಹತೆಯನ್ನು ತಪ್ಪಿಸಲು ಅಗತ್ಯವಿರುವ ಸಂಸದರು) ಸಂಖ್ಯೆಯನ್ನು ತಲುಪಲು ಸಾಧ್ಯವಾಗಲಿಲ್ಲ. ಆ ಸಂಖ್ಯೆಯನ್ನು ತಲುಪಿದ ಬಳಿಕ ಆಡಳಿತ ಪಕ್ಷಗಳ ಯೋಜನೆ ಆರಂಭವಾಯಿತು' ಎಂದು ಅವರು ಹೇಳಿದ್ದಾರೆ.

# ಚುನ್ನಾಭಟ್ಟಿ: 17 ಅಂತಸ್ತಿನ ಕಟ್ಟಡದ ಟೆರೇಸ್‌ನಿಂದ ಕಾಂಕ್ರೀಟ್ ಬಿದ್ದು ಪಾದಚಾರಿ ಸಾವು

ಮುಂಬಯಿ, ಜೂ. 19 - ಮುಂಬೈನ ಚುನಾಭಟ್ಟಿ ಪ್ರದೇಶದ 17 ಅಂತಸ್ತಿನ ವಸತಿ ಕಟ್ಟಡದ ಟೆರೇಸ್ ಮೇಲಿನ ಪ್ಯಾರಪೆಟ್ ಗೋಡೆಯಿಂದ ಕಾಂಕ್ರೀಟ್ ಬಿದ್ದು 55 ವರ್ಷದ ವ್ಯಕ್ತಿಯೊಬ್ಬರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖುರೇಷಿ ನಗರ ಪ್ರದೇಶದ ಗ್ಯಾಲಕ್ಸಿ ಅಪಾರ್ಟ್‌ಮೆಂಟ್‌ನಲ್ಲಿ ಶುಕ್ರವಾರ ಬೆಳಗಿನ ಜಾವ 12.30ರ ಸುಮಾರಿಗೆ ಈ ಘಟನೆ ಸಂಭವಿಸಿದೆ ಎಂದು ಅವರು ಹೇಳಿದರು.

ಮುಂಬೈ ಅಗ್ನಿಶಾಮಕ ದಳವನ್ನು ಉಲ್ಲೇಖಿಸಿ, ಕಟ್ಟಡದ ಟೆರೇಸ್ ಮೇಲಿನ ಪ್ಯಾರಪೆಟ್ ಗೋಡೆಯಿಂದ ಪ್ಲಾಸ್ಟರ್ ತುಂಡು ಬಿದ್ದು ಪಾದಚಾರಿಯೊಬ್ಬರಿಗೆ ಬಡಿದಿದೆ ಎಂದು ಪಾಲಿಕೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಬ್ದುಲ್ ವಹಾಬ್ ಎಂದು ಗುರುತಿಸಲಾದ ವ್ಯಕ್ತಿಯನ್ನು ತುರ್ತು ಸೇವೆಗಳು ಬರುವ ಮೊದಲು ಖಾಸಗಿ ವಾಹನದಲ್ಲಿ ಪಾಲಿಕೆ ನಡೆಸುವ ಸಯಾನ್ ಆಸ್ಪತ್ರೆಗೆ ಸಾಗಿಸಲಾಯಿತು. ಆಸ್ಪತ್ರೆಯ ವೈದ್ಯರು ಅವರನ್ನು 'ಮೃತ' ಎಂದು ಘೋಷಿಸಿದರು.

ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ಪ್ಯಾರಪೆಟ್ ಗೋಡೆಯ ಅನಿಶ್ಚಿತವಾಗಿ ನೇತಾಡುತ್ತಿದ್ದ ಭಾಗವನ್ನು ತೆಗೆದುಹಾಕಿ, ಮುನ್ನೆಚ್ಚರಿಕೆ ಕ್ರಮವಾಗಿ ಪ್ರದೇಶವನ್ನು ಸುತ್ತುವರೆದರು ಎಂದು ಅಧಿಕಾರಿ ಹೇಳಿದರು.

# ಕೇಂದ್ರ ಸಚಿವ ಸ್ಥಾನ ಸಿಗದ ಬಂಡಾಯ ಸಂಸದರಿಗೆ ಹೆಚ್ಚುವರಿ 25 ಕೋ.ರೂ; ಸಂಜಯ್ ರಾವುತ್ ಆರೋಪ

ಮುಂಬಯಿ, ಜೂ.19 - ಶಿವಸೇನೆ (ಯುಬಿಟಿ) ತೊರೆದ ಭಿನ್ನಮತೀಯ ಸಂಸದರಲ್ಲಿ ಯಾರು ಕೇಂದ್ರ ಸಚಿವರಾಗುತ್ತಾರೆ ಎಂಬುದರ ಕುರಿತು ಭಿನ್ನಾಭಿಪ್ರಾಯವಿದ್ದು, ಅವಕಾಶ ಸಿಗದವರಿಗೆ 25 ಕೋ.ರೂ ಹೆಚ್ಚುವರಿಯಾಗಿ ನೀಡಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಶಿವಸೇನೆ (ಯುಬಿಟಿ) ನಾಯಕ ಸಂಜಯ್ ರಾವುತ್ ಹೇಳಿದ್ದಾರೆ.

ಸೇನಾ (ಯುಬಿಟಿ) ಸಂಸದರಾದ ಸಂಜಯ್ ದಿನಾ ಪಾಟೀಲ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಭೌಸಾಹೇಬ್ ವಾಕ್ಚೌರೆ, ನಾಗೇಶ್ ಪಾಟೀಲ್-ಅಷ್ಟಿಕರ್‌ಮತ್ತು ಓಂಪ್ರಕಾಶ್ ರಾಜೇ ನಿಂಬಾಳ್ಕರ್ ಅವರು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಏಕನಾಥ್ ಶಿಂದೆ ನೇತೃತ್ವದ ಆಡಳಿತಾರೂಢ ಶಿವಸೇನೆಗೆ ಸೇರುವ ಸಾಧ್ಯತೆಯಿದೆ. ಗುರುವಾರ ಕರೆಯಲಾದ ಸೇನಾ (ಯುಬಿಟಿ) ಸಂಸದೀಯ ಪಕ್ಷದ ಸಭೆಯಲ್ಲಿ ಈ ಸಂಸದರು ಭಾಗವಹಿಸಲಿಲ್ಲ.

ಸುದ್ದಿಗಾರರೊಂದಿಗೆ ಮಾತನಾಡಿದ ರಾವುತ್ ಅವರು, ಕೇಂದ್ರದಲ್ಲಿ ಯಾರು ಸಚಿವರಾಗುತ್ತಾರೆ ಎಂಬುದರ ಕುರಿತು ಬಂಡಾಯ ಗುಂಪಿನಲ್ಲಿ ಘರ್ಷಣೆಗಳಿವೆ.6 ಜನರಲ್ಲಿ ಒಬ್ಬರು ಮಾತ್ರ ಸಚಿವರಾಗಬಹುದು, ಆದ್ದರಿಂದ ಉಳಿದವರಿಗೆ ಹೆಚ್ಚುವರಿಯಾಗಿ 25 ಕೋ.ರೂ.ಗಳನ್ನು ನೀಡಲು ಇತ್ಯರ್ಥಪಡಿಸಲಾಗಿದೆ ಎಂದು ಆರೋಪಿಸಿದರು.

ಈಶಾನ್ಯ ಮುಂಬಯಿ ಸಂಸದ ಸಂಜಯ್ ದಿನಾ ಪಾಟೀಲ್ ಬಂಡಾಯವೆದ್ದಿದ್ದಕ್ಕಾಗಿ ಟೀಕಿಸಿದ ರಾವುತ್, ಪಕ್ಷವನ್ನು ತ್ಯಜಿಸಲು ಅವರಿಗೆ ಯಾವುದೇ ಕಾರಣವಿಲ್ಲ.ಅವರ ಮಗಳು ರಾಜೂಲ್ ಪಾಟೀಲ್‌ಗೆ ಕೂಡ ನಿಷ್ಠಾವಂತ ವ್ಯಕ್ತಿಯನ್ನು ನಿರ್ಲಕ್ಷಿಸಿ ಬೃಹನ್ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ) ಟಿಕೆಟ್ ನೀಡಲಾಯಿತು ಎಂದರು.

ಗುರುವಾರ ದಿಲ್ಲಿಯಲ್ಲಿ ಪಕ್ಷ ಕರೆದ ಸಭೆಯಲ್ಲಿ ಸಂಜಯ್ ದಿನಾ ಪಾಟೀಲ್ ಭಾಗವಹಿಸುತ್ತಾರೆ ಎಂದು ನಮಗೆ ತುಂಬಾ ವಿಶ್ವಾಸವಿತ್ತು ಎಂದು ರಾವುತ್ ಹೇಳಿದರು.

ಬಂಡಾಯ ಸಂಸದರಿಗೆ 'ವೈ-ಪ್ಲಸ್' ಭದ್ರತೆಯನ್ನು ನೀಡಿದ್ದಕ್ಕಾಗಿ ಮಹಾರಾಷ್ಟ್ರ ಸರಕಾರದ ವಿರುದ್ಧ ಟೀಕಾದಾಳಿ ಮಾಡಿದ ಅವರು, ಯಾವುದೇ ರಕ್ಷಣೆಯಿಲ್ಲದೆ ಅಲೆದಾಡುವಂತೆ ಅವರಿಗೆ ಸವಾಲು ಹಾಕಿದರು.

ಪೊಲೀಸ್ ಇಲಾಖೆ ದೇಶದ್ರೋಹಿಗಳ ರಕ್ಷಣೆಗಾಗಿ ಮಾತ್ರ ಇರುವುದು. ಆದರೆ ಇದು ಸಾರ್ವಜನಿಕ ಹಣದ ವ್ಯರ್ಥ.ಭಿನ್ನಮತೀಯ ಸಂಸದರು ಮೊದಲು ರಾಜೀನಾಮೆ ನೀಡಿ ಜನರಿಂದ ಹೊಸ ಜನಾದೇಶವನ್ನು ಪಡೆಯಬೇಕು ಎಂದು ರಾವುತ್ ಹೇಳಿದರು.

# 6 ಅಲ್ಲ,ಠಾಕ್ರೆಸೇನೆಯ 7ನೇ ಸಂಸದರು ಕೂಡ ಪತ್ರಕ್ಕೆ ಸಹಿ ಹಾಕಿದ್ದಾರೆ; ರಾಮ್‌ದಾಸ್ ಕದಂ

ಮುಂಬಯಿ,ಜೂ.19- ಶಿವಸೇನೆ (ಯುಬಿಟಿ)ಯ 6 ಸಂಸದರು ಪಕ್ಷದಿಂದ ಬೇರ್ಪಡುವ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಅಚ್ಚರಿಯ ಹೇಳಿಕೆಯೊಂದನ್ನು ನೀಡಿರುವ ಏಕನಾಥ್ ಶಿಂದೆ ನೇತೃತ್ವದ ಶಿವಸೇನೆ ನಾಯಕ ರಾಮ್‌ದಾಸ್ ಕದಂ ಅವರು, ಕೇವಲ 6 ಅಲ್ಲ 7ನೇ ಸಂಸದರು ಕೂಡ ಲೋಕಸಭಾ ಸ್ಪೀಕರ್‌ಗೆ ನೀಡಿದ ಪತ್ರಕ್ಕೆ ಸಹಿ ಹಾಕಿರುವುದಾಗಿ ಹೇಳಿದ್ದಾರೆ.

ಕದಂ ಅವರ ಈ ಹೇಳಿಕೆ ಠಾಕ್ರೆಸೇನೆಯಲ್ಲಿ ಮತ್ತೆ ಕೋಲಾಹಲವನ್ನು ಸೃಷ್ಟಿಸಿದೆ.

'ನಿಮ್ಮ (ಉದ್ಧವ್ ಠಾಕ್ರೆ) ಸುತ್ತಲಿನ ಜನರೇ ನಿಮ್ಮನ್ನು ಮೋಸ ಮಾಡುತ್ತಿದ್ದಾರೆ. 6 ಜನರಲ್ಲ, 7ನೇ ಸಂಸದರು ಕೂಡ ಆ ಪತ್ರಕ್ಕೆ ಸಹಿ ಹಾಕಿದ್ದಾರೆ ಮತ್ತು ಆ ಸಂಸದರು ಇಂದು ನಿಮ್ಮ (ಉದ್ಧವ್ ಠಾಕ್ರೆ) ಪಕ್ಕದಲ್ಲಿ ಕುಳಿತಿದ್ದಾರೆ. ಆ 7ನೇ ಸಂಸದರು ಸಚಿವ ಸ್ಥಾನಕ್ಕಾಗಿ ಬೇಡಿಕೆ ಇಟ್ಟಿದ್ದರು.ಅವರು 'ಮೊದಲು ನನಗೆ ಸಚಿವ ಸ್ಥಾನದ ಮಾತು ಕೊಡಿ' ಎಂದು ಹೇಳುತ್ತಿದ್ದರು. ಆ 7ನೇ ಸಂಸದರು ಆ ಪತ್ರಕ್ಕೂ ಸಹಿ ಹಾಕಿದ್ದಾರೆ. ಆದಾಗ್ಯೂ, ಈಗ ನಿಮ್ಮ ಪಕ್ಕದಲ್ಲಿ ಕುಳಿತಿರುವವರು ಅವರೇ. ಉದ್ಧವ್‌ಜಿ ನಿಮ್ಮನ್ನು ಅವರು ಮೋಸ ಮಾಡುತ್ತಿದ್ದಾರೆ, ಈ ಜನರು ನಿಮ್ಮ ಮುಗ್ಧತೆಯ ಲಾಭವನ್ನು ಪಡೆದುಕೊಳ್ಳುತ್ತಿದ್ದಾರೆ' ಎಂದು ಕದಂ ಮಾಧ್ಯಮಗಳೊಂದಿಗೆ ಮಾತನಾಡುತ್ತಾ ಹೇಳಿದರು.

ಇದೇ ವೇಳೆ ಶಿಂದೆಸೇನೆ ನಾಯಕ ಹಾಗೂ ಸಚಿವ ಶಂಭುರಾಜ್ ದೇಸಾಯಿ ಕೂಡ ಹೇಳಿಕೆಯೊಂದನ್ನು ನೀಡಿ, ಠಾಕ್ರೆ ಗುಂಪಿನ ಸಂಸದರಲ್ಲಿ ಅಸಮಾಧಾನ ಮತ್ತು ಅಶಾಂತಿ ಇದೆ ಎಂದು ನಾನು ಅವರಿಗೆ ಹೇಳಿದ್ದೆ. ಏಕೆಂದರೆ ನಾವೆಲ್ಲರೂ ಒಟ್ಟಿಗೆ ಕೆಲಸ ಮಾಡಿದ್ದೇವೆ. ಈಗಲೂ ಕೂಡ ನಾವು ಸದನದಲ್ಲಿ ಪರಸ್ಪರ ಭೇಟಿಯಾಗುತ್ತೇವೆ. ಈ 6 ಸಂಸದರ ಮೂಲಕ ಅಸಮಾಧಾನ ಹೊರಬಂದಿದೆ.ಠಾಕ್ರೆ ಗುಂಪಿನ ಎಂಎಲ್‌ಎಗಳ ಪರಿಸ್ಥಿತಿಯೂ ಈ 6 ಸಂಸದರಿಗಿಂತ ಭಿನ್ನವಾಗಿಲ್ಲ ಎಂದು ವರದಿಗಾರರ ಬಳಿ ತಿಳಿಸಿದರು.

# ಪುಣೆ: ಭಾವಿ ಪತ್ನಿಯ ಹುಟ್ಟುಹಬ್ಬ ಆಚರಣೆಗೆ ತೆರಳಿದ್ದ ವ್ಯಕ್ತಿ ಫೋಟೋ ತೆಗೆಯುವಾಗ ಕಣಿವೆಗೆ ಬಿದ್ದು ದುರಂತ ಸಾವು

ಪುಣೆ, ಜೂ. 19 - ತನ್ನ ಭಾವಿ ಪತ್ನಿಯ ಹುಟ್ಟುಹಬ್ಬ ಆಚರಿಸಲು ಮಹಾರಾಷ್ಟ್ರದ ಪುಣೆ ಜಿಲ್ಲೆಯ ಐತಿಹಾಸಿಕ ಲೋಹಗಡ್ ಕೋಟೆಗೆ ಹೋಗಿದ್ದ ಕೇತನ್ ವಿಶಾಲ್ ಅಗರ್ವಾಲ್ ಅಲ್ಲಿನ ಮಂಜಿನಿಂದ ಕೂಡಿದ ಮತ್ತು ಅದ್ಭುತವಾದ ಕಣಿವೆಗಳ ನಡುವೆ ಫೋಟೋಗಳನ್ನು ತೆಗೆಯುವಾಗ 400 ಅಡಿ ಆಳದ ಕಣಿವೆಗೆ ಬಿದ್ದು ದುರುಂತ ಸಾವನ್ನಪ್ಪಿದ್ದಾರೆ.

ಪುಣೆ ನಗರದ ಬಳಿಯ ಗಹುಂಜೆ ನಿವಾಸಿ ಮತ್ತು ಅವರ ಕುಟುಂಬದ ರಿಯಲ್ ಎಸ್ಟೇಟ್ ಕಂಪನಿಯ ನಿರ್ದೇಶಕರಾಗಿರುವ 26 ವರ್ಷದ ಅಗರ್ವಾಲ್ ಗುರುವಾರ ಬೆಳಿಗ್ಗೆ ಫೋಟೋ ತೆಗೆಯುತ್ತಿದ್ದಾಗ ಬಲವಾದ ಗಾಳಿಯಿಂದಾಗಿ ಸಮತೋಲನ ಕಳೆದುಕೊಂಡರು ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ತನ್ನ ನಿಶ್ಚಿತಾರ್ಥದ ವಧು ಮತ್ತು ಇಬ್ಬರು ಆಪ್ತರೊಂದಿಗೆ ಆಕೆಯ ಹುಟ್ಟುಹಬ್ಬವನ್ನು ಆಚರಿಸಲು ಕೋಟೆಗೆ ಹೋಗಿದ್ದಾಗ ಈ ಅಪಘಾತ ಸಂಭವಿಸಿದೆ.

ಪೊಲೀಸರ ಪ್ರಕಾರ, ಬೆಳಿಗ್ಗೆ 10:30 ರ ಸುಮಾರಿಗೆ ಫೋಟೋಗಳನ್ನು ತೆಗೆಯುವಾಗ, ಅವರು ಬಂಡೆಯಿಂದ ಜಾರಿ 400 ಅಡಿ ಆಳದ ಕಮರಿಗೆ ಬಿದ್ದು ಮಾರಣಾಂತಿಕವಾಗಿ ಸಾವನ್ನಪ್ಪಿದ್ದಾರೆ.

ಘಟನೆಯ ಸಮಯದಲ್ಲಿ ಬಲವಾದ ಗಾಳಿ ಬೀಸುತ್ತಿತ್ತು ಎಂದು ಲೋನಾವಾಲ ಗ್ರಾಮೀಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ದಿನೇಶ್ ಟೇಡೆ ಹೇಳಿದ್ದಾರೆ.

ನವೆಂಬರ್‌ನಲ್ಲಿ ಅಗರ್ವಾಲ್ ಅವರ ಮದುವೆ ನಿಗದಿಯಾಗಿತ್ತು ಮತ್ತು ಕುಟುಂಬಗಳು ರಾಜಸ್ಥಾನದ ಉದಯಪುರದಲ್ಲಿ ಮದುವೆಗಾಗಿ ಅರಮನೆಯನ್ನು ಕಾಯ್ದಿರಿಸಿದ್ದರು ಎಂದು ತಿಳಿದುಬಂದಿದೆ ಎಂದು ಟೇಡೆ ಹೇಳಿದರು.

ಮಾಹಿತಿ ಪಡೆದ ನಂತರ, ಪೊಲೀಸರು ಮತ್ತು ಶಿವದುರ್ಗ ಮಿತ್ರ ತುರ್ತು ರಕ್ಷಣಾ ತಂಡದ ಸದಸ್ಯರು ಕಷ್ಟಕರವಾದ ಭೂಪ್ರದೇಶ ಮತ್ತು ದಟ್ಟವಾದ ಪೊದೆಗಳಿಂದ ಶವವನ್ನು ಹೊರತೆಗೆಯಲು ಮೂರು ಗಂಟೆಗಳ ಕಾರ್ಯಾಚರಣೆ ನಡೆಸಿದರು ಎಂದು ಅವರು ಹೇಳಿದರು.

ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಲಾಗಿದೆ. ಆಕಸ್ಮಿಕ ಸಾವಿನ ವರದಿಯನ್ನು ದಾಖಲಿಸಲಾಗಿದೆ ಮತ್ತು ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮರಾಠಾ ಸಾಮ್ರಾಜ್ಯದ ಸ್ಥಾಪಕ ಛತ್ರಪತಿ ಶಿವಾಜಿ ಮಹಾರಾಜರ ಇತಿಹಾಸದೊಂದಿಗೆ ಲೋಹಗಢ ಕೋಟೆ ಸಂಬಂಧಿಸಿದೆ. ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ಸೇರಿಸಲಾದ ಮಹಾರಾಷ್ಟ್ರದ 12 ಕೋಟೆಗಳಲ್ಲಿ ಇದು ಒಂದಾಗಿದೆ.

# ವಡೋದರಾ: 4 ಕೋಟಿ ರೂ.ಗೂ ಅಧಿಕ ಮೌಲ್ಯದ ಅಕ್ರಮ ಮದ್ಯದ ಮೇಲೆ ಬುಲ್ಡೋಜರ್



ವಡೋದರಾ, ಜೂ. 19 - ವಡೋದರಾ ನಗರದಲ್ಲಿ ಅಧಿಕಾರಿಗಳು ವಶಪಡಿಸಿಕೊಂಡ 4 ಕೋಟಿ ರೂ.ಗೂ ಹೆಚ್ಚು ಮೌಲ್ಯದ ಅಕ್ರಮ ವಿದೇಶಿ ಮದ್ಯವನ್ನು ಪೊಲೀಸರು ರೋಡ್ ರೋಲರ್ ಮತ್ತು ಬುಲ್ಡೋಜರ್ ಬಳಸಿ ನಾಶಪಡಿಸಿದ್ದಾರೆ ಎಂದು ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ಗುಜರಾತ್ ಒಂದು ಮದ್ಯ ಮುಕ್ತ ರಾಜ್ಯವಾಗಿದ್ದು, ಅಲ್ಲಿ ಮದ್ಯ ತಯಾರಿಕೆ, ಮಾರಾಟ, ಸಂಗ್ರಹಣೆ ಮತ್ತು ಸೇವನೆಯನ್ನು ನಿಷೇಧಿಸಲಾಗಿದೆ. "ವಡೋದರಾದ ಕೊಯಾಲಿ ಪ್ರದೇಶದಲ್ಲಿ 313 ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ 4 ಕೋಟಿ ರೂ.ಗೂ ಹೆಚ್ಚು ಮೌಲ್ಯದ ವಿದೇಶಿ ಮದ್ಯವನ್ನು ನಾಶಪಡಿಸಲಾಗಿದೆ" ಎಂದು ಪೊಲೀಸ್ ಉಪ ಆಯುಕ್ತ ಜೆ.ಎಂ. ಚಾವ್ಡಾ ಹೇಳಿದರು. ಗುರುವಾರ ನಾಲ್ವರು ಸಹಾಯಕ ಪೊಲೀಸ್ ಆಯುಕ್ತರು, 14 ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಕಲೆಕ್ಟರೇಟ್ ಪ್ರತಿನಿಧಿಗಳು ಮತ್ತು ನಿಷೇಧ ಮತ್ತು ಅಬಕಾರಿ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ ರೋಡ್ ರೋಲರ್ ಮತ್ತು ಬುಲ್ಡೋಜರ್ ಬಳಸಿ ಮದ್ಯವನ್ನು ನಾಶಪಡಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಗುಜರಾತ್‌ನ ನಿಷೇಧ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಮತ್ತು ರಾಜ್ಯದಲ್ಲಿ ಅಕ್ರಮ ಮದ್ಯ ವ್ಯಾಪಾರವನ್ನು ತಡೆಯಲು ನಡೆಯುತ್ತಿರುವ ಪ್ರಯತ್ನಗಳ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿಪಿ ಚಾವ್ಡಾ ಹೇಳಿದರು.

# ಪಕ್ಷದ ಮೀರ್ ಸಾದಿಕರ ವಿರುದ್ಧ ಖಂಡಿತ ಶಿಸ್ತುಕ್ರಮ ಕೈಗೊಳ್ಳಲಾಗುವುದು : ವಿಜಯೇಂದ್ರ

ಬೆಂಗಳೂರು, ಜೂ. 19 - ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರನ್ನು ಕ್ಷಮಿಸುವ ಪ್ರಶ್ನೆಯೇ ಇಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹಾಗೂ ಶಾಸಕ ಬಿ.ವೈ. ವಿಜಯೇಂದ್ರ ಅವರು ಹೇಳಿದ್ದಾರೆ.

ನಗರದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಕ್ಷದ ಮೀರ್ ಸಾದಿಕರ ವಿರುದ್ಧ ಖಂಡಿತ ಶಿಸ್ತುಕ್ರಮ ಕೈಗೊಳ್ಳಲಾಗುವುದು. ಅಡ್ಡ ಮತದಾನವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದೆ ಎಂದರು.

ಎಂಟು ದಿನಗಳ ಹಿಂದೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕರೆ ಮಾಡಿ ಮೂರನೇ ಅಭ್ಯರ್ಥಿ ಕಣಕ್ಕಿಳಿಸೋಣ ಎಂದು ಹೇಳಿದ್ದರು. ನೀವಾದರೂ ಹಾಕಿ ನಾವಾದರೂ ಹಾಕ್ತೀವಿ. ಒಳ್ಳೆ ಉದ್ದೇಶ ಇಟ್ಟುಕೊಂಡು ಫೈಟ್ ಮಾಡೋಣ ಎಂದಿದ್ದರು. ಆಗ ನೀವೇ ಅಭ್ಯರ್ಥಿ ಹಾಕಿ ಒಟ್ಟಾಗಿ ಸೇರಿಸುತ ಮಾಡೋಣ ಎಂದು ತಿಳಿಸಿದೆ. ಎರಡೂ ಪಕ್ಷಗಳ ಉದ್ದೇಶ ಒಂದೇ ಆಗಿತ್ತು. ನಿನ್ನೆ ನಡೆದ ಮತದಾನದಲ್ಲಿ ಜೆಡಿಎಸ್‌ನಿಂದ ಆರೇಳು ಅಡ್ಡ ಮತದಾನ ಆಗಿದೆ. ಬಿಜೆಪಿಯಿಂದ ನಾಲ್ಕೈದು ಅಡ್ಡ ಮತದಾನ ಆಗಿದೆ. ಇದರಿಂದ ಎರಡೂ ಪಕ್ಷಗಳಿಗೆ ಬೇಸರವಾಗಿದೆ ಎಂದು ಹೇಳಿದರು.

ಯಾರು ಅಡ್ಡ ಮತದಾನ ಮಾಡಿ ಆಟ ಆಡಿರಬಹುದು ಎಂಬ ಮಾಹಿತಿ ಸಿಕ್ಕಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಮಾಹಿತಿ ನೀಡಲು ಭೇಟಿ ಮಾಡಲು ಅವಕಾಶಕ್ಕೆ ಮನವಿ ಮಾಡಿದ್ದೇನೆ. ಅವರು ಯಾವಾಗ ಅವಕಾಶ ಕೊಟ್ಟರೂ ಭೇಟಿ ಮಾಡಿ ವಿವರ ನೀಡಲಿದ್ದೇನೆ ಎಂದು ವಿವರಿಸಿದರು.



ಬಿಜೆಪಿ ಚಿಹ್ನೆಯಲ್ಲಿ ಗೆದ್ದು ಚುನಾವಣೆಯಲ್ಲಿ ಈ ರೀತಿ ಮತದಾನ ಮಾಡ್ತಾರೆ ಎಂದರೆ ಅವರಿಗೆ ಗೆರೆ ಎಳೆಯುವ ಕೆಲಸವನ್ನು ಪಕ್ಷ ಮಾಡಲಿದೆ. ಎಲ್ಲಕ್ಕೂ ಒಂದು ಮಿತಿ ಇದೆ. ಬಿಜೆಪಿಯಲ್ಲಿನ ಸಣ್ಣಪುಟ್ಟ ಗೊಂದಲದಿಂದಾಗಿ ಕಾರ್ಯಕರ್ತರು ಬೇಸತ್ತಿದ್ದಾರೆ. ಈಗ ಇಂತಹ ಬೆಳವಣಿಗೆ ನಡೆದಿದೆ. ಇದರಿಂದ ನೋವಾಗಿದೆ. ಅಭ್ಯರ್ಥಿಯನ್ನು ಕಣಕ್ಕಿಳಿಸುವ ಬಗ್ಗೆ ಎರಡೂ ಪಕ್ಷದ ಮುಖಂಡರು ಕುಳಿತು ತೀರ್ಮಾನ ಮಾಡಿದ್ದೆವು. ನಮ್ಮ ಪಕ್ಷದ ಇಬ್ಬರು ಗೆಲುವು ಸಾಧಿಸಿರುಹುದು. ಆದರೆ ಅಡ್ಡ ಮತದಾನದಿಂದ ಅಪಮಾನ ಆಗಿದೆ. ಇದನ್ನೆಲ್ಲ ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ ಎಂದರು.

**ಗಂಭೀರವಾಗಿ ಪರಿಗಣನೆ...**

ಪಕ್ಷದ ರಾಜ್ಯ ಘಟಕದ ಅಧ್ಯಕ್ಷನಾಗಿ ಪಕ್ಷದ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಅಧ್ಯಕ್ಷನಾಗುವುದಕ್ಕೂ ಮೊದಲು ನಾನು ಕಾರ್ಯಕರ್ತ. ಪಕ್ಷದ ಹೈಕಮಾಂಡ್ ಕಾಲಕಾಲಕ್ಕೆ ಏನೇನು ತೀರ್ಮಾನ ಮಾಡಬೇಕೋ ಅದನ್ನು ಮಾಡಲಿದೆ. ಇಂತಹ ಮಹತ್ವದ ಚುನಾವಣೆಯಲ್ಲಿ ಹೀಗೆ ಆಗುತ್ತದೆ ಎಂಬ ಕಲ್ಪನೆ ಇರಲಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಚಾಣಕ್ಯ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಬಹಳ ಜನ ಚಾಣಕ್ಯರನ್ನು ರಾಜ್ಯದ ಜನ ನೋಡಿದ್ದಾರೆ. ಕುದುರೆ ಓಟ ಟೈಮಲ್ಲಿ ಓಡುತ್ತದೆ ಬೀಳೋ ಟೈಮಲ್ಲಿ ಬೀಳುತ್ತದೆ. ಬಿಜೆಪಿಗೆ ಎಲ್ಲವನ್ನೂ ಎದುರಿಸುವ ಶಕ್ತಿ ಇದೆ. ದೊಡ್ಡ ಸಂಘಟನೆ ಇದೆ. ಕಾರ್ಯಕರ್ತರ ಶಕ್ತಿ ಇದೆ. ಯಾರನ್ನು ಯಾವಾಗ ಹೇಗೆ ಬಗ್ಗಿಸಬೇಕು ಎಂಬುದು ತಿಳಿದಿದೆ ಎಂದರು.

ಸಿಎಂ ಯಾರೇ ಆದರೂ ಹೆದರುವ ಪ್ರಶ್ನೆ ಇಲ್ಲ. ಸರ್ಕಾರ ಬಗ್ಗಿಸಲು ನಮಗೆ ಗೊತ್ತಿದೆ. ಇಂತಹ ಸಣ್ಣ ಘಟನೆಯಿಂದ ವಿಚಲಿತ ಆಗಿ ಓಡಿ ಹೋಗಲ್ಲ. ಎಲ್ಲವನ್ನು ಅರಗಿಸಿಕೊಳ್ಳಬಲ್ಲೇ ಎಂದರು.

# ಅಡ್ಡ ಮತದಾನ ಮಾಡಿದ ನಾಲ್ವರು ಶಾಸಕರು ಪಕ್ಷ ತೊರೆಯುವ ವಿಚಾರದಲ್ಲಿ ಈಗಾಗಲೇ ಚರ್ಚೆ ನಡೆಸಿದ್ದಾರೆ : ಎಚ್‌ಡಿಕೆ

ಮೈಸೂರು, ಜೂ. 19 - ರಾಜ್ಯ ವಿಧಾನ ಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಸೋಲು ಕಂಡ ಬೆನ್ನಲ್ಲೇ ಕೇಂದ್ರ ಸಚಿವ ಹಾಗೂ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್‌ಡಿ ಕುಮಾರಸ್ವಾಮಿ ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರತಿಕ್ರಿಯೆ ನೀಡಿದ್ದು, ಪಕ್ಷದ ನಾಲ್ವರು ಶಾಸಕರು ಅಡ್ಡ ಮತದಾನ ಮಾಡಿದ್ದಾರೆ ಎಂಬುದು ತಮಗೆ ತಿಳಿದಿದೆ ಎಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ, ಅವರು ಪಕ್ಷ ತೊರೆಯುವ ವಿಚಾರದಲ್ಲಿಯೂ ಈಗಾಗಲೇ ಚರ್ಚೆ ನಡೆಸಿದ್ದಾರೆ ಎಂದು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ಮೈಸೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕುಮಾರಸ್ವಾಮಿ, ವಿಧಾನ ಪರಿಷತ್ ಚುನಾವಣೆಯಲ್ಲಿ ಅಡ್ಡ ಮತದಾನ ನಡೆದಿರುವುದು ತಮಗೆ ಯಾವುದೇ ಅಚ್ಚರಿ ಅಥವಾ ಆಘಾತ ಉಂಟುಮಾಡಿಲ್ಲ ಎಂದು ಸ್ಪಷ್ಟಪಡಿಸಿದರು. ಯಾರು ಅಡ್ಡ ಮತದಾನ ಮಾಡಿದ್ದಾರೆ, ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎಂಬುದರ ಕುರಿತು ತಮ್ಮ ಬಳಿ ಸಂಪೂರ್ಣ ಮಾಹಿತಿ ಇದೆ ಎಂದು ಅವರು ಹೇಳಿದರು.

**ಪಕ್ಷ ಬಿಡುವ ಚರ್ಚೆಯೂ ನಡೆದಿತ್ತು :**

ಅಡ್ಡ ಮತದಾನ ಮಾಡಿದ ಶಾಸಕರು ಪಕ್ಷ ತೊರೆಯುವ ಸಾಧ್ಯತೆಗಳ ಕುರಿತು ಈಗಾಗಲೇ ಚರ್ಚೆ ನಡೆಸಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ಆದರೆ, ಇದರಿಂದ ಪಕ್ಷಕ್ಕೆ ಯಾವುದೇ ಹಿನ್ನಡೆಯಾಗುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ಹೋಗುವವರು ಹೋಗಲಿ, ಪಕ್ಷ ಕಟ್ಟುವುದು ನನಗೆ ಗೊತ್ತಿದೆ ಎಂದು ಖಡಕ್ ಸಂದೇಶ ರವಾನಿಸಿದರು.

**Gen Zಗೆ ಅವಕಾಶ:**

ಪಕ್ಷ ಸಂಘಟನೆಗೆ ಹೊಸ ದಿಕ್ಕು ನೀಡುವ ಕುರಿತು ಮಾತನಾಡಿದ ಅವರು, ಇನ್ನು ಮುಂದೆ ಯುವ ನಾಯಕರು ಹಾಗೂ ಹೊಸ ಮುಖಗಳಿಗೆ ಹೆಚ್ಚಿನ ಅವಕಾಶ ನೀಡಲಾಗುವುದು ಎಂದು ಘೋಷಿಸಿದರು. ಯುವಕರನ್ನು ಮುಂದೆ ತಂದು ಪಕ್ಷವನ್ನು ಮತ್ತಷ್ಟು ಬಲಪಡಿಸುತ್ತೇನೆ. ಹೊಸ ತಲೆಮಾರಿನ ನಾಯಕರಿಗೆ ಆದ್ಯತೆ ನೀಡುವ ನಿರ್ಧಾರ ಮಾಡಿದ್ದೇನೆ ಎಂದು ಹೇಳಿದರು.



**ಜೆಡಿಎಸ್‌ನಲ್ಲಿ ಹೊಸ ಮುಖಗಳಿಗೆ ಅವಕಾಶ :**

ಪಕ್ಷದ ಭವಿಷ್ಯದ ಕುರಿತು ಮಾತನಾಡಿದ ಕುಮಾರಸ್ವಾಮಿ, ಜೆಡಿಎಸ್ ಸಂಘಟನೆಯನ್ನು ಮರುನಿರ್ಮಿಸುವ ಪ್ರಕ್ರಿಯೆ ಆರಂಭವಾಗಲಿದೆ ಎಂದು ಸೂಚನೆ ನೀಡಿದರು. ಹಳೆಯ ರಾಜಕೀಯ ಲೆಕ್ಕಾಚಾರಗಳಿಗಿಂತ ಯುವ ನಾಯಕತ್ವದ ಮೇಲೆ ಹೆಚ್ಚು ಒತ್ತು ನೀಡಲಾಗುವುದು ಎಂದು ಹೇಳಿದರು. ರಾಜಕೀಯವಾಗಿ ಪಕ್ಷಕ್ಕೆ ಸವಾಲಿನ ಪರಿಸ್ಥಿತಿ ಎದುರಾದರೂ, ಕಾರ್ಯಕರ್ತರ ಶಕ್ತಿ ಮತ್ತು ಜನರ ಬೆಂಬಲದ ಆಧಾರದ ಮೇಲೆ ಪಕ್ಷವನ್ನು ಮತ್ತೊಮ್ಮೆ ಬಲಿಷ್ಠಗೊಳಿಸಲಾಗುವುದು ಎಂಬ ವಿಶ್ವಾಸ ವ್ಯಕ್ತಪಡಿಸಿದರು.

**ಜಿ.ಟಿ. ದೇವೇಗೌಡ ಹೆಸರು ಪ್ರಸ್ತಾಪಿಸಲು ನಿರಾಕರಣೆ :**

ಸುದ್ದಿಗೋಷ್ಠಿಯ ವೇಳೆ ಮಾಧ್ಯಮ ಪ್ರತಿನಿಧಿಗಳು ಜಿ.ಟಿ. ದೇವೇಗೌಡ ಅವರ ಹೆಸರನ್ನು ಪ್ರಸ್ತಾಪಿಸಿದಾಗ ಕುಮಾರಸ್ವಾಮಿ ಪ್ರತಿಕ್ರಿಯಿಸಲು ನಿರಾಕರಿಸಿದರು. ಅವರ ಹೆಸರು ಎತ್ತಬೇಡಿ. ಕಳೆದ ಒಂದೂವರೆ ವರ್ಷದಿಂದ ಅವರ ಬಗ್ಗೆ ನಾನು ಮಾತನಾಡಿಲ್ಲ. ಇತ್ತೀಚೆಗೆ ನಡೆದ ಚಾಮುಂಡೇಶ್ವರಿ ಕ್ಷೇತ್ರದ ಸಭೆಯಲ್ಲಿಯೂ ಅವರ ಹೆಸರನ್ನು ಪ್ರಸ್ತಾಪಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಮೂಲಕ ಪಕ್ಷದ ಆಂತರಿಕ ಬೆಳವಣಿಗೆಗಳ ಕುರಿತು ಹೆಚ್ಚಿನ ಚರ್ಚೆ ನಡೆಸಲು ಅವರು ಆಸಕ್ತಿ ತೋರಲಿಲ್ಲ.

**ಅಂತಿಮ ನಿರ್ಧಾರ ನನ್ನದೇ :**

ಪಕ್ಷದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಅಧಿಕಾರದ ಕುರಿತು ಮಾತನಾಡಿದ ಕುಮಾರಸ್ವಾಮಿ, ಕಾರ್ಯಕರ್ತರ ಅಭಿಪ್ರಾಯಗಳಿಗೆ ಮಹತ್ವ ನೀಡುತ್ತೇನೆ. ಆದರೆ ಅಂತಿಮ ನಿರ್ಧಾರವನ್ನು ತಾವೇ ಕೈಗೊಳ್ಳುವುದಾಗಿ ಹೇಳಿದರು. ಕಾರ್ಯಕರ್ತರ ಅಭಿಪ್ರಾಯಗಳನ್ನು ಸಂಗ್ರಹಿಸಿ ನಿರ್ಧಾರ ಮಾಡುತ್ತೇನೆ. ಪಕ್ಷದ ಹಿತದೃಷ್ಟಿಯಿಂದ ಯಾವ ಕ್ರಮ ಅಗತ್ಯವೋ ಅದನ್ನು ಕೈಗೊಳ್ಳುತ್ತೇನೆ ಎಂದು ಅವರು ತಿಳಿಸಿದರು.

ಗುರುವಾರ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಎಲ್ಲಾ ಐವರು ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಭಾರತೀಯ ಜನತಾ ಪಕ್ಷ ಅಭ್ಯರ್ಥಿಗಳಲ್ಲಿ ಇಬ್ಬರು ಜಯಗಳಿಸಿದ್ದು, ಜೆಡಿಎಸ್ ಅಭ್ಯರ್ಥಿ ಗೋವಿಂದರಾಜು ಸೋಲು ಕಂಡಿದ್ದಾರೆ.

ಜೆಡಿಎಸ್ ಶಾಸಕರ ಅಡ್ಡ ಮತದಾನವೇ ಈ ಸೋಲಿಗೆ ಪ್ರಮುಖ ಕಾರಣ ಎಂಬ ರಾಜಕೀಯ ವಿಶ್ಲೇಷಣೆಗಳು ಕೇಳಿಬರುತ್ತಿವೆ. ಈ ಬೆಳವಣಿಗೆ ಜೆಡಿಎಸ್ ಒಳಗಿನ ಅಸಮಾಧಾನ ಹಾಗೂ ಭಿನ್ನಾಭಿಪ್ರಾಯಗಳನ್ನು ಬಹಿರಂಗಪಡಿಸಿದ್ದು, ಮುಂದಿನ ದಿನಗಳಲ್ಲಿ ಪಕ್ಷದೊಳಗಿನ ರಾಜಕೀಯ ಚಟುವಟಿಕೆಗಳು ಮತ್ತಷ್ಟು ಚುರುಕುಗೊಳ್ಳುವ ಸಾಧ್ಯತೆ ಇದೆ.

**ಅಡ್ಡ ಮತದಾನದ ನಿರೀಕ್ಷೆ ಮೊದಲೇ ಇತ್ತು:**

ಅವರು ಅಡ್ಡ ಮತದಾನ ಮಾಡುತ್ತಾರೆ ಎಂಬ ನಿರೀಕ್ಷೆ ಮೊದಲೇ ಇತ್ತು. ಆದ್ದರಿಂದ ಇದು ನನಗೆ ಹೊಸ ವಿಚಾರವಲ್ಲ. ಈಗಲೂ ಅವರು ಮುಂದಿನ ದಿನಗಳಲ್ಲಿ ಯಾವ ರೀತಿಯ ರಾಜಕೀಯ ನಡೆ ಅನುಸರಿಸಬಹುದು ಎಂಬುದನ್ನು ತಿಳಿದುಕೊಳ್ಳುವ ಉದ್ದೇಶದಿಂದಲೇ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗಿತ್ತು ಎಂದು ಕುಮಾರಸ್ವಾಮಿ ತಿಳಿಸಿದರು.

# ಹೊನ್ನಾವರ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದ ಭೂ ಸ್ವಾಧೀನ ಪ್ರಕರಣದಲ್ಲಿ ಮಹತ್ವದ ತೀರ್ಪು

ಬೆಂಗಳೂರು, ಜೂ. 19 - ಬೆಂಗಳೂರು ಹೊನ್ನಾವರ ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದ 30 ಎಕರೆ ಭೂ ಸ್ವಾಧೀನ ಪ್ರಕರಣದಲ್ಲಿ ಮಹತ್ವದ ತೀರ್ಪು ಹೊರಬಂದಿದೆ. ಹೈಕೋರ್ಟ್ ವಿಭಾಗೀಯ ಪೀಠವು ಏಕಸದಸ್ಯ ಪೀಠ ನೀಡಿದ್ದ ಸ್ವಾಧೀನ ರದ್ದುಪಡಿಸುವ ಆದೇಶವನ್ನು ವಜಾ ಮಾಡಿದೆ.

1986ರ ಅಕ್ಟೋಬರ್ 9ರಂದು ಸರ್ಕಾರ ಭೂ ಸ್ವಾಧೀನಕ್ಕೆ ಅನುಮೋದನೆ ನೀಡಿತ್ತು. ಅದಕ್ಕೂ ಮುನ್ನ ಭೂಮಾಲೀಕರು ಮಾರಾಟದ ಒಪ್ಪಂದಗಳನ್ನು ಕಾರ್ಯಗತಗೊಳಿಸಿ, ಸಂಪೂರ್ಣ ಮೊತ್ತವನ್ನು ಪಡೆದಿದ್ದರು. ಜಕ್ಕಸಂದ್ರ ಗ್ರಾಮದಲ್ಲಿರುವ ಭೂಮಿಯನ್ನು ಶ್ರೀ ಪ್ರಸನ್ನ ಆಂಜನೇಯ ಟ್ರಸ್ಟ್ ಪರವಾಗಿ ಸ್ವಾಧೀನಪಡಿಸಿಕೊಂಡು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ 150 ನಿವೇಶನಗಳನ್ನು ಉಚಿತವಾಗಿ ನೆಲಮಂಗಲ ನಗರ ಪುರಸಭೆಗೆ ಹಸ್ತಾಂತರಿಸಲು ಒಪ್ಪಿಕೊಂಡಿತ್ತು. ಉಳಿದ ನಿವೇಶನಗಳನ್ನು ಟ್ರಸ್ಟ್ ಸದಸ್ಯರಿಗೆ ವಿತರಿಸುವ ಪ್ರಸ್ತಾವನೆ ಮಾಡಲಾಗಿತ್ತು. ಅಂತಿಮ ಅಧಿಸೂಚನೆ 1987ರಲ್ಲಿ ಹೊರಬಂದಿತ್ತು.

2006 2008ರ ನಡುವೆ ಕೆಲ ಭೂಮಾಲೀಕರು ಸ್ವಾಧೀನವನ್ನು ಪ್ರಶ್ನಿಸಿದರು. 2012ರಲ್ಲಿ ಏಕಸದಸ್ಯ ಪೀಠವು ಸ್ವಾಧೀನ ರದ್ದುಪಡಿಸಿ, ಭೂಮಿ ವಾಪಸ್ ನೀಡಲು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಹಾಗೂ ಟ್ರಸ್ಟ್ ಮೇಲ್ಮನವಿ ಸಲ್ಲಿಸಿತ್ತು.

ನ್ಯಾಯಮೂರ್ತಿಗಳಾದ ಡಿ.ಕೆ. ಸಿಂಗ್ ಮತ್ತು ಎಸ್. ರಾಚಯ್ಯ ಅವರಿದ್ದ ವಿಭಾಗೀಯ ಪೀಠವು, ಭೂಮಾಲೀಕರು ಸಂಪೂರ್ಣ ಮೊತ್ತ ಪಡೆದಿದ್ದು, ಟ್ರಸ್ಟ್ ಪರವಾಗಿ ಭೂಮಿ ಸ್ವಾಧೀನಗೊಂಡು ನಿವೇಶನಗಳ ಅಭಿವೃದ್ಧಿ ನಡೆದಿರುವುದರಿಂದ, ಏಕಸದಸ್ಯ ಪೀಠ ನೀಡಿದ್ದ ರದ್ದುಪಡಿಸುವ ಆದೇಶ ಸರಿಯಲ್ಲ ಎಂದು ಸ್ಪಷ್ಟಪಡಿಸಿದೆ.

ಈ ತೀರ್ಪಿನಿಂದ ಭೂ ಸ್ವಾಧೀನ ಪ್ರಕ್ರಿಯೆಗೆ ಅಂತಿಮ ಮಾನ್ಯತೆ ದೊರೆತಿದ್ದು, ರಸ್ತೆ ಅಭಿವೃದ್ಧಿ ಯೋಜನೆಗೆ ದಾರಿ ಸುಗಮವಾಗಿದೆ.

# ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಭೀಕರ ದುರಂತ ; ಟ್ಯಾಂಕ್‌ಗೆ ಬಿದ್ದ ಮೂವರಲ್ಲಿ ಒಬ್ಬರ ರಕ್ಷಣೆ

ಬೆಂಗಳೂರು, ಜೂ. 19 - ನಗರದ ವರ್ತೂರು ಸಮೀಪದ ಬೆಳಗೆರೆಯ ಜಲಮಂಡಳಿಯ ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಭೀಕರ ದುರಂತ ಸಂಭವಿಸಿದೆ. ಮೂವರು ಕಾರ್ಮಿಕರು ಟ್ಯಾಂಕ್‌ಗೆ ಬಿದ್ದು ಅಪಾಯಕ್ಕೀಡಾಗಿದ್ದು, ಅವರಲ್ಲಿ ಒಬ್ಬರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಳಿದ ಇಬ್ಬರು ನಾಪತ್ತೆಯಾಗಿದ್ದು, ಮೃತರಾಗಿರುವ ಶಂಕೆ ವ್ಯಕ್ತವಾಗಿದೆ.

ನಿನ್ನೆ ಸಂಜೆ ಈ ಘಟನೆ ನಡೆದಿದ್ದು, ಟ್ಯಾಂಕ್‌ನ ಗೇಟ್‌ಗಳ ದುರಸ್ತಿ ವೇಳೆ ಕಾರ್ಮಿಕರು ಸುಮಾರು ಆಳಕ್ಕೆ ಬಿದ್ದಿದ್ದಾರೆ. ತಮಿಳುನಾಡಿನ ಎಂಜಿನಿಯರ್ ಅಗಿಲನ್ ಮೋಹನ್ ಹಾಗೂ ಬಿಹಾರದ ಬ್ರಜೇಶ್ ಕುಮಾರ್‌ನಾಪತ್ತೆಯಾಗಿದ್ದು, ಕಾರ್ತಿಕ್ ಎಂಬ ಕಾರ್ಮಿಕನನ್ನು ಜೀವಾಪಾಯದಿಂದ ಪಾರು ಮಾಡಲಾಗಿದೆ.

ಟ್ಯಾಂಕ್‌ನಲ್ಲಿ ತ್ಯಾಜ್ಯ ನೀರು ತುಂಬಿಕೊಂಡಿರುವುದರಿಂದ ಶೋಧ ಕಾರ್ಯಕ್ಕೆ ಅಡಚಣೆ ಉಂಟಾಗಿದೆ. ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್ ಹಾಗೂ ವರ್ತೂರು ಪೊಲೀಸರು ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರೆಸುತ್ತಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಕಾರ್ಮಿಕರು ಸುರಕ್ಷತಾ ಸಾಧನಗಳನ್ನು ಬಳಸದೇ ಕೆಲಸ ಮಾಡಿರುವ ಸಾಧ್ಯತೆ ವ್ಯಕ್ತವಾಗಿದೆ. ಈ ಕುರಿತು ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಆರಂಭವಾಗಿದೆ.

ಘಟನೆಯನ್ನು ಗಂಭೀರವಾಗಿ ಪರಿಗಣಿಸಿರುವ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಮಗ್ರ ವರದಿ ಸಲ್ಲಿಸಲು ಸೂಚಿಸಿದೆ. ಅಧ್ಯಕ್ಷೆ ಡಾ. ಮಂಜುಳಾ ಎನ್. ಅವರು ಮೂವರು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ತನಿಖಾ ತಂಡ ರಚಿಸಿದ್ದು, ಸುರಕ್ಷತಾ ಲೋಪಗಳ ಬಗ್ಗೆ ನಿಖರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

ಸ್ಥಳದಲ್ಲಿ ಸದ್ಯ ರಕ್ಷಣಾ ಕಾರ್ಯಾಚರಣೆ ಯುದ್ಧೋಪಾದಿಯಲ್ಲಿ ನಡೆಯುತ್ತಿದ್ದು, ನಾಪತ್ತೆಯಾದ ಇಬ್ಬರು ಕಾರ್ಮಿಕರ ಪತ್ತೆಗಾಗಿ ಶೋಧ ಕಾರ್ಯ ಮುಂದುವರಿದಿದೆ.

# ಕುಮಟಾದಿಂದಲೇ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ನೇರ ರೈಲು ಸಂಪರ್ಕ



ಬೆಂಗಳೂರು, ಜೂ. 19 - ಉತ್ತರ ಕನ್ನಡ ಜಿಲ್ಲೆಯ ಜನತೆಗೆ ಸಂತಸದ ಸುದ್ದಿ ಬಂದಿದ್ದು, ಕುಮಟಾದಿಂದಲೇ ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ನೇರ ರೈಲು ಸಂಪರ್ಕ ದೊರೆಯುತ್ತಿದೆ.

ಕಾಚಿಗುಡ - ಮುರ್ಡೇಶ್ವರ - ಕಾಚಿಗುಡ ಬಿ-ವೀಕ್ಲಿ ಎಕ್ಸ್‌ಪ್ರೆಸ್ ರೈಲು ಸೇವೆಯನ್ನು ಕುಮಟಾವರೆಗೆ ವಿಸ್ತರಿಸಲಾಗಿದ್ದು, ಜೂನ್ 20ರಂದು ಅಧಿಕೃತವಾಗಿ ಚಾಲನೆ ನೀಡಲಾಗುತ್ತಿದೆ.

ಕುಮಟಾ ಕೊಂಕಣ ರೈಲು ನಿಲ್ದಾಣದಲ್ಲಿ ಮಧ್ಯಾಹ್ನ 2.30ಕ್ಕೆ ನಡೆಯುವ ಈ ಕಾರ್ಯಕ್ರಮದಲ್ಲಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ದಿನಕರ ಶೆಟ್ಟಿ, ಕೊಂಕಣ ರೈಲ್ವೆ ಸಿಎಂಡಿ ಸಂತೋಷಕುಮಾರ ರ್ಝಾ ಹಾಗೂ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಇದೇ ವೇಳೆ ಕುಮಟಾ ರೈಲು ನಿಲ್ದಾಣದ 2ನೇ ಪ್ಲಾಟ್‌ಫಾರ್ಮ್ ಹಾಗೂ ಗೋಕರ್ಣ, ಭಟ್ಕಳ, ಮುರ್ಡೇಶ್ವರ ನಿಲ್ದಾಣಗಳಲ್ಲಿ ನಿರ್ಮಿಸಿದ ಪ್ರಯಾಣಿಕ ಸೌಲಭ್ಯಗಳೂ ಲೋಕಾರ್ಪಣೆಗೊಳ್ಳಲಿವೆ.

ಹೊಸ ರೈಲು ಸೇವೆಯಿಂದ ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಸ್ಥರು ಹಾಗೂ ಪ್ರವಾಸಿಗರಿಗೆ ತಿರುಪತಿ ಸೇರಿದಂತೆ ಹಲವು ಧಾರ್ಮಿಕ ಹಾಗೂ ಪ್ರವಾಸಿ ತಾಣಗಳಿಗೆ ಸುಲಭ ಸಂಪರ್ಕ ದೊರೆಯಲಿದೆ. ಪ್ರತಿ ಬುಧವಾರ ಮತ್ತು ಶನಿವಾರ ಕುಮಟಾದಿಂದ ರೈಲು ಹೊರಡಲಿದ್ದು, ಮಂಗಳವಾರ ಮತ್ತು ಶುಕ್ರವಾರ ತಿರುಪತಿಯಿಂದ ಪ್ರಯಾಣ ಬೆಳೆಸಲಿದೆ.

ಕಾಚಿಗುಡದಿಂದ ಕುಮಟಾಕ್ಕೆ (12789): ಮಂಗಳವಾರ ಮತ್ತು ಶುಕ್ರವಾರ ಬೆಳಗ್ಗೆ 6:05ಕ್ಕೆ ಹೊರಟು, ಮರುದಿನ ಮಧ್ಯಾಹ್ನ 2:40ಕ್ಕೆ ಕುಮಟಾ ತಲುಪಲಿದೆ.

ಕುಮಟಾದಿಂದ ಕಾಚಿಗುಡಕ್ಕೆ (12790): ಬುಧವಾರ ಮತ್ತು ಶನಿವಾರ ಮಧ್ಯಾಹ್ನ 3:25ಕ್ಕೆ ಹೊರಟು, ಮರುದಿನ ರಾತ್ರಿ 11:40ಕ್ಕೆ ಕಾಚಿಗುಡ ತಲುಪಲಿದೆ. ಮಾರ್ಗದಲ್ಲಿ ಮುರ್ಡೇಶ್ವರ, ಭಟ್ಕಳ, ಮೂಕಾಂಬಿಕಾ ರೋಡ್ ಬೈಂದೂರು, ಕುಂದಾಪುರ, ಬಾರ್ಕೂರು, ಉಡುಪಿ ಹಾಗೂ ಮಂಗಳೂರು ಸೆಂಟ್ರಲ್ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಲಿದೆ.

ಕುಮಟಾ ನಿಲ್ದಾಣದ 2ನೇ ಪ್ಲಾಟ್‌ಫಾರ್ಮ್ ಉದ್ಘಾಟನೆಯಿಂದ ಟರ್ಮಿನಲ್ ಸೌಲಭ್ಯ ದೊರೆತಿದ್ದು, ಜಿಲ್ಲೆಯ ರೈಲು ಸಂಪರ್ಕಕ್ಕೆ ಹೊಸ ಆಯಾಮ ಸಿಕ್ಕಿದೆ. ಈ ಯೋಜನೆ ಕರಾವಳಿ ಕರ್ನಾಟಕದ ರೈಲು ಸೇವೆಗಳನ್ನು ಬಲಪಡಿಸುವುದರೊಂದಿಗೆ ಭವಿಷ್ಯದಲ್ಲಿ ಇನ್ನಷ್ಟು ರೈಲು ವಿಸ್ತರಣೆಗೆ ದಾರಿ ಮಾಡಿಕೊಡಲಿದೆ.

# ಅಡ್ಡ ಮತದಾನವು ಬಿಜೆಪಿ - ಜೆಡಿಎಸ್‌ನ ನಾಯಕತ್ವದ ದುರ್ಬಲತೆ ಬಯಲಿಗೆಳೆದಿದೆ : ಖರ್ಗೆ



ಬೆಂಗಳೂರು, ಜೂ. 19 - ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್ ಶಾಸಕರ ಅಡ್ಡ ಮತದಾನವು ಆ ಪಕ್ಷಗಳ ನಾಯಕತ್ವದ ದುರ್ಬಲತೆಯನ್ನು ಬಯಲಿಗೆಳೆದಿದೆ ಎಂದು ಗೃಹ ಸಚಿವ ಪ್ರಿಯಾಂಕ ಖರ್ಗೆ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮನ್ನು ಟೀಕಿಸುತ್ತಿದ್ದ ಪಕ್ಷದ ಶಾಸಕರೇ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಹಾಕಿದ್ದಾರೆ. ಅಶೋಕ್, ವಿಜಯೇಂದ್ರ ಹಾಗೂ ಕುಮಾರಸ್ವಾಮಿ ಅವರ ನಾಯಕತ್ವ ಸೋಲಿಗೆ ಗುರಿಯಾಗಿದೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ಸರ್ಕಾರದ ಜನಪರ ಗ್ಯಾರಂಟಿ ಯೋಜನೆಗಳು ಕುಟುಂಬಗಳಿಗೆ ಸ್ಥಿರತೆ ನೀಡಿರುವುದರಿಂದ, ಜೆಡಿಎಸ್-ಬಿಜೆಪಿಯ ಕೆಲ ಶಾಸಕರು ಆತ್ಮಸಾಕ್ಷಿ ಹಾಗೂ ಸ್ವಾಭಿಮಾನದಿಂದ ಮತ ಹಾಕಿದ್ದಾರೆ ಎಂದು ಅವರು ಹೇಳಿದರು. ನಾವು ಅಸಂವಿಧಾನಿಕವಾಗಿ ಗೆದ್ದಿಲ್ಲ, ಕುದುರೆ ವ್ಯಾಪಾರ ನಡೆದಿಲ್ಲ. ಎಲ್ಲವೂ ಆತ್ಮಸಾಕ್ಷಿಯಂತೆ ನಡೆದಿದೆ ಎಂದರು.

ಮೇಕೆದಾಟು ಯೋಜನೆ ಕುರಿತು ತಮಿಳುನಾಡು ಸರ್ಕಾರ ತೆಗೆದುಕೊಂಡ ನಿರ್ಣಯದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಅವರು ತಮ್ಮ ಹಿತಾಸಕ್ತಿಯನ್ನು ನೋಡಿಕೊಂಡಿದ್ದಾರೆ. ನಾವು ನಮ್ಮ ರಾಜ್ಯದ ಹಿತಾಸಕ್ತಿ ಕಾಪಾಡಬೇಕು. ಮೇಕೆದಾಟುವಿನಿಂದ ಹೆಚ್ಚುವರಿ ನೀರು ಸಂಗ್ರಹವಾಗಿ ತಮಿಳುನಾಡಿಗೂ ಪ್ರಯೋಜನವಾಗುತ್ತದೆ ಎಂದು ವಿವರಿಸಿದರು.

ಬಿಜೆಪಿ ಸಂಸದರು ಮೇಕೆದಾಟು ಯೋಜನೆಗೆ ಕೇಂದ್ರದಿಂದ ಒಪ್ಪಿಗೆ ತರಲು ವಿಫಲರಾಗಿದ್ದಾರೆ ಎಂದು ಟೀಕಿಸಿದ ಖರ್ಗೆ, ಇವರು ಅಸಮರ್ಥರು ಎಂದು ಆರೋಪಿಸಿದರು.

**ಅನರ್ಹರಿಗೆ ಗ್ಯಾರಂಟಿ ಸಿಗಬಾರದು ಎಂಬುದು ನಮ್ಮ ಸರ್ಕಾರದ ನಿಲುವು**

ಗ್ಯಾರಂಟಿ ಪರಿಷ್ಕರಣೆ ಕುರಿತು ನಡೆದ ಸಭೆಯ ಬಗ್ಗೆ ಮಾತನಾಡಿದ ಅವರು, ಅನರ್ಹರಿಗೆ ಗ್ಯಾರಂಟಿ ಸಿಗಬಾರದು ಎಂಬುದು ನಮ್ಮ ಸರ್ಕಾರದ ನಿಲುವು. ಆದ್ದರಿಂದ ಪರಿಷ್ಕರಣೆ ಅಗತ್ಯ ಎಂದು ಸ್ಪಷ್ಟಪಡಿಸಿದರು.

# ಅಡ್ಡ ಮತದಾನ ಮಾಡಿದವರ ವಿರುದ್ಧ ಕಠಿಣ ಕ್ರಮ: ಛಲವಾದಿ ನಾರಾಯಣಸ್ವಾಮಿ



ಬೆಂಗಳೂರು, ಜೂ.19 - ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದವರು ಇವರು ಎಂದು ಮಾಧ್ಯಮಗಳಲ್ಲಿ ಕೆಲವರ ಹೆಸರು ಹರಿಬಿಡಲಾಗುತ್ತಿದೆ. ಇದನ್ನು ದಯವಿಟ್ಟು ಯಾವುದೇ ಮಾಧ್ಯಮಗಳು ಮಾಡಬಾರದು ಎಂದು ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಮನವಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಡ್ಡಮತದಾನ ಮಾಡಿದವರ ಪತ್ತೆಗಾಗಿ ಸಮಿತಿ ರಚಿಸಲಾಗಿದೆ. ಈ ಸಮಿತಿ ವರದಿ ನೀಡಲಿದೆ. ಆಗ ಅಡ್ಡಮತದಾನ ಮಾಡಿದವರು ಪತ್ತೆಯಾದ ನಂತರ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ವಿವರಿಸಿದರು.

ನಮ್ಮ ಪಕ್ಷದಿಂದ ಲಿಂಗರಾಜ ಪಾಟೀಲ್ ಅವರಿಗೆ 30 ಮತಗಳು ಹಾಗೂ ರಘು ಕೌಟಿಲ್ಯ ಅವರಿಗೆ 30 ಮತಗಳನ್ನು ನಿಗದಿ ಮಾಡಿದ್ದೇವು. ಮತ್ತೆ ಉಳಿದ ಮೂರು ಮತಗಳನ್ನು ಎನ್‌ಡಿಎ ಅಭ್ಯರ್ಥಿಗೆ ಹಾಕಲು ಸೂಚಿಸಲಾಗಿತ್ತು.

ಬಸನಗೌಡ ಪಾಟೀಲ್ ಯತ್ನಾಳ್ ಅವರು ಬಿಜೆಪಿಗೆ ಮತ ಹಾಕುವುದಾಗಿ ಹೇಳಿದ್ದರು. ನಾಲ್ವರನ್ನು ಆರ್. ಅಶೋಕ್ ತಮ್ಮೊಂದಿಗೆ ಕರೆದೊಯ್ದು ಮತ ಹಾಕಿಸಿದರು. 30 ರಲ್ಲಿ ರಘು ಕೌಟಿಲ್ಯ ಅವರಿಗೆ ಬಂದ ಮತದಲ್ಲಿ ಒಂದು ಅಸಿಂಧುವಾಗಿದೆ. ಲಿಂಗರಾಜು ಪಾಟೀಲ್ ಅವರಿಗೆ ಮೂರು ಮತಗಳು ಬಂದಿಲ್ಲ ಎಂದರು.

ಲಿಂಗರಾಜು ಪಾಟೀಲ್ ಅವರಿಗೆ ಬರಬೇಕಾದ ಮೂವತ್ತು ಮತಗಳಲ್ಲಿ 27 ಬಂದಿದೆ. ನಮ್ಮ ಪಟ್ಟಿಯಲ್ಲಿ ಇದ್ದ ಮೂವರು ಕ್ರಾಸ್ ಓಟ್ ಮಾಡಿದ್ದಾರೆ. ಇದು ಅನುಮಾನಕ್ಕೆ ಕಾರಣವಾಗಿದೆ. ಯತ್ನಾಳ್, ಕೃಷ್ಣ ನಾಯಕ್, ಚಂದ್ರು ಲಮಾಣಿ ಹಾಗೂ ದುರ್ಯೋಧನ ಐಹೊಳೆ. ಇವರ ಹೆಸರು ಲಿಂಗರಾಜು ಪಾಟೀಲ್ ಅವರ ಪಟ್ಟಿಯಲ್ಲಿ ಇಲ್ಲ ಎಂದು ವಿವರಿಸಿದರು.

ಅಡ್ಡ ಮತದಾನ ಸಂಬಂಧ ರಚಿಸಲಾಗಿರುವ ಸಮಿತಿ 25 ರೊಳಗೆ ವರದಿ ನೀಡಲಿದೆ. ನಮ್ಮ ಪಕ್ಷದಿಂದ ಯಾರ ಮೇಲೆ ಅನುಮಾನ ಎಂದು ಚರ್ಚೆ ಮಾಡಿಲ್ಲ. ಯಾರೇ ತಪ್ಪಿತಸ್ಥರು ಇದ್ದರೂ ಮುಚ್ಚಿಡುವ ಪ್ರಶ್ನೆ ಇಲ್ಲ. ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಡಾ. ಚಂದ್ರು ಲಮಾಣಿ ಹಾಗೂ ಕೃಷ್ಣನಾಯಕ್ ಅವರ ಹೆಸರು ಬಂದಿರುವುದರಿಂದ ಅವರು ಹೆದರಿದ್ದು, ರಾಜೀನಾಮೆ ನೀಡುತ್ತೇವೆ ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ವರದಿ ಬರುವವರೆಗೆ ಯಾರ ಹೆಸರನ್ನು ಮಾಧ್ಯಮಗಳಲ್ಲಿ ತೇಲಿಬಿಡಬೇಡಿ ಎಂದು ಮನವಿ ಮಾಡಿದರು.

# ಕೋಲಾರ, ಧಾರವಾಡ ಜಿಲ್ಲಾ ನ್ಯಾಯಾಲಯಗಳಿಗೆ ಏಕಕಾಲದಲ್ಲಿ ಬಾಂಬ್ ಬೆದರಿಕೆ! ; ಕಲಾಪ ಸ್ಥಗಿತ



ಕೋಲಾರ/ಧಾರವಾಡ, ಜೂ. 19 - ರಾಜ್ಯದ ನ್ಯಾಯಾಂಗ ವಲಯದಲ್ಲಿ ಅಪರೂಪದ ಹಾಗೂ ಆತಂಕಕಾರಿ ಬೆಳವಣಿಗೆಯೊಂದರಲ್ಲಿ, ಕೋಲಾರ ಮತ್ತು ಧಾರವಾಡ ಜಿಲ್ಲಾ ನ್ಯಾಯಾಲಯಗಳಿಗೆ ಏಕಕಾಲದಲ್ಲಿ ಬಾಂಬ್ ಬೆದರಿಕೆ ಬಂದಿರುವ ಘಟನೆ ಭಾರೀ ಸಂಚಲನ ಮೂಡಿಸಿದೆ. ಇ-ಮೇಲ್ ಹಾಗೂ ದೂರವಾಣಿ ಕರೆಗಳ ಮೂಲಕ ಬಂದ ಬೆದರಿಕೆ ಹಿನ್ನೆಲೆಯಲ್ಲಿ ಎರಡೂ ನ್ಯಾಯಾಲಯಗಳ ಆವರಣಗಳನ್ನು ತುರ್ತುವಾಗಿ ಖಾಲಿ ಮಾಡಲಾಗಿದ್ದು, ಪೊಲೀಸರು ಹೈ ಅಲರ್ಟ್ ಘೋಷಿಸಿ ತೀವ್ರ ತಪಾಸಣೆ ನಡೆಸಿದರು.

ನ್ಯಾಯಾಧೀಶರು, ವಕೀಲರು, ಸಿಬ್ಬಂದಿ ಹಾಗೂ ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ನ್ಯಾಯಾಲಯಗಳಲ್ಲಿನ ಕಾರ್ಯಕಲಾಪಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಬಾಂಬ್ ನಿಷ್ಕ್ರಿಯ ದಳ, ಶ್ವಾನದಳ ಹಾಗೂ ಭದ್ರತಾ ಸಿಬ್ಬಂದಿ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದಾರೆ.

ಕೋಲಾರ ಜಿಲ್ಲಾ ನ್ಯಾಯಾಲಯಕ್ಕೆ ಮುಂಜಾನೆ ಅಧಿಕೃತ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಸಂದೇಶ ಬಂದಿದ್ದು, ಕೋರ್ಟ್ ಆವರಣದಲ್ಲಿ ಸ್ಫೋಟಕಗಳನ್ನು ಇರಿಸಲಾಗಿದೆ ಎಂದು ಉಲ್ಲೇಖಿಸಲಾಗಿತ್ತು. ತಕ್ಷಣವೇ ಪೊಲೀಸರು ಹಾಗೂ ನ್ಯಾಯಾಂಗ ಅಧಿಕಾರಿಗಳು ಸಭೆ ನಡೆಸಿ ಮುನ್ನೆಚ್ಚರಿಕೆ ಕ್ರಮವಾಗಿ ಆವರಣವನ್ನು ಖಾಲಿ ಮಾಡಿಸಿದರು.

ಇನ್ನೊಂದೆಡೆ ಧಾರವಾಡ ಜಿಲ್ಲಾ ನ್ಯಾಯಾಲಯದ ಆಡಳಿತ ಕಚೇರಿಗೆ ಅಪರಿಚಿತ ವ್ಯಕ್ತಿಯೊಬ್ಬ ದೂರವಾಣಿ ಕರೆ ಮಾಡಿ, ಕೋರ್ಟ್ ಕಾಂಪ್ಲೆಕ್ಸ್‌ನ ಪ್ರಮುಖ ಸ್ಥಳಗಳಲ್ಲಿ ಬಾಂಬ್ ಇರಿಸಲಾಗಿದೆ ಎಂದು ಬೆದರಿಕೆ ಹಾಕಿದ್ದಾನೆ. ಕರೆ ಬಂದ ತಕ್ಷಣ ಪೊಲೀಸರು ಸ್ಥಳಕ್ಕೆ ಧಾವಿಸಿ ಭದ್ರತಾ ಕ್ರಮಗಳನ್ನು ಕೈಗೊಂಡು, ಕಕ್ಷಿದಾರರು, ವಕೀಲರು ಮತ್ತು ಸಿಬ್ಬಂದಿಯನ್ನು ಹೊರಗೆ ಕಳುಹಿಸಿದರು.

ಕರ್ನಾಟಕ ಅಧಿಕಾರಿಗಳು ಎರಡೂ ಜಿಲ್ಲೆಗಳಲ್ಲಿ ಶ್ವಾನದಳ, ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳಗಳ ಸಹಾಯದಿಂದ ತೀವ್ರ ಶೋಧ ಕಾರ್ಯಾಚರಣೆ ಆರಂಭಿಸಿ, ನ್ಯಾಯಾಲಯದ ಕೊಠಡಿಗಳು, ದಾಖಲೆ ವಿಭಾಗಗಳು, ವಾಹನ ನಿಲುಗಡೆ ಪ್ರದೇಶಗಳು ಹಾಗೂ ಸಾರ್ವಜನಿಕ ಪ್ರವೇಶ ಸ್ಥಳಗಳನ್ನು ಪರಿಶೀಲಿಸಿದರು. ಬೆದರಿಕೆ ಸಂದೇಶ ಮತ್ತು ಕರೆಗಳ ಮೂಲವನ್ನು ಪತ್ತೆಹಚ್ಚಲು ಸೈಬರ್ ತಜ್ಞರು ಹಾಗೂ ತನಿಖಾ ತಂಡಗಳು ಕಾರ್ಯನಿರ್ವಹಿಸುತ್ತಿವೆ.

ಇತ್ತೀಚಿನ ವರ್ಷಗಳಲ್ಲಿ ದೇಶದ ವಿವಿಧ ನ್ಯಾಯಾಲಯಗಳು, ಶಾಲೆಗಳು, ವಿಮಾನ ನಿಲ್ದಾಣಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ಇಂತಹ ಹುಸಿ ಬೆದರಿಕೆ ಸಂದೇಶಗಳು ಬಂದಿದ್ದರೂ, ಪ್ರತಿಯೊಂದು ಬೆದರಿಕೆಯನ್ನು ಭದ್ರತಾ ಸಂಸ್ಥೆಗಳು ಗಂಭೀರವಾಗಿ ಪರಿಗಣಿಸುತ್ತಿವೆ.

# ಮೇಲ್ಮನೆ ಚುನಾವಣೆಯಲ್ಲಿ ಹಿನ್ನಡೆ ; ವಿಜಯೇಂದ್ರ, ಅಶೋಕ್ ನಾಯಕತ್ವದ ವಿರುದ್ಧ ಭುಗಿಲೆದ್ದ ಅಸಮಾಧಾನ

ಬೆಂಗಳೂರು, ಜೂ.19 - ವಿಧಾನಸಭೆಯಿಂದ ಮೇಲ್ಮನೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿಯ ಮೂವರು ಶಾಸಕರು ವಿಪ್ ಉಲ್ಲಂಘಿಸಿ ಅಡ್ಡ ಮತದಾನ ಮಾಡಿದ್ದಾರೆ ಎನ್ನಲಾದ ಬೆಳವಣಿಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಯಾಗುತ್ತಿದ್ದು, ಬಿಜೆಪಿ ವರಿಷ್ಠರು ತೀವ್ರ ಮುಜುಗರಕ್ಕೊಳಗಾಗಿದ್ದಾರೆ. ಚುನಾವಣೆಯನ್ನು ಸಮರ್ಥವಾಗಿ ನಿಭಾಯಿಸದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ್ ಅವರ ಕಾರ್ಯವೈಖರಿಯ ವಿರುದ್ಧ ಪಕ್ಷದೊಳಗೇ ಅಸಮಾಧಾನ ಭುಗಿಲೆದ್ದಿದೆ. ನಾಯಕತ್ವದ ಬದಲಾವಣೆ ಕುರಿತು ಬಿಜೆಪಿ ಒಳ ವಲಯದಲ್ಲಿ ವ್ಯಾಪಕ ಚರ್ಚೆಗಳು ನಡೆಯುತ್ತಿವೆ.

ವಿಧಾನಪರಿಷತ್ ಚುನಾವಣೆಯ ಫಲಿತಾಂಶದ ನಂತರ ರಾಜ್ಯ ಬಿಜೆಪಿ ರಾಜಕೀಯದಲ್ಲಿ ಹೊಸ ಚರ್ಚೆ ಆರಂಭವಾಗಿದೆ. ಪಕ್ಷದ ಕೆಲ ಶಾಸಕರು ವಿಪ್ ಉಲ್ಲಂಘಿಸಿ ಅಡ್ಡಮತದಾನ ನಡೆಸಿದ್ದಾರೆ ಎಂಬ ಆರೋಪಗಳು ಕೇಳಿಬಂದಿದ್ದು, ಈ ಬೆಳವಣಿಗೆ ಪಕ್ಷದ ಸಂಘಟನಾ ಸಾಮರ್ಥ್ಯ ಮತ್ತು ನಾಯಕತ್ವದ ಕಾರ್ಯವೈಖರಿಯ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಈ ಬೆಳವಣಿಗೆ ಹಿನ್ನೆಲೆಯಲ್ಲಿ ವಿಜಯೇಂದ್ರ ಮತ್ತು ಯಕ ಆರ್. ಅಶೋಕ್ ಅವರ ನಾಯಕತ್ವ ಬದಲಾವಣೆ ಮಾಡುವ ಕುರಿತು ಪಕ್ಷದೊಳಗೇ ಚರ್ಚೆಗಳು ನಡೆಯುತ್ತಿವೆ.

ಚುನಾವಣೆಯಲ್ಲಿ ಪಕ್ಷದ ಶಾಸಕರು ವಿಪ್ ಪಾಲಿಸುವುದು ಅತ್ಯಂತ ಮಹತ್ವದ್ದಾಗಿದೆ. ಆದರೆ, ಈ ಬಾರಿ ಬಿಜೆಪಿ ಅಭ್ಯರ್ಥಿಗೆ ನಿರೀಕ್ಷಿತ ಪ್ರಮಾಣದಲ್ಲಿ ಮತಗಳು ದೊರೆಯದ ಹಿನ್ನೆಲೆಯಲ್ಲಿ ಕೆಲ ಶಾಸಕರು ಅಡ್ಡಮತದಾನ ಮಾಡಿದ್ದಾರೆ. ಈ ಆರೋಪಗಳು ನಿಜವೇ? ಎಂಬುದನ್ನು ಪಕ್ಷದ ಆಂತರಿಕ ಪರಿಶೀಲನೆ ಮತ್ತು ಅಧಿಕೃತ ಕ್ರಮಗಳು ಸ್ಪಷ್ಟಪಡಿಸಬೇಕಿದೆ.

ಯಾವುದೇ ರಾಜಕೀಯ ಪಕ್ಷದಲ್ಲಿ ಶಾಸಕರನ್ನು ಒಗ್ಗೂಡಿಸಿ, ಪಕ್ಷದ ನಿರ್ಧಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವುದು ನಾಯಕತ್ವದ ಪ್ರಮುಖ ಜವಾಬ್ದಾರಿ. ಈ ಹಿನ್ನೆಲೆಯಲ್ಲಿ ಬಿ.ವೈ. ವಿಜಯೇಂದ್ರ ಹಾಗೂ ಆರ್. ಅಶೋಕ್ ಅವರು ಶಾಸಕರ ನಡುವೆ ಸಮನ್ವಯ ಸಾಧಿಸುವಲ್ಲಿ ವಿಫಲರಾಗಿದ್ದಾರೆ ಎಂಬ ಅಭಿಪ್ರಾಯ ಪಕ್ಷದ ಕೆಲವು ವಲಯಗಳಲ್ಲಿ ವ್ಯಕ್ತವಾಗುತ್ತಿದೆ.

ಬಿಜೆಪಿಯಲ್ಲಿ ಹಲವು ವರ್ಷಗಳಿಂದ ವಿವಿಧ ಬಣಗಳ ಅಸ್ತಿತ್ವದ ಬಗ್ಗೆ ಚರ್ಚೆಗಳಿವೆ. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬೆಂಬಲಿಗರು, ಇತರ ಹಿರಿಯ ನಾಯಕರ ಬೆಂಬಲಿಗರು ಸೇರಿದಂತೆ ವಿವಿಧ ಗುಂಪುಗಳ ನಡುವಿನ ಸಮನ್ವಯವನ್ನು ಬಲಪಡಿಸುವುದು ವರಿಷ್ಠರಿಗೆ ಸವಾಲಾಗಿ ಪರಿಣಮಿಸಿದೆ. ವಿಧಾನಪರಿಷತ್ ಚುನಾವಣೆ ಬಳಿಕ ಕೇಳಿಬಂದಿರುವ ಅಸಮಾಧಾನದ ಧ್ವನಿಗಳು ಈ ಆಂತರಿಕ ರಾಜಕೀಯದ ಪ್ರತಿಫಲನವೇ? ಎಂಬ ಪ್ರಶ್ನೆಯೂ ಮೂಡಿದೆ.

ಬಿಜೆಪಿಯಲ್ಲಿ ಆಂತರಿಕ ಅಸಮಾಧಾನ ಮುಂದುವರಿದರೆ ಅದರ ರಾಜಕೀಯ ಲಾಭವನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಪಡೆದುಕೊಳ್ಳುವ ಸಾಧ್ಯತೆ ಇದೆ. ವಿಧಾನಮಂಡಲ ಚುನಾವಣೆಗಳಲ್ಲಿ ಪಕ್ಷದ ಏಕತೆ ಅತ್ಯಂತ ಪ್ರಮುಖವಾಗಿರುವುದರಿಂದ, ನಾಯಕತ್ವ ಈ ಬೆಳವಣಿಗೆಯನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

ಅಡ್ಡಮತದಾನದ ಆರೋಪಗಳ ಕುರಿತು ಸತ್ಯಾಂಶ ತಿಳಿದುಕೊಳ್ಳುವುದು, ಅಗತ್ಯವಿದ್ದರೆ ಶಿಸ್ತು ಕ್ರಮ ಕೈಗೊಳ್ಳುವುದು ಹಾಗೂ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಹೈಕಮಾಂಡ್ ಮಧ್ಯಪ್ರವೇಶಿಸುವ ಸಾಧ್ಯತೆಯಿದೆ.

ವಿಧಾನಪರಿಷತ್ ಚುನಾವಣೆಯು ಕೇವಲ ಒಂದು ಸ್ಥಾನಕ್ಕಾಗಿ ನಡೆದ ಚುನಾವಣೆಯಷ್ಟೇ ಅಲ್ಲ, ಅದು ಪಕ್ಷದ ಆಂತರಿಕ ಸಂಘಟನೆ, ನಾಯಕತ್ವದ ಸಾಮರ್ಥ್ಯ ಮತ್ತು ಶಾಸಕರ ನಡುವಿನ ಸಮನ್ವಯದ ಪರೀಕ್ಷೆಯಾಗಿ ಪರಿಣಮಿಸಿದೆ. ಆರೋಪಗಳು ಎಷ್ಟರ ಮಟ್ಟಿಗೆ ಸತ್ಯ ಎಂಬುದು ತನಿಖೆ ಮತ್ತು ಪಕ್ಷದ ಅಧಿಕೃತ ನಿಲುವಿನಿಂದ ಸ್ಪಷ್ಟವಾಗಬೇಕಿದೆ. ಆದರೆ ಈ ಬೆಳವಣಿಗೆ ರಾಜ್ಯ ಬಿಜೆಪಿಯು ಸಂಘಟನಾ ಬಲವನ್ನು ಮತ್ತಷ್ಟು ಗಟ್ಟಿಗೊಳಿಸುವ ಅಗತ್ಯವನ್ನು ಒತ್ತಿ ಹೇಳುತ್ತಿದೆ.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಹಾಗೂ ಮುಂದಿನ ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಬಿಜೆಪಿ ನಾಯಕತ್ವ ಆಂತರಿಕ ಭಿನ್ನಾಭಿಪ್ರಾಯಗಳನ್ನು ನಿವಾರಿಸಿ, ಶಾಸಕರು ಮತ್ತು ಕಾರ್ಯಕರ್ತರಲ್ಲಿ ವಿಶ್ವಾಸ ಮೂಡಿಸುವ ಕೆಲಸವನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕಾಗಿದೆ. ಅದುವೇ ಪಕ್ಷದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಪ್ರಮುಖ ಅಂಶವಾಗಲಿದೆ.



ಪಕ್ಷದ ಕೆಲ ಹಿರಿಯ ನಾಯಕರು ಮತ್ತು ಕಾರ್ಯಕರ್ತರು ನಾಯಕತ್ವದ ವೈಫಲ್ಯದ ಬಗ್ಗೆ ಬೇಸರ ವ್ಯಕ್ತಪಡಿಸುತ್ತಿದ್ದಾರೆ. ಚುನಾವಣಾ ಫಲಿತಾಂಶದ ಬೆನ್ನಲ್ಲೇ, ರಾಜ್ಯ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ಆಗಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಕೆಲವು ನಾಯಕರು ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಬದಲಾಯಿಸಬೇಕು ಎಂಬ ಚರ್ಚೆ ನಡೆಸಿದ್ದಾರೆ. 2023ರ ವಿಧಾನಸಭಾ ಚುನಾವಣೆ ನಂತರ ಪ್ರತಿಪಕ್ಷದ ನಾಯಕರ ಆಯ್ಕೆಯ ಸಂದರ್ಭದಲ್ಲೇ ಪಕ್ಷದೊಳಗೆ ಭಿನ್ನಮತ ಉಂಟಾಗಿತ್ತು. ಅಂದಿನಿಂದಲೂ ಪಕ್ಷದ ಆಂತರಿಕ ನಿರ್ಧಾರಗಳ ಕುರಿತು ಕೆಲ ನಾಯಕರ ನಡುವೆ ಭಿನ್ನಾಭಿಪ್ರಾಯಗಳಿವೆ.

ಇತ್ತೀಚೆಗೆ ಆರ್. ಅಶೋಕ್ ನೇತೃತ್ವದಲ್ಲಿ ಹಲವು ರಾಜಕೀಯ ಚಟುವಟಿಕೆಗಳು ನಡೆಯುತ್ತಿದ್ದು, ಅದರಲ್ಲೂ ಪಕ್ಷದ ಶಾಸಕರ ಅಮಾನತು ಸೇರಿದಂತೆ ಕೆಲ ವಿಷಯಗಳಲ್ಲಿ ಪಕ್ಷದ ಒಳಗೇ ಭಿನ್ನಾಭಿಪ್ರಾಯಗಳು ತೀವ್ರವಾಗಿವೆ. ಪಕ್ಷದ ಶಿಸ್ತಿನ ಗೆರೆಯನ್ನು ದಾಟದ ಬಿಜೆಪಿ ಈ ಚುನಾವಣೆಯಲ್ಲಿ ತೀವ್ರ ಮುಖಭಂಗ ಅನುಭವಿಸಿದೆ. ದೇಶದೆಲ್ಲಡೆ ಪ್ರಾದೇಶಿಕ ಪಕ್ಷದ ಬಿರುಕು ಮೂಡಲು ಬಿಜೆಪಿಯ ಒಳ ರಾಜಕಾರಣ ಕಾರಣ ಎಂದು ವ್ಯಾಖ್ಯಾನಿಸಲಾಗುತ್ತಿದ್ದು, ಕ್ರಾಸ್ ವೋಟಿಂಗ್, ಬಿಜೆಪಿಗೆ ತೀವ್ರ ಮುಜುಗರ ತಂದಿದೆ. ಐದನೇ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಆಪ್ತರೂ ಆಗಿರುವ ವಿನಯ್ ಕಾರ್ತಿಕ್ ಪ್ರಕಾಶ್, ಎಲ್ಲರಿಗಿಂತ ಹೆಚ್ಚು (32) ಮತವನ್ನು ಪಡೆದು, ಚುನಾವಣಾ ರಣಕಣವನ್ನು ಹುಬ್ಬೇರುವಂತೆ ಮಾಡಿದ್ದಾರೆ. ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ಗೆಲುವನ್ನು ಸಾಧಿಸಿದರೂ, ಸ್ವಲ್ಪ ಎಡವಟ್ಟಾಗಿದ್ದರೂ, ಇನ್ನಷ್ಟು ಮುಖಭಂಗ ಎದುರಿಸುವ ಪರಿಸ್ಥಿತಿ ಎದುರಾಗುತ್ತಿತ್ತು.

ಈ ಚುನಾವಣೆಯಲ್ಲಿ, ಯಾರು ಯಾರಿಗೆ ಮತವನ್ನು ಹಾಕಬೇಕು, ಯಾರಿಗೆ ಎಷ್ಟು ಮತವನ್ನು ಹಾಕಬೇಕು ಎನ್ನುವ ವಿಚಾರದಲ್ಲಿ ಬಿಜೆಪಿಯಲ್ಲಿ ಕೊನೇ ಗಳಿಗೆಯವರೆಗೂ ಗೊಂದಲವಿತ್ತು. ಕೆಲವರು ಒಬ್ಬರಿಗೆ 30 ಮತಗಳು ಎನ್ನುತ್ತಿದ್ದರೆ ಮತ್ತೊಬ್ಬರು 29 ಮತ ಎನ್ನುತ್ತಿದ್ದರು.

ಅಡ್ಡ ಮತದಾನ ಮಾಡಿದ ಬಿಜೆಪಿಯ ಮೀರ್ ಸಾದಿಕ್ ಯಾರು ಎನ್ನುವುದನ್ನು ಸದ್ಯದಲ್ಲೇ ಪತ್ತೆ ಹಚ್ಚುವುದಾಗಿ ಆರ್.ಅಶೋಕ್ ಗುಡುಗಿದ್ದಾರೆ. ಕೆಲವರು ಮೂವರು, ಇನ್ನು ಕೆಲವರು ನಾಲ್ಕು ಅಂತಿದ್ದಾರೆ. ಒಟ್ಟಿನಲ್ಲಿ, ಬಿಜೆಪಿ - ಜೆಡಿಎಸ್ ಸೇರಿ ಹನ್ನೊಂದು ಅಡ್ಡಮತದಾನಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ, ಕಾಂಗ್ರೆಸ್ಸಿನ ಐದನೇ ಅಭ್ಯರ್ಥಿಗೆ 32 ಮತಗಳು ಬೀಳಲು ಹೇಗೆ ಸಾಧ್ಯ? ಈ ಅಡ್ಡ ಮತದಾನದ ಹಿನ್ನಡೆಯ ಜವಾಬ್ದಾರಿಯನ್ನು ವಹಿಸಿಕೊಳ್ಳುವವರು ಯಾರು? ಈ ಚುನಾವಣೆಯಲ್ಲೂ ಹೊಂದಾಣಿಕೆ ನಡೆದಿದೆಯಾ ಎನ್ನುವ ಪ್ರಶ್ನೆ ಬಿಜೆಪಿಯಲ್ಲಿದೆ.

ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಅಡ್ಜಸ್ಟ್‌ಮೆಂಟ್ ಪಾಲಿಟಿಕ್ಸ್ ಬಗ್ಗೆ ಉಲ್ಲೇಖಿಸುತ್ತಲೇ ಇರುತ್ತಾರೆ. ಗುರುವಾರ ನಡೆದ ಚುನಾವಣೆಯಲ್ಲಿ ಅವರು ಬಿಜೆಪಿ ಅಭ್ಯರ್ಥಿಗೆ ಮತವನ್ನು ಹಾಕಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಇನ್ನು, ತರಬೇತಿ ಕೊಟ್ಟರೂ, ಬಿಜೆಪಿಯ ಒಬ್ಬರ ಮತ ಅಸಿಂಧುಗೊಂಡಿದ್ದು ಹೇಗೆ? ಎನ್ನುವುದು ಚರ್ಚೆಯ ವಿಷಯವಾಗಿದೆ.

# ಜಿಯೋ ಪ್ಲಾಟ್‌ಫಾರ್ಮ್ಸ್‌ಗೆ 27 ಕೋಟಿ ಷೇರು ಮಾರಾಟಕ್ಕೆ ಮಂಡಳಿಯ ಅನುಮೋದನೆ

ಮುಂಬಯಿ, ಜೂ. 19 - ರಿಲಯನ್ಸ್ ಇಂಡಸ್ಟ್ರೀಸ್‌ನ ಡಿಜಿಟಲ್ ಮತ್ತು ದೂರಸಂಪರ್ಕ ವಿಭಾಗವಾದ ಜಿಯೋ ಪ್ಲಾಟ್‌ಫಾರ್ಮ್ಸ್ ಲಿಮಿಟೆಡ್‌ನ ಮಂಡಳಿಯು 27 ಕೋಟಿ ಷೇರುಗಳ ಹೊಸ ವಿತರಣೆಯನ್ನು ಒಳಗೊಂಡ ಆರಂಭಿಕ ಸಾರ್ವಜನಿಕ ಕೊಡುಗೆಗಾಗಿ ಕರಡು ದಾಖಲೆಗಳನ್ನು ಸಲ್ಲಿಸಲು ಅನುಮೋದನೆ ನೀಡಿದೆ ಎಂದು ಆರ್‌ಐಎಲ್ ಶುಕ್ರವಾರ ತಿಳಿಸಿದೆ.

ರಿಲಯನ್ಸ್‌ನ 49ನೇ ವಾರ್ಷಿಕ ಷೇರುದಾರರ ಸಭೆಯನ್ನುದ್ದೇಶಿಸಿ ಮಾತನಾಡಿದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಮುಖೇಶ್ ಅಂಬಾನಿ, ಜಿಯೋ ಪ್ಲಾಟ್‌ಫಾರ್ಮ್ಸ್ ಮಂಡಳಿಯು ಅನುಮೋದಿಸಿದ ಕರಡು ರೆಡ್ ಹೆರಿಂಗ್ ಪ್ರಾಸ್ಪೆಕ್ಟಸ್ (ಡಿಆರ್‌ಎಚ್‌ಪಿ) ಅನ್ನು ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಗೆ ಸಲ್ಲಿಸಲಾಗುವುದು ಎಂದು ಹೇಳಿದರು.



ಪ್ರಸ್ತಾವಿತ ಐಪಿಒ ಹತ್ತು 10 ರೂ. ಮುಖಬೆಲೆಯ 27 ಕೋಟಿ ಷೇರುಗಳ ಹೊಸ ಬಿಡುಗಡೆಯನ್ನು ಒಳಗೊಂಡಿದೆ.

ಸೆಬಿ ನಿಯಮಗಳಿಗೆ ಅನುಸಾರವಾಗಿ ಇಶ್ಯೂ ಬೆಲೆಯನ್ನು ಬುಕ್-ಬಿಲ್ಡಿಂಗ್ ಪ್ರಕ್ರಿಯೆಯ ಮೂಲಕ ನಿರ್ಧರಿಸಲಾಗುತ್ತದೆ.

ಜಿಯೋ ಪ್ಲಾಟ್‌ಫಾರ್ಮ್ಸ್ ರಿಲಯನ್ಸ್ ಇಂಡಸ್ಟ್ರೀಸ್‌ನ ಅಂಗಸಂಸ್ಥೆಯಾಗಿದ್ದು, ಗುಂಪಿನ ದೂರಸಂಪರ್ಕ, ಡಿಜಿಟಲ್ ಸೇವೆಗಳು ಮತ್ತು ತಂತ್ರಜ್ಞಾನ ವ್ಯವಹಾರಗಳನ್ನು ಹೊಂದಿದೆ.

ಕಂಪನಿಯು ಬೆಲೆ ಶ್ರೇಣಿ ಅಥವಾ ಕೊಡುಗೆಯ ಒಟ್ಟು ಗಾತ್ರವನ್ನು ಬಹಿರಂಗಪಡಿಸಿಲ್ಲ, ಇದು ಅಂತಿಮ ವಿತರಣೆ ಬೆಲೆ ಮತ್ತು ನಿಯಂತ್ರಕ ಅನುಮೋದನೆಗಳನ್ನು ಅವಲಂಬಿಸಿರುತ್ತದೆ.

ಜಿಯೋ ಐಪಿಒವನ್ನು ಕಂಪನಿಯ ವರ್ಷದ ಅತ್ಯಂತ ಮಹತ್ವದ ಮೌಲ್ಯ-ಸೃಷ್ಟಿ ಕಾರ್ಯಕ್ರಮ ಎಂದು ಕರೆದ ಅಂಬಾನಿ, ಪಟ್ಟಿ ಮಾಡುವಿಕೆಯು ರಿಲಯನ್ಸ್ ಷೇರುದಾರರಿಗೆ ಮೌಲ್ಯವನ್ನು ಅನ್ಲಾಕ್ ಮಾಡುತ್ತದೆ ಮತ್ತು ಹೊಸ ಹೂಡಿಕೆದಾರರಿಗೆ ಕಂಪನಿಯ ಬೆಳವಣಿಗೆಯಲ್ಲಿ ಭಾಗವಹಿಸಲು ಅವಕಾಶವನ್ನು ನೀಡುತ್ತದೆ ಎಂದು ಹೇಳಿದರು.

ಐಪಿಒ ಪ್ರಕ್ರಿಯೆಯನ್ನು ಅವರ ಮಕ್ಕಳಾದ ಆಕಾಶ್, ಇಶಾ ಮತ್ತು ಅನಂತ್ ನೇತೃತ್ವ ವಹಿಸುತ್ತಾರೆ. ಅವರು ಜಿಯೋದಲ್ಲಿ ಮುಂದಿನ ಹಂತದ ಬೆಳವಣಿಗೆ ಮತ್ತು ಮೌಲ್ಯ ಸೃಷ್ಟಿಗೆ ಮುಂಚೂಣಿಯಲ್ಲಿರುತ್ತಾರೆ ಎಂದು ಅವರು ಹೇಳಿದರು. "ಜಿಯೋದ ಪ್ರಸ್ತಾವಿತ ಪಟ್ಟಿ ಭಾರತವು ಜಾಗತಿಕ ಮಟ್ಟದ, ಜಾಗತಿಕ ಸಾಮರ್ಥ್ಯ ಮತ್ತು ಜಾಗತಿಕ ಮೌಲ್ಯದ ತಂತ್ರಜ್ಞಾನ ಕಂಪನಿಗಳನ್ನು ನಿರ್ಮಿಸಬಹುದು ಎಂಬುದನ್ನು ಜಗತ್ತಿಗೆ ಪ್ರದರ್ಶಿಸುತ್ತದೆ" ಎಂದು ಅಂಬಾನಿ ಹೇಳಿದರು. ಜಿಯೋ ಐಪಿಒವನ್ನು 'ಈ ವರ್ಷದ ಅತ್ಯಂತ ಪ್ರಮುಖ ಮೌಲ್ಯ ಸೃಷ್ಟಿ ಮೈಲಿಗಲ್ಲು' ಎಂದು ವಿವರಿಸಲಾಗಿದೆ, ಇದು ರಿಲಯನ್ಸ್ ಷೇರುದಾರರಿಗೆ ಉತ್ತಮ ಮೌಲ್ಯವನ್ನು ಅನ್ಲಾಕ್ ಮಾಡುತ್ತದೆ ಮತ್ತು ಇತರರಿಗೆ ಆಕರ್ಷಕ ಹೂಡಿಕೆ ಅವಕಾಶವನ್ನು ನೀಡುತ್ತದೆ. ಐಪಿಒ ಘೋಷಣೆಯ ಜೊತೆಗೆ, ಜಿಯೋದ ಮುಂದಿನ ಹಂತದ ವಿಸ್ತರಣೆಗೆ ಇದು ಕಾರ್ಯತಂತ್ರದ ಆದ್ಯತೆಗಳನ್ನು ವಿವರಿಸಲಾಗಿದೆ.

# ಜಾರ್ಖಂಡ್: ಸಿಡಿಲು ಬಡಿದು ಮಹಿಳೆಯರು, ಬಾಲಕ ಸಹಿತ ಎಂಟು ಮಂದಿ ಸಾವು

## ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಇಂಡಿಗೋ ವಿಮಾನಕ್ಕೆ ಸಿಡಿಲು ಬಡಿತ

ರಾಂಚಿ/ಕೋಲ್ಕತ್ತಾ, ಜೂ. 19 - ಕಳೆದ 24 ಗಂಟೆಗಳಲ್ಲಿ ಜಾರ್ಖಂಡ್‌ನ ಆರು ಜಿಲ್ಲೆಗಳಲ್ಲಿ ಸಿಡಿಲು ಬಡಿದು ಇಬ್ಬರು ಮಹಿಳೆಯರು ಮತ್ತು ಎರಡು ವರ್ಷದ ಬಾಲಕ ಸೇರಿದಂತೆ ಕನಿಷ್ಠ ಎಂಟು ಜನರು ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.



ಎಂಟು ಜನರಲ್ಲಿ, ಮೂವರು ಹಜಾರಿಬಾಗ್ ಜಿಲ್ಲೆಯಲ್ಲಿ ಸಾವನ್ನಪ್ಪಿದ್ದರೆ, ಉಳಿದ ಸಾವುಗಳು ಪಲಾಮು, ಲೋಹರ್ದಾಗಾ, ರಾಮಗಢ, ಪಶ್ಚಿಮ ಸಿಂಗ್‌ಭೂಮ್ ಮತ್ತು ಗೊಡ್ಡಾ ಜಿಲ್ಲೆಗಳಿಂದ ವರದಿಯಾಗಿವೆ.

ಹಜಾರಿಬಾಗ್ ಜಿಲ್ಲೆಯ ಇಚಾಕ್ ಪೊಲೀಸ್ ಠಾಣೆ ವ್ಯಾಪ್ತಿಯ ಬರ್ಸ ಗ್ರಾಮದಲ್ಲಿ ಸುರೇಶ್ ಪ್ರಸಾದ್ ಮೆಹ್ತೋ (57) ಸಾವನ್ನಪ್ಪಿದ್ದರೆ, ಇತರ ಇಬ್ಬರು ಪ್ರತ್ಯೇಕ ಸ್ಥಳಗಳಲ್ಲಿ ಸಾವನ್ನಪ್ಪಿದ್ದಾರೆ. ಅವರನ್ನು ಪಲಾಮು ಗ್ರಾಮದ ಕಿಶುನ್ ಮೆಹ್ತೋ (60) ಮತ್ತು ಫತಾರಿಯಾ ಪಾನಿ ಗ್ರಾಮದ ಶಾಂತಿ ದೇವಿ (41) ಎಂದು ಗುರುತಿಸಲಾಗಿದೆ. ಪಲಾಮುವಿನ ಮನ್ಸೂರ್ ಗ್ರಾಮದಲ್ಲಿ 30 ವರ್ಷದ ಮಹಿಳೆ ಸಾವನ್ನಪ್ಪಿದ್ದು, ಒಬ್ಬ ವ್ಯಕ್ತಿ ಸುಟ್ಟ ಗಾಯಗಳಿಗೆ ಒಳಗಾಗಿದ್ದಾರೆ. ಈ ಘಟನೆ ಪಡ್ವಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ''ಮೃತಳನ್ನು ಲಕ್ಷ್ಮಿ ದೇವಿ ಎಂದು ಗುರುತಿಸಲಾಗಿದೆ. ಮೇಕೆ ಮೇಯಿಸಲು ಹೊಲಕ್ಕೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ'' ಎಂದು ಪಡ್ವಾ ಪೊಲೀಸ್ ಠಾಣೆಯ ಉಸ್ತುವಾರಿ ಅಂಚಿತ್ ಕುಮಾರ್ ತಿಳಿಸಿದ್ದಾರೆ. ರಾಮ್‌ಗಢದ ಗೋಲಾ ಬ್ಲಾಕ್‌ನ ಪಿಪ್ರತಾಂಡ್ ಗ್ರಾಮದಲ್ಲಿ ನಡೆದ ಮತ್ತೊಂದು ಘಟನೆಯಲ್ಲಿ ಹೊಲದಲ್ಲಿ ಮೇಕೆ ಮೇಯಿಸುತ್ತಿದ್ದಾಗ ಸಿಡಿಲು ಬಡಿದು 15 ವರ್ಷದ ಬಾಲಕ ಸಾವನ್ನಪ್ಪಿದ್ದಾನೆ ಎಂದು ಗೋಲಾ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಅಭಿಷೇಕ್ ಕುಮಾರ್ ತಿಳಿಸಿದ್ದಾರೆ. ಲೋಹರ್ದಾಗಾದಲ್ಲಿ, 13 ವರ್ಷದ ಬಾಲಕಿ ಸಾವನ್ನಪ್ಪಿದ್ದು, ಮತ್ತೊಬ್ಬಳು ಸುಟ್ಟ ಗಾಯಕ್ಕೆ ಒಳಗಾಗಿದ್ದಾಳೆ. ಚೌಡ್ರಾ ಗ್ರಾಮದ ಸರ್ಕಾರಿ ಶಾಲೆಯ ಬಳಿಯ ಮರದಿಂದ ಮಾವಿನ ಹಣ್ಣು ಕೀಳುತ್ತಿದ್ದಾಗ ಈ ಘಟನೆ ಸಂಭವಿಸಿದೆ ಎಂದು ಕಿಸ್ಕೋ ಪೊಲೀಸ್ ಠಾಣೆಯ ಉಸ್ತುವಾರಿ ಅಧಿಕಾರಿ ಮನೋಜ್ ಸಾಹು ತಿಳಿಸಿದ್ದಾರೆ. ಗೊಡ್ಡಾ ಜಿಲ್ಲೆಯಲ್ಲಿ 30 ವರ್ಷದ ಬಬ್ಲೂ ಪಂಡಿತ್ ಕೂಡ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಮಚ್‌ಖಿರ್ ಗ್ರಾಮದಲ್ಲಿ ಹೊಲದಿಂದ ಮನೆಗೆ ಹೋಗುತ್ತಿದ್ದಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ, ಎರಡು ವರ್ಷದ ಬಾಲಕನೊಬ್ಬ ಮಲುಕಾ ಗ್ರಾಮದ ತಮ್ಮ ಮನೆಯ ಅಂಗಳದಲ್ಲಿದ್ದಾಗ ಸಿಡಿಲು ಬಡಿದು ಸಾವನ್ನಪ್ಪಿದ್ದು, ಆತನ ತಾಯಿಗೆ ಗಂಭೀರ ಸುಟ್ಟ ಗಾಯಗಳಾಗಿವೆ ಎಂದು ಜಾಗನ್ನಾಥಪುರದ ಎಸ್‌ಡಿಪಿಒ ರಫೇಲ್ ಮುರ್ಮು ತಿಳಿಸಿದ್ದಾರೆ.

**ಇಂಡಿಗೋ ವಿಮಾನಕ್ಕೆ ಸಿಡಿಲು ಬಡಿತ:**

ಶುಕ್ರವಾರ ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಗುಡುಗು ಸಹಿತ ಮಳೆಯ ಸಮಯದಲ್ಲಿ ಅಗರ್ತಲಾಕ್ಕೆ ತೆರಳುತ್ತಿದ್ದ ಇಂಡಿಗೋ ವಿಮಾನಕ್ಕೆ ಸಿಡಿಲು ಬಡಿದಿದೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಗುಡುಗು ಸಹಿತ ಮಳೆಯ ವಾತಾವರಣದ ನಡುವೆ ಈ ಘಟನೆ ನಡೆದಿದ್ದು, ವಿಮಾನ ನಿಲ್ದಾಣ ಕಾರ್ಯಾಚರಣೆ ನಿಯಂತ್ರಣ ಕೇಂದ್ರ (ಎಒಸಿಸಿ) ಹವಾಮಾನ ಎಚ್ಚರಿಕೆ ನೀಡಿತ್ತು. ಈ ಘಟನೆಯಲ್ಲಿ ಯಾವುದೇ ಪ್ರಯಾಣಿಕರು ಗಾಯಗೊಂಡಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ

# ಮರಾಠಿ ಪ್ರಮಾಣಪತ್ರವಿಲ್ಲದ ಆಟೋ, ಟ್ಯಾಕ್ಸಿ ಚಾಲಕರ ವಿರುದ್ಧ ಆ.15ರ ಬಳಿಕ ಕ್ರಮ

ಮುಂಬಯಿ, ಜೂ.19 - ಆ.15 ರೊಳಗೆ ಮರಾಠಿ ಭಾಷಾ ಪ್ರಾವೀಣ್ಯತೆಯ ಪ್ರಮಾಣಪತ್ರವನ್ನು ಪಡೆಯಲು ವಿಫಲರಾದ ಮಹಾರಾಷ್ಟ್ರದ ಮರಾಠಿಯೇತರ ಆಟೋ-ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು ಕ್ರಮ ಎದುರಿಸಬೇಕಾಗುತ್ತದೆ ಎಂದು ರಾಜ್ಯ ಸಾರಿಗೆ ಇಲಾಖೆ ಶುಕ್ರವಾರ ತಿಳಿಸಿದೆ.

ಮರಾಠಿಯೇತರ ಎಲ್ಲಾ ಆಟೋ-ರಿಕ್ಷಾ ಮತ್ತು ಟ್ಯಾಕ್ಸಿ ಚಾಲಕರು 2026ರ ಜೂ.1 ಮತ್ತು ಆ.15 ನಡುವೆ ನಾಲ್ಕು ಗಂಟೆಗಳ 'ಮರಾಠಿ ಭಾಷಾ ಸಂವಾದ ಪಾಠಕ್ರಮ' (ಮರಾಠಿ ಸಂವಹನ ಕೋರ್ಸ್)ನ್ನು ಪೂರ್ಣಗೊಳಿಸುವುದನ್ನು ಇಲಾಖೆ ಕಡ್ಡಾಯಗೊಳಿಸಿದೆ.

ಮಹಾರಾಷ್ಟ್ರ ರಾಜ್ಯ ಮರಾಠಿ ಭಾಷಾ ಇಲಾಖೆ, ಕೊಂಕಣ ಮರಾಠಿ ಸಾಹಿತ್ಯ ಪರಿಷತ್ತು ಮತ್ತು ಮುಂಬಯಿ ಮರಾಠಿ ಸಾಹಿತ್ಯ ಸಂಘವನ್ನು ಉಚಿತವಾಗಿ ಕೋರ್ಸ್ ನಡೆಸಲು ಅಧಿಕೃತ ಸಂಸ್ಥೆಗಳಾಗಿ ಗೊತ್ತುಪಡಿಸಲಾಗಿದೆ. ಈ ಸಂಸ್ಥೆಗಳು ನೀಡುವ ಪ್ರಮಾಣಪತ್ರಗಳನ್ನು ಮಾತ್ರ ಸಾರಿಗೆ ಇಲಾಖೆ ಗುರುತಿಸುತ್ತದೆ.

ಮುಂಬಯಿ ಮಹಾನಗರ ಪ್ರದೇಶದಾದ್ಯಂತ (ಎಂಎಂಆರ್) 71 ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಕೊಂಕಣ ಮರಾಠಿ ಸಾಹಿತ್ಯ ಪರಿಷತ್ತಿನೊಂದಿಗೆ ಸಂಬಂಧ ಹೊಂದಿರುವ ಸುಮಾರು 4,500 ಶಿಕ್ಷಕರನ್ನು ಸಂಪರ್ಕಿಸಲಾಗಿದೆ ಎಂದು ಸಾರಿಗೆ ಇಲಾಖೆಯ ಜಂಟಿ ಆಯುಕ್ತ ರವಿ ಗಾಯಕ್ವಾಡ್ ತಿಳಿಸಿದ್ದಾರೆ.

ಪ್ರಾದೇಶಿಕ ಸಾರಿಗೆ ಕಚೇರಿ (ಆರ್‌ಟಿಒ) ಅಧಿಕಾರಿಗಳು ಚಾಲಕರಿಗೆ ದಾಖಲಾತಿ ಮತ್ತು ಕೋರ್ಸ್ ಪೂರ್ಣಗೊಳಿಸಲು ಸಹಾಯ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಪ್ರಯಾಣಿಕರು ಮತ್ತು ಚಾಲಕರ ನಡುವಿನ ಭಾಷಾ ಅಡೆತಡೆಗಳನ್ನು ತೆಗೆದುಹಾಕುವುದು, ಸೇವಾ ಗುಣಮಟ್ಟವನ್ನು ಸುಧಾರಿಸುವುದು ಮತ್ತು ಚಾಲಕರಿಗೆ ವೃತ್ತಿಪರ ಅವಕಾಶಗಳನ್ನು ಹೆಚ್ಚಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಇಲಾಖೆ ಹೇಳಿಕೆಯಲ್ಲಿ ತಿಳಿಸಿದೆ. 2026ರ ಆ.15ರ ಬಳಿಕ ಪ್ರಮಾಣಪತ್ರವನ್ನು ಹೊಂದಿರದ ಮರಾಠಿಯೇತರ ಚಾಲಕರ ವಿರುದ್ಧ ಕಾನೂನು ಮತ್ತು ದಂಡದ ಕ್ರಮ ಕೈಗೊಳ್ಳಲಾಗುವುದು ಎಂದು ಅದು ಎಚ್ಚರಿಸಿದೆ.

ಚಾಲಕರಿಗೆ ದಂಡ ವಿಧಿಸುವುದು ಉದ್ದೇಶವಲ್ಲ, ಆದರೆ ಅವರು ಉಚಿತ ತರಬೇತಿಯನ್ನು ಪಡೆದುಕೊಳ್ಳುತ್ತಾರೆ ಮತ್ತು ನಿಗದಿತ ಅವಧಿಯೊಳಗೆ ಪ್ರಮಾಣಪತ್ರವನ್ನು ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು ಎಂದು ಗಾಯಕ್ವಾಡ್ ಹೇಳಿದರು.

# ಸ್ಯಾಟಲೈಟ್ ಸ್ಪರ್ಧೆಗೆ ಪ್ರವೇಶಿಸಿದ ಜಿಯೋ; ಸ್ವದೇಶಿ ಎಲ್‌ಇಒ ನೆಟ್‌ವರ್ಕ್‌ಗಾಗಿ ಯೋಜನೆ ಅನಾವರಣ

ಮುಂಬಯಿ, ಜೂ. 19 - ಎಲಾನ್ ಮಸ್ಕ್ ನೇತೃತ್ವದ ಸ್ಟಾರ್‌ಲಿಂಕ್ ಮತ್ತು ಇತರ ಜಾಗತಿಕ ಉಪಗ್ರಹ ಇಂಟರ್‌ನೆಟ್ ಪೂರೈಕೆದಾರರಿಗೆ ನೇರ ಸ್ಪರ್ಧೆಯನ್ನು ಒಡ್ಡುವ ನಿಟ್ಟಿನಲ್ಲಿ, ರಿಲಯನ್ಸ್ ಜಿಯೋ ಶುಕ್ರವಾರ ಭಾರತಕ್ಕಾಗಿ ಲೋ ಅರ್ಥ್ ಆರ್ಬಿಟ್ (ಎಲ್‌ಇಒ) ಉಪಗ್ರಹ ಸಮೂಹವನ್ನು ಅಭಿವೃದ್ಧಿಪಡಿಸುವ ಮೂಲಕ ಉಪಗ್ರಹ ಸಂವಹನ ವಲಯವನ್ನು ಪ್ರವೇಶಿಸುವ ಯೋಜನೆಯನ್ನು ಪ್ರಕಟಿಸಿದೆ.

ರಿಲಯನ್ಸ್ ಜಿಯೋ ಅಧ್ಯಕ್ಷ ಆಕಾಶ್ ಅಂಬಾನಿ, ರಿಲಯನ್ಸ್ ಇಂಡಸ್ಟ್ರೀಸ್‌ನ 49ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಮಾತನಾಡುತ್ತಾ, ಕಂಪನಿಯು ತನ್ನದೇ ಆದ ಎಲ್‌ಇಒ ಉಪಗ್ರಹ ಸಮೂಹದ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡುತ್ತಿದೆ ಮತ್ತು ಪ್ರಮುಖ ಜಾಗತಿಕ ಉಪಗ್ರಹ ನಿರ್ವಾಹಕರೊಂದಿಗೆ ಸಹ ಪಾಲುದಾರಿಕೆ ಹೊಂದಲಿದೆ ಎಂದು ಹೇಳಿದರು. ಜಿಯೋ ಈಗಾಗಲೇ ಭಾರತದ ಅತಿದೊಡ್ಡ ಟೆಲಿಕಾಂ ಆಪರೇಟರ್ ಮತ್ತು ಚಂದಾದಾರರ ಆಧಾರದ ಮೇಲೆ ವಿಶ್ವದ ಅತಿದೊಡ್ಡ ಮೊಬೈಲ್ ಸೇವಾ ಪೂರೈಕೆದಾರರಲ್ಲಿ ಒಂದಾಗಿರುವುದರಿಂದ ಈ ಘೋಷಣೆ ಮಹತ್ವದ್ದಾಗಿದೆ.




ಜಿಯೋ ಭಾರತವನ್ನು ನೆಲದ ಮೇಲೆ ಸಂಪರ್ಕಿಸಿದೆ. ಈಗ, ನಾವು ಭಾರತವನ್ನು ಆಕಾಶದಿಂದ ಸಂಪರ್ಕಿಸಬೇಕು. ಜಿಯೋ ನೆಟ್‌ವರ್ಕ್ ತಲುಪಲು ಸಾಧ್ಯವಾಗದ ದೂರದ ಹಳ್ಳಿಗಳು, ದ್ವೀಪ ಸಮುದಾಯಗಳು ಮತ್ತು ಗಡಿ ಹೊರಠಾಣೆಗಳು ಇನ್ನೂ ಇವೆ. ಅವರಿಗೆ, ಉಪಗ್ರಹ ಸಂಪರ್ಕವು ಭಾರತದ ಉಳಿದ ಭಾಗಗಳಿಗೆ ಸೇತುವೆಯಾಗಲಿದೆ ಎಂದು ಆಕಾಶ್ ಅಂಬಾನಿ ಹೇಳಿದರು.

ಜಿಯೋ ಭಾರತದಲ್ಲಿ ತನ್ನದೇ ಆದ ನೆಲದ ಕೇಂದ್ರಗಳನ್ನು ಸ್ಥಾಪಿಸುತ್ತಿದೆ, ಇದು ಬಾಹ್ಯಾಕಾಶದಲ್ಲಿರುವ ಉಪಗ್ರಹಗಳು ಮತ್ತು ನೆಲದ ಮೇಲಿನ ಬಳಕೆದಾರರ ನಡುವಿನ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತದೆ. ಈ ಕೇಂದ್ರಗಳು ಜಿಯೋದ ಜಾಗತಿಕ ಪಾಲುದಾರರು ನಿರ್ವಹಿಸುವ ಉಪಗ್ರಹ ಜಾಲಗಳು ಮತ್ತು ಜಿಯೋ ಸ್ವತಃ ಉಡಾಯಿಸಿದ ಯಾವುದೇ ಭವಿಷ್ಯದ ಉಪಗ್ರಹಗಳನ್ನು ಬೆಂಬಲಿಸುತ್ತವೆ.

ಎಲ್‌ಇಒ (ಲೋ ಅರ್ಥ್ ಆರ್ಬಿಟ್) ಉಪಗ್ರಹಗಳು ಭೂಮಿಗೆ ಹೆಚ್ಚು ಹತ್ತಿರದಲ್ಲಿ ಸಾಮಾನ್ಯವಾಗಿ ಮೇಲ್ಮೈಯಿಂದ 160 ಕಿಮೀ ಮತ್ತು 2,000 ಕಿಮೀ ಎತ್ತರದಲ್ಲಿ. ಕಾರ್ಯನಿರ್ವಹಿಸುತ್ತವೆ, ಅವು ಹತ್ತಿರವಾಗಿರುವುದರಿಂದ, ಅವು ಸಾಂಪ್ರದಾಯಿಕ ಸಂವಹನ ಉಪಗ್ರಹಗಳಿಗಿಂತ ವೇಗವಾದ ಇಂಟರ್‌ನೆಟ್ ವೇಗ ಮತ್ತು ಕಡಿಮೆ ವಿಳಂಬವನ್ನು ಒದಗಿಸಬಹುದು, ಇದು ಬ್ರಾಡ್‌ಬ್ಯಾಂಡ್ ಸೇವೆಗಳಿಗೆ ಸೂಕ್ತವಾಗಿದೆ.

ಸ್ಟಾರ್‌ಲಿಂಕ್ ಪ್ರಸ್ತುತ ಜಾಗತಿಕ ಉಪಗ್ರಹ ಬ್ರಾಡ್‌ಬ್ಯಾಂಡ್ ಮಾರುಕಟ್ಟೆಯಲ್ಲಿ ಮುಂಚೂಣಿಯಲ್ಲಿದೆ, ಏಕೆಂದರೆ ಕಂಪನಿಯು ಕಕ್ಷೆಯಲ್ಲಿ ಸುಮಾರು 10,634 ಸಕ್ರಿಯ ಉಪಗ್ರಹಗಳನ್ನು ಹೊಂದಿದೆ ಮತ್ತು ವಿಶ್ವಾದ್ಯಂತ ಸುಮಾರು 12 ಮಿಲಿಯನ್ ಗ್ರಾಹಕರಿಗೆ ಸೇವೆ ಸಲ್ಲಿಸುತ್ತದೆ. ಅಮೆಜಾನ್‌ನ ಉಪಗ್ರಹ ಬ್ರಾಡ್‌ಬ್ಯಾಂಡ್ ಯೋಜನೆ, ಪ್ರಾಜೆಕ್ಟ್ ಕುಯಿಪರ್, ಕಕ್ಷೆಯಲ್ಲಿ ಸುಮಾರು 367 ಉಪಗ್ರಹಗಳನ್ನು ಹೊಂದಿದ್ದರೆ, ಭಾರ್ತಿ ಎಂಟರ್‌ಪ್ರೈಸಸ್ ಬೆಂಬಲಿತ ಯುಟೆಲ್‌ಸ್ಯಾಟ್ ಒನ್‌ವೆಬ್ ಸುಮಾರು 654 ಉಪಗ್ರಹಗಳನ್ನು ನಿರ್ವಹಿಸುತ್ತದೆ.

ಜಿಯೋ ಪ್ಲಾಟ್‌ಫಾರ್ಮ್‌ಗಳು ಭಾರತದಲ್ಲಿ ಉಪಗ್ರಹ ಬ್ರಾಡ್‌ಬ್ಯಾಂಡ್ ಸೇವೆಗಳನ್ನು ನೀಡಲು ಈಗಾಗಲೇ ಲಕ್ಸೆಂಬರ್ಗ್ ಮೂಲದ ಎಸ್‌ಇಎಸ್ ಜೊತೆ ಪಾಲುದಾರಿಕೆ ಹೊಂದಿದೆ. ಆದಾಗ್ಯೂ, ಎಸ್‌ಇಎಸ್ ಮುಖ್ಯವಾಗಿ ಭೂಸ್ಥಿರ ಮತ್ತು ಮಧ್ಯಮ ಭೂ ಕಕ್ಷೆಯ ಉಪಗ್ರಹಗಳನ್ನು ನಿರ್ವಹಿಸುತ್ತದೆ ಮತ್ತು ಪ್ರಸ್ತುತ ಎಲ್‌ಇಒ ಉಪಗ್ರಹ ಜಾಲವನ್ನು ಹೊಂದಿಲ್ಲ.

ಎಐ ಸಹಾಯಕವು ಸಂಭಾಷಣೆಗಳನ್ನು ನೈಜ ಸಮಯದಲ್ಲಿ ಪಠ್ಯವಾಗಿ ಪರಿವರ್ತಿಸಬಹುದು, ವಿಭಿನ್ನ ಸ್ಪೀಕರ್‌ಗಳನ್ನು ಗುರುತಿಸಬಹುದು, ಕರೆ ಸಾರಾಂಶಗಳು ಮತ್ತು ಕ್ರಿಯಾಶೀಲ ಅಂಶಗಳನ್ನು ಸಿದ್ಧಪಡಿಸಬಹುದು ಮತ್ತು ಕ್ಯಾಬ್‌ಗಳನ್ನು ಬುಕ್ ಮಾಡುವುದು, ಆಹಾರವನ್ನು ಆರ್ಡರ್‌ಮಾಡುವುದು ಅಥವಾ ಸಭೆಗಳನ್ನು ನಿಗದಿಪಡಿಸುವಂತಹ ಕಾರ್ಯಗಳನ್ನು ನಿರ್ವಹಿಸಲು ಬಳಕೆದಾರರಿಗೆ ಸಹಾಯ ಮಾಡಬಹುದು.

ಜಿಯೋ ತನ್ನ 5ಜಿ ನೆಟ್‌ವರ್ಕ್‌ನಿಂದ ಹೆಚ್ಚಿನ ಆದಾಯವನ್ನು ಗಳಿಸುವ ಯೋಜನೆಗಳನ್ನು ಸಹ ಹಂಚಿಕೊಂಡಿದೆ. ಪ್ರತಿ ಬಳಕೆದಾರರಿಗೆ ಸರಾಸರಿ ಆದಾಯದಲ್ಲಿ ಭವಿಷ್ಯದ ಬೆಳವಣಿಗೆಯು ಪ್ರೀಮಿಯಂ 5ಜಿ ಸೇವೆಗಳು, ಎಐ-ಚಾಲಿತ ಕೊಡುಗೆಗಳು ಮತ್ತು ವ್ಯವಹಾರಗಳಿಗೆ ಪರಿಹಾರಗಳಿಂದ ಬರುತ್ತದೆ ಎಂದು ಆಕಾಶ್ ಅಂಬಾನಿ ಹೇಳಿದರು.

# ಮುಖ್ಯಸ್ಥ ಸ್ಥಾನದಿಂದ ಕೆಳಗಿಳಿಯಲು ಸಿದ್ಧ; ಉದ್ಧವ್ ಠಾಕ್ರೆ

ಮೊದಲ ಪುಟದಿಂದ

ತಾವು ಹಿಂಜರಿದಿಲ್ಲ ಮತ್ತು ಎಲ್ಲಾ ಸವಾಲುಗಳನ್ನು ಎದುರಿಸಲು ದೃಢನಿಶ್ಚಯದಿಂದ ಇದ್ದೇನೆ.ಆದರೆ ಒಬ್ಬ ಶಿವಸೈನಿಕ ಕೂಡ ನನ್ನ ಕಡೆಗೆ ಬೆರಳು ತೋರಿಸುವುದನ್ನು ನಾನು ಬಯಸುವುದಿಲ್ಲ, ಅಂದರೆ ನಾನು ಮುಖ್ಯಮಂತ್ರಿ ಸ್ಥಾನಕ್ಕೆ (2022 ರಲ್ಲಿ) ರಾಜೀನಾಮೆ ನೀಡಿದ್ದೇನೆ ಮತ್ತು ಎಂಎಲ್‌ಸಿಯಾಗಿ (2026 ರಲ್ಲಿ) ಮುಂದುವರಿಯಲಿಲ್ಲ ಎಂದು ಅವರು ಹೇಳಿದರು.

ಶಿವಸೇನಾ (ಯುಬಿಟಿ) ಕಾರ್ಯಕರ್ತರು ಇತ್ತೀಚಿನ ಬೆಳವಣಿಗೆಗಳಿಂದ ನಿರುತ್ಸಾಹಗೊಂಡಿಲ್ಲ, ಬದಲಿಗೆ ತಮ್ಮ ಪಕ್ಷದ ಒಂಬತ್ತು ಲೋಕಸಭಾ ಸಂಸದರಲ್ಲಿ ಆರು ಮಂದಿಯ ದಂಗೆಯನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದು ಮಾಜಿ ಸಿಎಂ ಹೇಳಿದರು.

ಶಿವಸೇನಾ (ಯುಬಿಟಿ) ಕಾಂಗ್ರೆಸ್‌ನೊಂದಿಗೆ ವಿಲೀನಗೊಳ್ಳಬಹುದು ಎಂದು ಭಯಪಡುತ್ತಿದ್ದೇವೆ ಎಂಬ ಬಂಡಾಯ ಸಂಸದರ ಹೇಳಿಕೆಗೆ ಅವರು ವಾಗ್ದಾಳಿ ನಡೆಸಿದರು.

30 ವರ್ಷಗಳ ಕಾಲ ನಾವು ಬಿಜೆಪಿಯೊಂದಿಗೆ ವಿಲೀನಗೊಳ್ಳದಿದ್ದರೆ, ನಾವು ಕಾಂಗ್ರೆಸ್‌ನೊಂದಿಗೆ ಹೇಗೆ ವಿಲೀನಗೊಳ್ಳಬಹುದು. ಮಹಾರಾಷ್ಟ್ರ ಬಿಜೆಪಿ ಶಿಂದೆ ಸೇನೆಯೊಂದಿಗೆ ವಿಲೀನಗೊಳ್ಳಬಹುದು ಎಂದು ನಾನು ಭಯಪಡುತ್ತೇನೆ ಎಂದು ಅವರು ಟೀಕಿಸಿದರು.

ಶಿವಸೇನೆ (ಯುಬಿಟಿ) ನಾಯಕ ತನ್ನ ಕಾರ್ಯವೈಖರಿಯನ್ನು ಟೀಕಿಸುವ ಮತ್ತು ಕಾರ್ಯಕರ್ತರು ಮತ್ತು ಜನರೊಂದಿಗೆ ಸಂಪರ್ಕ ಕಡಿತಗೊಳಿಸಿರುವ ರಾಜಕೀಯ ವಿರೋಧಿಗಳನ್ನು ಟೀಕಿಸಿದರು.

ನಾನು ಪಕ್ಷದ ಕಾರ್ಯಕರ್ತರನ್ನು ಭೇಟಿ ಮಾಡಲು ಮತ್ತು ರಾಜ್ಯಾದ್ಯಂತ ಪ್ರಯಾಣಿಸಲು ಹೋಗದಿದ್ದರೆ ಅವರೆಲ್ಲರೂ ಚುನಾವಣೆಗಳನ್ನು ಹೇಗೆ ಗೆದ್ದರು ಎಂದು ಅವರು ಕೇಳಿದರು.

ಇಂದು ನನ್ನನ್ನು ಟೀಕಿಸಲಾಗುತ್ತಿದೆ. ನನ್ನ ಪತ್ನಿಯನ್ನು ಟೀಕಿಸಲಾಗುತ್ತಿದೆ. ಮಗ ತೇಜಸ್‌ನನ್ನು ಟೀಕಿಸಲಾಗುತ್ತಿದೆ.ಬಿಜೆಪಿ ನನಗೆ ದ್ರೋಹ ಮಾಡಿದ್ದರಿಂದ ನಾನು ಮುಖ್ಯಮಂತ್ರಿ ಹುದ್ದೆಯ ಜವಾಬ್ದಾರಿಯನ್ನು ಒಪ್ಪಿಕೊಂಡೆ. ನೀವು ಸಚಿವರಾಗಲು ಬಯಸಿದ್ದೀರಿ, ಸಂಸದರಾಗಲು ಬಯಸಿದ್ದೀರಿ, ನಿಮ್ಮ ಮಗ ಶಾಸಕರಾಗಲು ಬಯಸಿದ್ದೀರಿ. ಆದರೆ ತಾಯಿ ಏನನ್ನೂ ಮಾಡಲು ಬಯಸುವುದಿಲ್ಲ.ಇಷ್ಟೇ ತಾನೆ ಇರುವುದು? ಎಂದು ಠಾಕ್ರೆ ಕೇಳಿದರು.

'ದ್ರೋಹ ನಡೆದ ವಾರ್ಡ್‌ನ ಮತದಾರರಲ್ಲಿ ನಾನು ಕ್ಷಮೆಯಾಚಿಸುತ್ತೇನೆ.ಮೋದಿ ಅಲೆಯ ಸಮಯದಲ್ಲಿ ಅವರು ನನ್ನನ್ನು ನಂಬಿ ನಮ್ಮನ್ನು ಆಯ್ಕೆ ಮಾಡಿದ್ದಾರೆ ಎಂದು ನಮಗೆ ಆಘಾತವಾಯಿತು.ಮೋದಿಯ ಮುಖದ ಮೇಲೆ ಹೊಡೆದು ಸಂಸದರನ್ನು ಆಯ್ಕೆ ಮಾಡಲಾಗಿದೆ. ನಮ್ಮ 9 ಸಂಸದರನ್ನು ಮೋದಿಯ ಮುಖ ನೋಡದೆ ಆಯ್ಕೆ ಮಾಡಲಾಗಿದೆ. ಇಂದು, ಅವರು ಮತ್ತೆ ಹೋರಾಡುತ್ತಿದ್ದಾರೆ, ಅವರು ಏಕೆ ಹೋರಾಡುತ್ತಿದ್ದಾರೆ?.ಅವರು ಏನು ಪಡೆಯಲು ಬಯಸುತ್ತಾರೆ? ಅವರು ಎಷ್ಟು ಅಧಿಕಾರದ ದಾಹದಿಂದ ಇರಬಹುದು' ಎಂದು ಮಾಜಿ ಮುಖ್ಯಮಂತ್ರಿ ತಿಳಿಸಿದರು.

ನಾಳೆ ಶಿವಸೇನೆ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಭಾವಿಸೋಣ. ಆಗ ಅವರು ಏನು ಮಾಡುತ್ತಾರೆ?. ನೀವು ನನ್ನೊಂದಿಗೆ ಇರುತ್ತೀರಾ?. ನೀವು ಕಷ್ಟಪಟ್ಟು ಕೆಲಸ ಮಾಡಬೇಕು ಎಂದು ಅವರಿಗೆ ಹಣದ ಪೆಟ್ಟಿಗೆ ತೋರಿಸಿ ಹೇಳಲಾಗಿದೆ. ರೈತರಿಗೆ ಯಾವುದೇ ಖಾತರಿ ಬೆಲೆ ಇಲ್ಲ, ಆದರೆ ಸಂಸದರ ಖಾತರಿ ಬೆಲೆಯನ್ನು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಅವರು ಸಾಲ ಮನ್ನಾ ಘೋಷಣೆ ಮಾಡಿದ್ದಾರೆ, ಅದು ಮೋಸ. ರೈತರು ಸಾಯಲಿ ಎಂದು ಹೇಳುತ್ತಿರಬಹುದು, ಆದರೆ ಅವರಿಗೆ ಸಾಲ ಮನ್ನಾ ಬೇಡ. ಪ್ರೀತಿಯ ಸಹೋದರಿಯರಿಗೆ ಚುನಾವಣೆಗೆ ಮೊದಲು ಹಣ ನೀಡಲಾಯಿತು. ಈಗ ಅವರು 80 ಲಕ್ಷ ಸಹೋದರಿಯರ ಹಣವನ್ನು ಕಸಿದುಕೊಂಡಿದ್ದಾರೆ ಎಂದು ಠಾಕ್ರೆ ತಿಳಿಸಿದರು.

'ನಾನು ಹೇಗಿದ್ದೇನೆಂದು ನಿಮಗೆ ತಿಳಿದಿದೆ. ನನ್ನ ವ್ಯಕ್ತಿ ಬೆರಳು ತೋರಿಸಿದರೆ ಸಾಕು.ನಾನು ಒಂದು ಕ್ಷಣವೂ ಅಧಿಕಾರದಲ್ಲಿ ಉಳಿಯುವುದಿಲ್ಲ. ಹಾಗಾಗಿ ನಾನು ಮುಖ್ಯಮಂತ್ರಿ ಹುದ್ದೆಯನ್ನು ತೊರೆದಿದ್ದೇನೆ. ನಾನು ಏನನ್ನಾದರೂ ಬಯಸಿದರೆ, ನಾನು ವಿಧಾನಸಭೆಯಲ್ಲಿ ಕುಳಿತುಕೊಳ್ಳುತ್ತಿದ್ದೆ. 60 ವರ್ಷಗಳು ಕಳೆದಿವೆ. ನಾನು 12 ವರ್ಷಗಳಿಂದ ಮುನ್ನಡೆಸುತ್ತಿದ್ದೇನೆ. ನನ್ನ ವಿರುದ್ಧ ಮಾಡಲಾದ ಆರೋಪಗಳು ನಿಜವಾಗಿದ್ದರೆ, ನಾನು ಈಗಲೇ ಸ್ಥಾನ ತ್ಯಜಿಸಲು ಸಿದ್ಧನಿದ್ದೇನೆ' ಎಂದು ಠಾಕ್ರೆ ಹೇಳಿದರು.

ನಿಮ್ಮಲ್ಲಿ ಒಬ್ಬರು ಶಿವಸೈನಿಕರು ಬರಲಿ, ಅವರು ಪಕ್ಷದ ಮುಖ್ಯಸ್ಥರಾಗುತ್ತಾರೆ. ಈ ಸುವರ್ಣ ಶಿವಸೇನೆಯು ಕಳ್ಳ ಮತ್ತು ದರೋಡೆಕೋರರ ಕೈಗೆ ಬೀಳಲು ಬಿಡಬಾರದು. ಅಸಹಾಯಕರು ಮತ್ತು ದೇಶದ್ರೋಹಿಗಳು ಬೇಡ, ಒಬ್ಬ ಅಸಹಾಯಕ ದೇಶದ್ರೋಹಿ ಮತ್ತು ಕಲಬೆರಕೆ ವ್ಯಕ್ತಿ ನನ್ನ ಮೇಲೆ ಆರೋಪ ಮಾಡಿದರೆ, ನೀವು ಅವನಿಗೆ ಉತ್ತರಿಸಬೇಕು. ನಾನು ಹುದ್ದೆಯನ್ನು ಬಿಡಲು ಸಿದ್ಧನಿದ್ದೇನೆ. ನಾನು ಹಿಂಜರಿದಿಲ್ಲ, ನಾನು ನಿರುತ್ಸಾಹಗೊಂಡಿಲ್ಲ. ಅನೇಕ ಬಿಕ್ಕಟ್ಟುಗಳು ಬಂದಿವೆ, ಅನೇಕ ಬಿರುಗಾಳಿಗಳು ಬಂದಿವೆ, ನಾನು ಓಡಿಹೋಗುವವನಲ್ಲ. ನಾನು ಬೆಟ್ಟದಂತೆ ನಿಲ್ಲುತ್ತೇನೆ, ಜವಾಬ್ದಾರಿಯನ್ನು ಸ್ವೀಕರಿಸುತ್ತೇನೆ. ಆದರೆ ನೀವು ನನ್ನ ಮೇಲೆ ನಂಬಿಕೆ ಇಡುವವರೆಗೆ ಮಾತ್ರ ನಾನು ಅದನ್ನು ಮಾಡುತ್ತೇನೆ. ನಿಮಗೆ ಅನಿಸಿದ ಕ್ಷಣದಲ್ಲಿ ನಾನು ಹುದ್ದೆಯನ್ನು ಬಿಡದೆ ಉಳಿಯುವುದಿಲ್ಲ ಎಂದು ಅವರು ತಿಳಿಸಿದರು.

ತನ್ನ ಪಕ್ಷದ 9 ಸಂಸದರಲ್ಲಿ 6 ಮಂದಿಯನ್ನು ಏಕನಾಥ್ ಶಿಂದೆ ಸೆಳೆದುಕೊಂಡ ಬಳಿಕ ನಡೆದ ಪಕ್ಷದ ಮೊದಲ ಕಾರ್ಯಕ್ರಮದಲ್ಲಿ ಮಾತನಾಡಿದ ಠಾಕ್ರೆ, ದೇಶದ ರಾಜಕೀಯವನ್ನು ನಡೆಸುತ್ತಿರುವ ರೀತಿ ನೋಡಿದ ಬಳಿಕ ಪ್ರಜಾಪ್ರಭುತ್ವದ ಬಗ್ಗೆ ಜನರ ನಂಬಿಕೆ ಹಾರುತ್ತಿದೆ ಎಂದರು.

ಏಕನಾಥ್ ಶಿಂದೆಯ ಆಪರೇಷನ್ ಟೈಗರ್‌ನ್ನು ಉಲ್ಲೇಖಿಸಿದ ಠಾಕ್ರೆ, ಈಗ ಅವರ ದಿನಗಳು ಬಂದಿವೆ,ಇದು ಮುಂದುವರಿದರೆ ನಾವು ಆಪರೇಷನ್ ಕಮಲ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

'ಇದು ಪ್ರಜಾಪ್ರಭುತ್ವಕ್ಕೆ ಬೆದರಿಕೆ. ಇದು ಮುಂದುವರಿದರೆ, ದೇಶವು ಅರಾಜಕತೆಯತ್ತ ಸಾಗುತ್ತದೆ. ನಾನು ಭವಿಷ್ಯ ನುಡಿಯುತ್ತಿಲ್ಲ. ನಾನು ಜ್ಯೋತಿಷಿ ಅಲ್ಲ. ಅದು ಗೋಚರಿಸುತ್ತದೆ. ಯುವಕರನ್ನು ಜಿರಳೆಗಳೆಂದು ಕರೆಯುವ ದೇಶದ ಭವಿಷ್ಯ ಏನಾಗುತ್ತದೆ. ಅವರು ಏನು ಬೇಕಾದರೂ ಮಾಡುವ ಮೂಲಕ ಚುನಾವಣೆಗಳನ್ನು ಗೆಲ್ಲಲಾಗುತ್ತಿದೆ. ಇನ್ನೊಂದು ಕಡೆಯಿಂದ ಅರ್ಜಿ ನಮೂನೆಯನ್ನು ಭರ್ತಿ ಮಾಡಲು ಯಾರಿಗೂ ಅವಕಾಶ ನೀಡುತ್ತಿಲ್ಲ. ಇದಾದ ಬಳಿಕ ಅವರು ಎಲ್ಲಿಗೆ ಹೋಗಲಿದ್ದಾರೆ?. ಅವರು ದೇಶಕ್ಕಾಗಿ ಏನು ಮಾಡಲಿದ್ದಾರೆ. ದೇಶದಲ್ಲಿ ಒಂದೇ ಪಕ್ಷ ಇರುತ್ತದೆ ಎಂದು ನಡ್ಡಾ ಹೇಳಿದ್ದರು. ಅವರು ಈ ರೀತಿ ಹೋದರೆ ದೀರ್ಘಕಾಲ ಅಧಿಕಾರ ಇರುವುದಿಲ್ಲ.ಯುವಕರನ್ನು ಜಿರಳೆಗಳೆಂದು ಕರೆದರೆ, ಮಕ್ಕಳಿಗೆ ಬೆಂಕಿ ಹಚ್ಚಿದರೆ ಅವರ ಸರಕಾರ ಉಳಿಯುವುದಿಲ್ಲ ಎಂದು ಠಾಕ್ರೆ ತಿಳಿಸಿದರು.

# ಅಕ್ರಮ ಗ್ಯಾಸ್,ಡೀಸೆಲ್ ಕಳ್ಳತನ ವಿರುದ್ಧ ಕ್ರಮ: ಧುಳೆಯಲ್ಲಿ 1.56 ಕೋಟಿ ರೂ. ಮೌಲ್ಯದ ಸರಕು ವಶ

ಮುಂಬಯಿ,ಜೂ.1 - ಗುಜರಾತ್-ಧುಳೆ ಹೆದ್ದಾರಿಯಲ್ಲಿ ಅಕ್ರಮವಾಗಿ ಗ್ಯಾಸ್ ಮತ್ತು ಡೀಸೆಲ್ ಕದಿಯುತ್ತಿದ್ದ ಗ್ಯಾಂಗ್ ಮೇಲೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ರಕ್ಷಣಾ ಇಲಾಖೆಯ ರಾಜ್ಯ ಜಾಗೃತ ತಂಡವು ಎರಡು ದಿನಗಳ ಕಾಲ ನಿಗಾ ಇರಿಸಿ ದಾಳಿ ನಡೆಸಿತು. ಈ ಕಾರ್ಯಾಚರಣೆಯಲ್ಲಿ, ಭಾರತ್ ಪೆಟ್ರೋಲಿಯಂ ಕಂಪನಿಯ ಎಲ್‌ಪಿಜಿ ಗ್ಯಾಸ್ ಟ್ಯಾಂಕರ್, ಎಚ್‌ಪಿ ಕಂಪನಿಯ ಡೀಸೆಲ್ ಟ್ಯಾಂಕರ್, 140 ವಾಣಿಜ್ಯ ಗ್ಯಾಸ್ ಸಿಲಿಂಡರ್‌ಗಳು ಮತ್ತು ಇತರ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ, ಇವುಗಳ ಮೌಲ್ಯ ಸುಮಾರು 1 ಕೋಟಿ 55 ಲಕ್ಷ 95 ಸಾವಿರ 114 ರೂ.. ಈ ಪ್ರಕರಣದಲ್ಲಿ ಮೂವರು ಜನರನ್ನು ರೆಡ್ ಹ್ಯಾಂಡ್ ಆಗಿ ಬಂಧಿಸಲಾಗಿದೆ.

# ಲಕ್ಷಾಂತರ ಪ್ರಯಾಣಿಕರ ಪರದಾಟ

ಮೊದಲ ಪುಟದಿಂದ

7ನೇ ವೇತನ ಆಯೋಗದ ಶಿಫಾರಸು ಅನುಷ್ಠಾನಮಾಡಬೇಕು, ಸಾರಿಗೆ ಮತ್ತು ವಿದ್ಯುತ್ ಇಲಾಖೆಗಳಲ್ಲಿ ಗುತ್ತಿಗೆ ನೇಮಕಾತಿಯನ್ನು ರದ್ದು ಮಾಡಬೇಕು ಮತ್ತು ಬಾಡಿಗೆ ಬಸ್ಸು ಕಾರ್ಮಿಕರನ್ನು ಬೆಸ್ಟ್ ನೌಕರರೆಂದು ಖಾಯಂ ಮಾಡಬೇಕು ಎನ್ನುವುದು ಕಾರ್ಮಿಕರ ಬೇಡಿಕೆಯಾಗಿದೆ. ಕೈಗಾರಿಕಾ ನ್ಯಾಯಾಲಯವೊಂದು ಬೆಸ್ಟ್ ಕಾರ್ಮಿಕರ ಮುಷ್ಕರ ಕಾನೂನು ಬಾಹಿರ ಎಂದು ಆದೇಶ ನೀಡಿದ್ದರೂ ಕಾರ್ಮಿಕರು ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದ್ದಾರೆ. ಮಹಾರಾಷ್ಟ್ರ ಸರಕಾರವು ಮುಷ್ಕರ ನಿರತರ ವಿರುದ್ಧ ಮಹಾರಾಷ್ಟ್ರ ಅಗತ್ಯ ಸೇವೆಗಳ ನಿರ್ವಹಣಾ ಕಾಯ್ದೆ (ಮೆಸ್ಮಾ) ಜಾರಿ ಮಾಡುವುದಾಗಿ ಎಚ್ಚರಿಕೆ ನೀಡಿದೆ. ಬೆಸ್ಟ್ ಕಾರ್ಮಿಕ ನಾಯಕರ ಜತೆಗೆ ಮಾತುಕತೆ ಬಳಿಕ ಸುದ್ದಿಗಾರರ ಜತೆಗೆ ಮಾತನಾಡುತ್ತಿದ್ದ ಸಾರಿಗೆ ಸಚಿವ ಪ್ರತಾಪ್ ಸರ್‌ನಾಯ್ಕ್ ಅವರು, ಕಾರ್ಮಿಕರ ನಾಯಕರ ಜತೆಗಿನ ಮಾತುಕತೆ ಸಕಾರಾತ್ಮಕವಾಗಿದೆ ಮುಷ್ಕರವನ್ನು ಕಾರ್ಮಿಕರು ಶೀಘ್ರ ಕೊನೆಗೊಳಿಸಬಹುದು ಎಂಬ ವಿಶ್ವಾಸವಿದೆ ಎಂದು ಹೇಳಿದರು. ಕಾರ್ಮಿಕ ನಾಯಕರ ಜತೆಗಿನ ಮಾತುಕತೆಯಲ್ಲಿ ನಗರ ಸಾರಿಗೆ ಇಲಾಖೆ ಕಾರ್ಯದರ್ಶಿ ಅಸಿಮ್ ಗುಪ್ತಾ, ಬೆಸ್ಟ್ ಜನರಲ್ ಮೆನೇಜರ್ ಸೋನಿಯ ಸೇಥಿ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಮಿಕ ನಾಯಕರು ಇಟ್ಟಿರುವ ಬೇಡಿಕೆಯನ್ನು ಬಗೆಹರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಬೆಸ್ಟ್ ಮಹಾಪ್ರಬಂಧಕರಿಗೆ ತಾನು ನಿರ್ದೇಶನ ನೀಡಿದ್ದೇನೆ ಎಂದು ಸರ್ ನಾಯ್ಕ್ ತಿಳಿಸಿದರು. ಬೆಸ್ಟ್ ಮಹಾ ಪ್ರಬಂಧಕರಿಗೆ ಆ ಬಗ್ಗೆ ವರದಿ ನೀಡಲು ತಿಳಿಸಿದ್ದು, ವರದಿಯನ್ನು ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮತ್ತು ಇಬ್ಬರು ಉಪಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿ ಚರ್ಚಿಸಿ ಸಮಸ್ಯೆ ಬಗೆಹರಿಸುವ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಸಾರಿಗೆ ಸಚಿವರು ಹೇಳಿದರು.

ಬೆಸ್ಟ್ ಆಡಳಿತ ಮಟ್ಟದಲ್ಲಿ ಇರುವ ಬಾಕಿ ವಿಷಯಗಳನ್ನು ಬಗೆಹರಿಸಲು ಸೇಥಿ ಅವರಿಗೆ ತಿಳಿಸಿರುವುದಾಗಿ ಸರ್‌ನಾಯ್ಕ್ ಹೇಳಿದರು.

# ಚಿತ್ರ ಇನ್ನೂ ಬಾಕಿ ಇದೆ ; ಏಕನಾಥ್ ಶಿಂದೆ

ಮೊದಲ ಪುಟದಿಂದ

ಯಾರು ವೇದಿಕೆಯ ಮೇಲೆ ಬರುತ್ತಾರೆ, ಏನಾಗುತ್ತದೆ ಎಂದು ಎಲ್ಲರೂ ಕುತೂಹಲದಿಂದ ಇದ್ದಾರೆ. ಆದರೆ ಇಂದು ಈ ಹುಲಿ ನಿಮ್ಮ ಮುಂದೆ ನಿಂತಿದೆ ಎಂದು ಶಿಂದೆ ಹೇಳಿದರು.

ಮತ್ತಷ್ಟು ಹೇಳುವುದಾದರೆ, ಶಿವಸೇನೆ ಮರಾಠಿ ಜನರಿಗಾಗಿ ಹುಟ್ಟಿದೆ. ಹಿಂದುತ್ವದ ಘರ್ಜನೆ ಶಿವಸೇನೆ, ಮರಾಠಿಗರ ದೃಢಸಂಕಲ್ಪ ಶಿವಸೇನೆ, ದೇಶದ್ರೋಹಿಗಳ ಮೇಲಿನ ದಾಳಿ ಶಿವಸೇನೆ, ನನ್ನ ಪ್ರೀತಿಯ ಸಹೋದರಿಯರ ಸ್ವಾಭಿಮಾನ ಶಿವಸೇನೆ, ರೈತರ ರಕ್ಷಕ ಶಿವಸೇನೆ ಎಂದು ಅವರು ತಿಳಿಸಿದರು.

ಮಹಾರಾಷ್ಟ್ರ ವಿಧಾನ ಪರಿಷತ್ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಒಂದೇ ಒಂದು ಸ್ಥಾನವನ್ನೂ ಗೆಲ್ಲುವುದಿಲ್ಲ ಎಂದು ಶಿಂದೆ ಅವರು, ಪಕ್ಷದ ಸಂಸ್ಥಾಪನಾ ದಿನದ ರ್‍ಯಾಲಿಯಲ್ಲಿ ಹೇಳಿದರು.

'ಜನರು ತಮ್ಮನ್ನು ಏಕೆ ಕೈಬಿಡುತ್ತಿದ್ದಾರೆ ಎಂಬುದರ ಕುರಿತು ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಉದ್ಧವ್ ಠಾಕ್ರೆ ಅವರನ್ನು ಟೀಕಿಸಿ ಶಿಂದೆ ತಿಳಿಸಿದರು.

ಠಾಕ್ರೆಸೇನೆಯ 'ಆಪರೇಷನ್ ಟುಡ್ಡಾ' ಬಗ್ಗೆ ನೇರವಾಗಿ ಪ್ರತಿಕ್ರಿಯಿಸಿದ ಶಿಂದೆ, ಧೈರ್ಯವಿದ್ದರೆ ಮುಂದೆ ಬನ್ನಿ ಎಂದು ಠಾಕ್ರೆಸೇನೆ ಜೊತೆಗೆ ಸಂಜಯ್ ರಾವುತ್‌ಗೆ ನೇರವಾಗಿ ಸವಾಲು ಹಾಕಿದರು.

'ಕೆಲವರು ತೋಳಗಳ ಮೇಲೆ ಕಾರ್ಯನಿರ್ವಹಿಸುತ್ತಾರೆ ಎಂದು ಹೇಳಿದರು. ಆದರೆ ಅವರು ಕಂಪೌಂಡರ್, ಸರಿಯೇ?. ಕಂಪೌಂಡರ್ ಹೇಗೆ ಕಾರ್ಯನಿರ್ವಹಿಸಬಹುದು?. ಇಲ್ಲಿ, ಶ್ರೀಕಾಂತ್ ಶಿಂದೆ ನಿಜವಾದ ವೈದ್ಯ. ನಾನು ವೈದ್ಯನಲ್ಲದಿದ್ದರೂ ನಾನು ಇನ್ನೂ ಕಾರ್ಯನಿರ್ವಹಿಸುತ್ತೇನೆ. ಆದರೆ ಕಾರ್ಯಾಚರಣೆ ನಡೆಸಲು, ನಿಮಗೆ ಹುಲಿಯ ಹೃದಯ ಬೇಕು, ತೋಳದ ಹೃದಯವಲ್ಲ. ಹುಲಿಯ ಚರ್ಮ ಧರಿಸುವುದರಿಂದ ತೋಳ ಹುಲಿಯಾಗುವುದಿಲ್ಲ. ನಾಲ್ಕು ವರ್ಷಗಳ ಹಿಂದೆ, ಇದೇ ತೋಳಗಳು ನನಗೆ ಬೆದರಿಕೆ ಹಾಕಿದ್ದವು. ನಾನು ಮುಂಬಯಿಗೆ ಬರಬೇಕಾದರೆ ನಾನು ವರ್ಲಿ ಮೂಲಕ ಹೋಗಬೇಕಾಗುತ್ತದೆ ಎಂದರು. ಮುಂಬಯಿ ಯಾರ ಆಸ್ತಿ?. ಆಗ ಈ ಏಕನಾಥ್ ಶಿಂದೆ ಒಬ್ಬಂಟಿಯಾಗಿ ಬಂದರು. ಆ ಸಮಯದಲ್ಲಿ, ನಾನು ಹೆಲಿಕಾಪ್ಟರ್‌ನ್ನು ವಿಮಾನ ನಿಲ್ದಾಣದಿಂದ ಪಕ್ಕಕ್ಕೆ ಇರಿಸಿ ಕಾರಿನಲ್ಲಿ ಹೋದೆ. ನಾನು ಬೈರೋಡ್ ವರ್ಲಿ ಮೂಲಕ ಹೋದೆ. ನಾನು ವರ್ಲಿಗೆ ಹೋಗಿ ನಿಂತೆ'ಎಂದು ಶಿಂದೆ ಹೇಳಿದರು.

ನನಗೆ ಬೆದರಿಕೆ ಹಾಕಿದವರು ಆಗ ನನ್ನನ್ನು ಆನ್‌ಲೈನ್‌ನಲ್ಲಿ ನೋಡುತ್ತಿದ್ದರು. ಈಗ ಅವರು ನಾವು ಧ್ವಂಸ ಕಾರ್ಯಾಚರಣೆ ನಡೆಸಬೇಕು ಎಂದು ಹೇಳುತ್ತಾರೆ. ಧೈರ್ಯವಿದ್ದರೆ ಮುಂದೆ ಬರಲಿ.ನಮ್ಮ ಶಿವಸೈನಿಕರು ಇದ್ದಾರೆ ಎಂದು ಶಿಂದೆ ರಾವುತ್ ಮತ್ತು ಉದ್ಧವ್ ಠಾಕ್ರೆ ಅವರನ್ನು ಹೆಸರಿಸದೆ ಬಹಿರಂಗವಾಗಿ ಸವಾಲು ಹಾಕಿದರು.

ನಮ್ಮಲ್ಲಿ ಉಗ್ರ ಶಿವಸೈನಿಕರು ಇದ್ದಾರೆ. ನಮ್ಮ ಶಿವಸೈನಿಕರು ಬಾಳಾಸಾಹೇಬರ ಚಿಂತನೆಯವರು. ಅವರು ಬೆಳಿಗ್ಗೆ ಸಂಸದರನ್ನು ಗದರಿಸುತ್ತಿದ್ದರು. ಅವರು ಸಂಜೆ ಸಂಸದರನ್ನು ಹೊಗಳುತ್ತಿದ್ದರು. ಒಬ್ಬ ಜನರಲ್ ಮನೆಯಲ್ಲಿ ಕುಳಿತು ನಡೆಯಲು ಸಾಧ್ಯವಿಲ್ಲ. ಜನರಲ್ ಮುಂದೆ ಬಂದು ಹೋರಾಡಬೇಕು ಎಂದು ಠಾಕ್ರೆ ವಿರುದ್ಧ ಅವರು ನೇರ ಟೀಕಾದಾಳಿ ನಡೆಸಿದರು.

ನಾನು ಯಾವಾಗಲೂ ನನ್ನ ಕಾರ್ಯಕರ್ತರಿಗೆ ಹೇಳುವುದೇನೆಂದರೆ, ಈ ಏಕನಾಥ್ ಶಿಂದೆ ಯಾವಾಗಲೂ ಪೂರ್ಣ ಎದೆಯಿಂದ ಹೋರಾಡುತ್ತಾನೆ. ಈ ಏಕನಾಥ್ ಶಿಂದೆ ಒಬ್ಬ ಹೋರಾಟಗಾರ. ಪುರಸಭೆಗಳು, ಗ್ರಾಮ ಪಂಚಾಯತ್‌ಗಳು, ಜಿಲ್ಲಾ ಪರಿಷತ್‌ಗಳು ಅವರ ಕೈಗಳ ಮೂಲಕ ಹಾದು ಹೋಗಿವೆ. ಮುಂಬಯಿ ಚಿನ್ನದ ಮೊಟ್ಟೆಗಳನ್ನು ಇಡುವ ಹೆಬ್ಬಾತು ಎಂದು ಅವರು ಒತ್ತಿ ಹೇಳಿದರು. ಆದರೆ ಜನರು ಮಹಾಯುತಿಗೆ ಆದ್ಯತೆ ನೀಡಿದರು. ಮುಂಬಯಿನಲ್ಲಿ 100 ಪ್ರತಿಶತ ಕಾಂಕ್ರೀಟ್ ರಸ್ತೆಗಳು ಇರುತ್ತವೆ. ಮೆಟ್ರೋ ಮುಚ್ಚಲ್ಪಟ್ಟಿತು, ಆದರೆ ಬಳಿಕ ಮೆಟ್ರೋ ಕೆಲಸ ಆರಂಭವಾಯಿತು. ಸಮೃದ್ಧಿ ಮಹಾಮಾರ್ಗ್ ಆರಂಭವಾಯಿತು. ಕರಾವಳಿ ರಸ್ತೆ ಆರಂಭವಾಯಿತು. ಅದಕ್ಕಾಗಿಯೇ ಜನರು ಮಹಾಯುತಿಗೆ ವಿಜಯವನ್ನು ನೀಡಿದರು. ದಿಲ್ಲಿಯಲ್ಲೂ ಅದೇ ಆಗಿದೆ. ಅವರ ಇಂಡಿಯಾ ಬ್ಲಾಕ್ ಮೈತ್ರಿ ಕುಸಿದಿದೆ. ಎಷ್ಟೇ ಸೊನ್ನೆಗಳು ಸೇರಿದರೂ ಮೊತ್ತ ಶೂನ್ಯವಾಗುತ್ತದೆ ಎಂದು ಶಿಂದೆ ತಿಳಿಸಿದರು.

ತಮ್ಮ ಭಾಷಣದಲ್ಲಿ ಲಾಡ್ಕಿ ಬಹಿನ್ ಯೋಜನೆಯ ಬಗ್ಗೆ ಮಾತನಾಡಿದ ಶಿಂದೆ, ನನ್ನ ತಾಯಿ ಮತ್ತು ಸಹೋದರಿಯ ಮಿತವ್ಯಯವನ್ನು ನಾನು ನೋಡಿದ್ದೇನೆ. ಅದಕ್ಕಾಗಿಯೇ ನಾನು ಲಾಡ್ಕಿ ಬಹಿನ್ ಯೋಜನೆಯನ್ನು ಆರಂಭಿಸಿದೆ. ಆ ಯೋಜನೆಯಲ್ಲಿ ಅನೇಕ ಜನರು ಮೋಸ ಮಾಡಿದರು ಎಂದು ಹೇಳಿದರು.

ಶಿವಸೇನಾ ಪಕ್ಷ, ಶಿವಸೇನಾ ಪಕ್ಷದ ಪಾತ್ರ ಮತ್ತು ಪಕ್ಷದ ಭವಿಷ್ಯದ ಹಾದಿಯ ಬಗ್ಗೆ ಕೂಡ ಪ್ರತಿಕ್ರಿಯಿಸಿದ ಅವರು, ನನ್ನ ಪಕ್ಷದಲ್ಲಿ ಅಧೀನತೆ ಕೆಲಸ ಮಾಡುವುದಿಲ್ಲ.ಕಾರ್ಯಕರ್ತರು ಮುಂದೆ ಬರಬೇಕು ಎಂದರು.

ನಮ್ಮ ಮಹಾಮೈತ್ರಿ ಭವಿಷ್ಯದಲ್ಲಿ ಹೀಗೆಯೇ ಮುಂದುವರಿಯುತ್ತದೆ. ದೇವೇಂದ್ರ ಫಡ್ನವೀಸ್ ಮತ್ತು ನನ್ನ ನಡುವೆ ವಿವಾದ ಸೃಷ್ಟಿಸಲು ಪ್ರಯತ್ನ ನಡೆಯುತ್ತಿದೆ. ಆದರೆ ಅವರ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ. ಏಕೆಂದರೆ ನಮ್ಮ ಕಾರ್ಯಸೂಚಿ ಕುರ್ಚಿಯಲ್ಲ. ಜನರ ಜೀವನವನ್ನು ಬದಲಾಯಿಸುವುದು ನಮ್ಮ ಕಾರ್ಯಸೂಚಿ. ಮಹಾರಾಷ್ಟ್ರದಲ್ಲಿ ಮಹಾಮೈತ್ರಿಕೂಟ ವೇಗವಾಗಿ ಮುಂದುವರಿಯಲಿದೆ. ಎರಡೂವರೆ ವರ್ಷಗಳಲ್ಲಿ, ಎಲ್ಲದರ ಮೇಲಿನ ನಿಷೇಧವನ್ನು ತೆಗೆದುಹಾಕಲಾಗಿದೆ. ಅಭಿವೃದ್ಧಿ ರೈಲು ಗುಂಡಿನ ವೇಗದಲ್ಲಿ ಓಡುತ್ತಿದೆ. ನಾನು ಎರಡೂವರೆ ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಈಗ ಫಡ್ನವೀಸ್ ಮುಖ್ಯಮಂತ್ರಿಯಾಗಿ ಕೆಲಸ ಮಾಡುತ್ತಿದ್ದಾರೆ. ರೈತರು, ಶ್ರಮಜೀವಿಗಳು, ಪ್ರೀತಿಯ ಸಹೋದರಿಯರು ಮತ್ತು ಯೋಧರು ಸಂತೋಷವಾಗಿರಬೇಕು ಎಂದು ಶಿಂದೆ ತಿಳಿಸಿದರು.

ಲಾಡ್ಕಿ ಬಹಿನ್ ಯೋಜನೆಯನ್ನು ಮುಚ್ಚಲಾಗುವುದಿಲ್ಲ. ಶಿವಾಜಿ ಮಹಾರಾಜರ ಆದರ್ಶವನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಕೆಲಸ ಮಾಡುತ್ತೇವೆ. ನನಗೆ ಸೇವಕ ಅಗತ್ಯವಿಲ್ಲ ಎಂದು ಅವರು ಹೇಳಿದರು.

ಅನೇಕ ಜನರು ರಾಜ್ಯಸಭಾ ಚುನಾವಣೆಗೆ ಸಾಲಿನಲ್ಲಿ ನಿಂತಿದ್ದರು. ಆದರೆ ನಮ್ಮ ಶಿವಸೇನೆ ಭೀಮನ ಮಗಳು ಜ್ಯೋತಿತಾಯಿ ವಾಘ್ಮಾರೆಗೆ ರಾಜ್ಯಸಭಾ ಟಿಕೆಟ್ ನೀಡಿತು. ಈ ಮೂಲಕ ನಾವು ಶಿವಸೇನೆಯ ಪಾತ್ರವನ್ನು ರಾಜ್ಯಕ್ಕೆ ತೋರಿಸಿದ್ದೇವೆ. ಮೊದಲು, ಸಂಪತ್ತಿನ ಆಧಾರದ ಮೇಲೆ ಟಿಕೆಟ್ ನೀಡಲಾಗುತ್ತಿತ್ತು. ವೇದಿಕೆಯಲ್ಲಿದ್ದ ಅನೇಕ ಜನರು ತಮ್ಮ ಮಕ್ಕಳಿಗೆ ಟಿಕೆಟ್ ನೀಡುವಂತೆ ನನ್ನನ್ನು ಕೇಳಿದರು. ಆದರೆ ನಾನು ಅವರಿಗೆ ನಾವು ಕಾರ್ಯಕರ್ತರಿಗೆ ಅವಕಾಶಗಳನ್ನು ನೀಡಬೇಕು ಎಂದು ಹೇಳಿದೆ. ಅವರನ್ನೂ ಬೆಳೆಸಬೇಕು. ಬಳಿಕ ಅವರೆಲ್ಲರೂ ನೀವೇ ನಿರ್ಧಾರ ತೆಗೆದುಕೊಳ್ಳಬೇಕು, ನಾವು ನಿಮ್ಮೊಂದಿಗಿದ್ದೇವೆ ಎಂದರು.ಅಂತಹ ಸಹೋದ್ಯೋಗಿಗಳು ನನ್ನೊಂದಿಗಿದ್ದಾರೆ. ಅಂತಹ ಸಹೋದ್ಯೋಗಿಗಳನ್ನು ಹೊಂದಲು ಅದೃಷ್ಟ ಬೇಕು ಎಂದು ಶಿಂದೆ ತಿಳಿಸಿದರು.

# ಇದುವರೆಗೆ 70 ಲಕ್ಷ ಉದ್ಯೋಗ ಸೃಷ್ಟಿ; ಪ್ರಧಾನಿ ಮೋದಿ

ಮೊದಲ ಪುಟದಿಂದ

ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಂಸ್ಥೆಗಳು ಅಥವಾ ಉದ್ಯೋಗದಾತರನ್ನು ಸರಕಾರ ಪ್ರೋತ್ಸಾಹಿಸುತ್ತದೆ ಎಂದ ಮೋದಿ, ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯು ಮೊದಲ ಬಾರಿಗೆ ಉದ್ಯೋಗಾಕಾಂಕ್ಷಿಗಳಿಗೆ ಯುವಕರು ಮತ್ತು ಉದ್ಯಮದ ನಡುವೆ ಸೇತುವೆಯನ್ನು ರೂಪಿಸುತ್ತದೆ ಎಂದು ಹೇಳಿದರು.

'ಪ್ರಧಾನಮಂತ್ರಿ ವಿಕಸಿತ್ ಭಾರತ್ ರೋಜ್‌ಗಾರ್ ಯೋಜನೆಯ ಮೂಲಕ, ನಾವು ಉದ್ಯೋಗ ಸೃಷ್ಟಿಯನ್ನು ಬೆಂಬಲಿಸುತ್ತಿದ್ದೇವೆ, ಯುವಕರನ್ನು ಸಬಲೀಕರಣಗೊಳಿಸುತ್ತಿದ್ದೇವೆ ಮತ್ತು ಭವಿಷ್ಯಕ್ಕಾಗಿ ಬಲವಾದ ಕಾರ್ಯಪಡೆಯನ್ನು ನಿರ್ಮಿಸುತ್ತಿದ್ದೇವೆ.ಈ ಯೋಜನೆಯು ಮೊದಲ ಬಾರಿಗೆ ಉದ್ಯೋಗಿಗಳನ್ನು ಸಬಲೀಕರಣಗೊಳಿಸುವುದು ಮತ್ತು ಯುವಕರು ಹಾಗೂ ಉದ್ಯಮದ ನಡುವೆ ಸೇತುವೆಯನ್ನು ನಿರ್ಮಿಸುವ ಬಗ್ಗೆ ಎಂದು ಅವರು ತಿಳಿಸಿದರು.

ನಮ್ಮ ಯುವಕರ ಆಕಾಂಕ್ಷೆಗಳು, ಕೌಶಲ್ಯಗಳು ಮತ್ತು ಸಾಮರ್ಥ್ಯವು ವಿಕಸಿತ್ ಭಾರತಕ್ಕೆ ಹಾದಿಯನ್ನು ರೂಪಿಸುತ್ತದೆ ಎಂದು ಅವರು ಹೇಳಿದರು. ಮುಂದಿನ ವರ್ಷಗಳಲ್ಲಿ ಜಾಗತಿಕ ಬೆಳವಣಿಗೆ, ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಮುನ್ನಡೆಸುವಲ್ಲಿ ಭಾರತದ ಯುವಕರು ಮುಂಚೂಣಿಯಲ್ಲಿರುತ್ತಾರೆ ಎಂದು ಮೋದಿ ವಿವರಿಸಿದರು. 21ನೇ ಶತಮಾನದಲ್ಲಿ ಕೌಶಲ್ಯಪೂರ್ಣ ಪ್ರತಿಭೆಯನ್ನು ಪೋಷಿಸುವ, ನಾವೀನ್ಯತೆಯನ್ನು ಬೆಳೆಸುವ ಮತ್ತು ಗುಣಮಟ್ಟದ ಅತ್ಯುನ್ನತ ಗುಣಮಟ್ಟವನ್ನು ಎತ್ತಿಹಿಡಿಯುವ ರಾಷ್ಟ್ರಗಳಿಗೆ ಅವಕಾಶಗಳು ಸೇರಿರುತ್ತವೆ. ಈ ಮೂರು ಕ್ಷೇತ್ರಗಳಲ್ಲಿ ಭಾರತವು ಅಭೂತಪೂರ್ವ ಸಾಮರ್ಥ್ಯವನ್ನು ಹೊಂದಿದೆ ಎಂದು ಅವರು ಹೇಳಿದರು.

ಪಿಎಂ- ವಿಬಿಆರ್‌ವೈ ಅಡಿಯಲ್ಲಿ ಸರಕಾರವು 99,446 ಕೋಟಿ ರೂ.ಗಳನ್ನು ಒದಗಿಸಿದೆ ಮತ್ತು ಎರಡು ವರ್ಷಗಳಲ್ಲಿ 3.5 ಕೋಟಿ ಉದ್ಯೋಗ ಸೃಷ್ಟಿಯ ಗುರಿಯನ್ನು ಹೊಂದಿದೆ.

ಈ ಯೋಜನೆಯಡಿಯಲ್ಲಿ ಮೊದಲ ಬಾರಿಗೆ ಉದ್ಯೋಗಿಗಳಿಗೆ 15,000 ರೂ.ಗಳವರೆಗೆ ನೀಡಲಾಗುತ್ತದೆ.ಈ ಯೋಜನೆಯಡಿಯಲ್ಲಿ ಉದ್ಯೋಗದಾತರು ಪ್ರತಿ ಹೊಸ ಉದ್ಯೋಗಿಗೆ ತಿಂಗಳಿಗೆ 3,000 ರೂ.ಗಳವರೆಗೆ ಪಡೆಯುತ್ತಾರೆ.

ತಯಾರಿಕಾ ವಲಯದಲ್ಲಿ ಉದ್ಯೋಗವನ್ನು ಹೆಚ್ಚಿಸಲು ಈ ಯೋಜನೆಯಡಿಯಲ್ಲಿ 4 ವರ್ಷಗಳವರೆಗೆ ವಿಸ್ತೃತ ಪ್ರಯೋಜನಗಳನ್ನು ಒದಗಿಸಲಾಗುತ್ತಿದೆ.

# ಅಮೆರಿಕ - ಇರಾನ್ ಮಾತುಕತೆ ಸ್ಥಗಿತ

ಮೊದಲ ಪುಟದಿಂದ

ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಹೆಜ್ಬೊಲ್ಲಾ ನಡುವಿನ ಸಂಘರ್ಷವು ಇರಾನ್ ಒಪ್ಪಂದದ ಅತ್ಯಂತ ಅನಿಶ್ಚಿತ ಭಾಗವಾಗಿದೆ. ಇಸ್ರೇಲ್ ಅಥವಾ ಉಗ್ರಗಾಮಿ ಗುಂಪು ಒಪ್ಪಂದಕ್ಕೆ ಸಹಿ ಹಾಕಿಲ್ಲ.ಆದರೆ ಅದು ಅವರ ಹೋರಾಟವನ್ನು ಕೊನೆಗೊಳಿಸಲಿದೆ ಎಂದು ಭಾವಿಸಲಾಗಿದೆ.ಇರಾನ್ ಲೆಬನಾನ್ ಮತ್ತು ಅದರ ಪ್ರಮುಖ ಪ್ರಾದೇಶಿಕ ಮಿತ್ರ ರಾಷ್ಟ್ರದಲ್ಲಿನ ತನ್ನ ಹಿತಾಸಕ್ತಿಗಳಿಗಾಗಿ ಈ ಪ್ರದೇಶದಲ್ಲಿ ಹೊಸ ಯುದ್ಧವನ್ನು ಅಪಾಯಕ್ಕೆ ಸಿಲುಕಿಸುವ ಇಚ್ಛೆಯನ್ನು ಸೂಚಿಸಿದೆ.

ಫೆ.28 ರಂದು ಇಸ್ರೇಲ್ ಮತ್ತು ಅಮೆರಿಕ ಯುದ್ಧಕ್ಕೆ ಕಾರಣವಾದ ಪ್ರಮುಖ ವಿಷಯವಾದ ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ಹೇಗೆ ನಿರ್ಬಂಧಿಸುವುದು ಎಂಬುದನ್ನು ಪರಿಹರಿಸಲು ಆರಂಭಿಸಬೇಕಿದ್ದ ಸಭೆಗಳನ್ನು ಮರು ನಿಗದಿಪಡಿಸಲು ಮಧ್ಯವರ್ತಿಗಳು ಈಗ ಪರದಾಡುತ್ತಿದ್ದಾರೆ.

ಮಾತುಕತೆಗಳು ಸಂಘರ್ಷಕ್ಕೆ ಶಾಶ್ವತ ಅಂತ್ಯವನ್ನು ತರಲಿವೆ ಎಂದು ಭಾವಿಸಲಾಗಿದೆ. ಇರಾನಿನ ದಾಳಿಗಳು ಮತ್ತು ಬೆದರಿಕೆಗಳು ಜಲಮಾರ್ಗದ ಮೂಲಕ ತೈಲ ಮತ್ತು ನೈಸರ್ಗಿಕ ಅನಿಲದ ಹರಿವನ್ನು ನಿಲ್ಲಿಸಿದ ಮೇಲೆ ಮಧ್ಯಂತರ ಒಪ್ಪಂದವು ಈಗಾಗಲೇ ಹಾರ್ಮುಜ್ ಜಲಸಂಧಿಯನ್ನು ಅಂತಾರಾಷ್ಟ್ರೀಯ ಹಡಗು ಸಾಗಣೆಗೆ ಮತ್ತೆ ತೆರೆದಿದೆ.



*Printed & Published by Mr. Pravin Murlidhar Shingote on behalf of Shree Ambika Printers & Publications and Printed at Shree Ambika Printers & Publications, Plot No. D-222/1/B, T T C Industrial Area, MIDC, Shiravane, Opp. D. Y. Patil Stadium, Near Mumbai-Pune Highway, Nerul (E), Navi Mumbai, Thane-400706. Published from 215, 2nd Flr, Narayan Udyog Bhavan, Industrial Estate, Lalbaug, Mumbai - 400012. Tel. : 24715208 To 2 471 5224. Founder : Late Murlidhar Ananta Shingote. Editor : Chandrashekhar Palethady (*Responsible for selection of News under the PRB Act) Regd.No.MH/by South 296 RNI No.: 56957/92 E-mail : shrirammalla@gmail.com*

# ಕರ್ನಾಟಕ ಮಲ್ಲ

## ಸಂಪಾದಕರ ಮಾತು...

ಶನಿವಾರ 20, ಜೂನ್ 2026

## ಅಮೆರಿಕ-ಇರಾನ್ ಶಾಂತಿ ಒಪ್ಪಂದ ಅನುಷ್ಠಾನವಾಗಲಿ

ಕಳೆದ ನಾಲ್ಕು ತಿಂಗಳುಗಳಿಂದ ಜಗತ್ತನ್ನು ತತ್ತರಿಸುವಂತೆ ಮಾಡಿದ್ದ ಅಮೆರಿಕ-ಇರಾನ್ ನಡುವಿನ ಯುದ್ಧಕ್ಕೆ ಕೊನೆ ಹಾಡುವ ನಿಟ್ಟಿನಲ್ಲಿ ಮಹತ್ತರ ಒಪ್ಪಂದಕ್ಕೆ ಜೂನ್ 17ರಂದು ಬುಧವಾರ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಹಸ್ತಾಕ್ಷರ ಹಾಕಿದ್ದಾರೆ. ಜತೆಗೆ ಒಪ್ಪಂದದ ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಸಾಕ್ಷಿಯಾಗಿ ಸಹಿ ಹಾಕಿದ್ದಾರೆ. ಟ್ರಂಪ್ ಅವರು ಪ್ಯಾರಿಸ್ ಅಧ್ಯಕ್ಷರ ನಿವಾಸದಲ್ಲಿ ಬುಧವಾರ ರಾತ್ರಿ ನಡೆದ ಔತಣ ಕೂಟದಲ್ಲಿ ಫ್ರಾನ್ಸ್ ಅಧ್ಯಕ್ಷ ಇಮಾನ್ಯುವಲ್ ಮ್ಯಾಕ್ರೋನ್ ಅವರ ಸಮ್ಮುಖದಲ್ಲಿ ಅಮೆರಿಕ-ಇರಾನ್ ಶಾಂತಿ ಒಪ್ಪಂದಕ್ಕೆ ದಪ್ಪ ಕಪ್ಪು ಶಾಯಿಯಿಂದ ಹಸ್ತಾಕ್ಷರ ಮಾಡಿದ್ದಾರೆ. ಅದೇ ವೇಳೆ ಇರಾನ್ ಅಧ್ಯಕ್ಷ ಪೆಜೆಶ್ಕಿಯಾನ್ ವಿದ್ಯುನ್ಮಾನ ಮೂಲಕ ಸಹಿ ಹಾಕಿದ್ದಾರೆ. ಒಪ್ಪಂದ 14 ಅಂಶಗಳನ್ನು ಹೊಂದಿದ್ದು ಮುಂದಿನ 60 ದಿನಗಳಲ್ಲಿ ಒಪ್ಪಿದಂತೆ ನಡೆಯಬೇಕಾದ ಒಪ್ಪಂದ ಅನುಷ್ಠಾನ ಪ್ರಕ್ರಿಯೆಗಳನ್ನು ಪೂರ್ಣ ಮಾಡಬೇಕು. ಒಂದು ರೀತಿಯಲ್ಲಿ ಇದು ತಾತ್ಕಾಲಿಕ ಶಾಂತಿ ಒಪ್ಪಂದವಾಗಿದ್ದು ಒಪ್ಪಂದದ ಅಂಶಗಳು ಅನುಷ್ಠಾನ ಆಗುವುದಕ್ಕೆ 60 ದಿನಗಳ ಪ್ರಕ್ರಿಯೆ ನಡೆಯುತ್ತದೆ ಎನ್ನುವುದು ಒಪ್ಪಂದದ ಪ್ರಮುಖ ವಿಷಯ ಆಗಿದೆ.

2026ರ ಫೆಬ್ರವರಿ 28ರಂದು ಅಮೆರಿಕ ಮತ್ತು ಇಸ್ರೇಲ್ ಮಿಲಿಟರಿ ಕ್ಷಿಪಣಿ ದಾಳಿ ನಡೆಸಿ ಇರಾನ್ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲ್ ಖಮೇನಿ ಮತ್ತು ಅವರ ಕುಟುಂಬದ ಹಲವು ಸದಸ್ಯರನ್ನು ಹತ್ಯೆ ಮಾಡುವ ಮೂಲಕ ಆರಂಭ ಆದ ಅಮೆರಿಕ ಮತ್ತು ಇರಾನ್ ಸಂಘರ್ಷ ಇಡೀ ಕೊಲ್ಲಿ ರಾಷ್ಟ್ರಗಳನ್ನು ವ್ಯಾಪಿಸಿದೆ. ಗಲ್ಫ್ ರಾಷ್ಟ್ರಗಳಲ್ಲಿ ಅಮೆರಿಕ ಅದರ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿದ್ದು ಬೇಕಾದಷ್ಟು ಶಸ್ತ್ರಾಸ್ತ್ರ ಮತ್ತು ಮಿಲಿಟರಿಯನ್ನು ನೆಲೆಗೊಳಿಸಿದೆ. ಅಮೆರಿಕ ಮತ್ತು ಇಸ್ರೇಲ್ ನಡೆಸಿದ ದಾಳಿಗೆ ಪ್ರತ್ಯುತ್ತರ ನೀಡುತ್ತಾ ಬಂದಿರುವ ಇರಾನ್ ಮಿಲಿಟರಿ ಕೊಲ್ಲಿ ರಾಷ್ಟ್ರಗಳಲ್ಲಿ ಇರುವ ಅಮೆರಿಕದ ಮಿಲಿಟರಿ ನೆಲೆಗಳನ್ನು ಗುರಿಯಾಗಿಟ್ಟು ದಾಳಿ ನಡೆಸಿದೆ. ಈ ಯುದ್ಧದಲ್ಲಿ ಆಗಿರುವ ಹಾನಿ ಅಪಾರ. ಇರಾನ್ ಮಾತ್ರವಲ್ಲದೆ ಅಮೆರಿಕದ ಮಿಲಿಟರಿ ಅಧಿಕಾರಿಗಳು ಮತ್ತು ಸೈನಿಕರ ಜತೆಗೆ ನಾಗರಿಕರೂ ಸಾವು ನೋವಿಗೆ ತುತ್ತಾಗಿದ್ದಾರೆ. ಅಮೆರಿಕದ ದಾಳಿಯಿಂದಾಗಿ ಆರಂಭವಾದ ಗಲ್ಫ್ ಯುದ್ಧಕ್ಕೆ ಕೊಲ್ಲಿ ರಾಷ್ಟ್ರಗಳಲ್ಲಿ ಜೀವನ ನಿರ್ವಹಣೆಗೆ ದುಡಿಯುತ್ತಿರುವ ಹಲವು ಭಾರತೀಯರ ಬಲಿಯೂ ಆಗಿದೆ. ಅಮೇರಿಕ ಅದರ ಪ್ರಮುಖ ಯುದ್ಧ ವಿಮಾನಗಳು, ಕ್ಷಿಪಣಿಗಳು, ಶಸ್ತ್ರಾಸ್ತ್ರಗಳನ್ನು ಕಳೆದುಕೊಂಡಿದೆ. ಇರಾನ್ ಕೂಡಾ ಅದರ ಸಮರ ವಿಮಾನಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಭಾರೀ ಪ್ರಮಾಣದಲ್ಲಿ ಕಳೆದುಕೊಂಡಿದೆ. ಅಮಾಯಕ ಕೊಲ್ಲಿ ದೇಶಗಳು ಅಮೆರಿಕದ ಅನಗತ್ಯ ಯುದ್ಧ ಹೇರಿಕೆಗೆ ಬಲಿ ಪಶುಗಳಾಗಿವೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಫೆಬ್ರವರಿ 28ರಂದು ದಾಳಿ ನಡೆಸುವಾಗ ಎರಡೇ ದಿನದಲ್ಲಿ ಇರಾನನ್ನು ಶರಣಾಗತ ಮಾಡುವ ವಿಶ್ವಾಸ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರಿಬ್ಬರಿಗೂ ಇತ್ತು. ಇರಾನ್ ಸರ್ವೋಚ್ಚ ನಾಯಕ ಖಮೇನಿ ಹತನಾದರೆ ಇರಾನ್ ಕತೆ ಮುಗಿಯುತ್ತದೆ ಎನ್ನುವ ಲೆಕ್ಕಾಚಾರವನ್ನು ಟ್ರಂಪ್ ಮತ್ತು ನೆತನ್ಯಾಹು ಹಾಕಿಕೊಂಡಿದ್ದರು. ಇರಾನ್ ಕಚ್ಚಾ ತೈಲ ಸಂಪತ್ತು ಅಮೆರಿಕದ ವಶ ಆಗಲಿದೆ ಎಂದು ಟ್ರಂಪ್ ಕನಸು ಕಂಡಿದ್ದರೆ ಇರಾನ್ ನೆಲ ಇಸ್ರೇಲ್ ವಶ ಆಗಲಿದೆ ಎಂದು ನೆತನ್ಯಾಹು ನಿರೀಕ್ಷೆ ಮಾಡಿದ್ದರು. ಆದರೆ ಅವರಿಬ್ಬರ ಕನಸಿಗೆ ಇರಾನ್ ಮಿಲಿಟರಿ ತಣ್ಣೀರು ಎರಚಿದೆ. ಇರಾನ್ ಸಾಮರ್ಥ್ಯವನ್ನು ಟ್ರಂಪ್ ಮತ್ತು ನೆತನ್ಯಾಹು ಹಗುರವಾಗಿ ಪರಿಗಣಿಸಿದ್ದರು ಎನ್ನುವುದು ಬಯಲಾಗಿದೆ. ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ಮಿಲಿಟರಿ ದಾಳಿ ನಡೆಸಿದ ತಕ್ಷಣವೇ ಇರಾನ್ ಅದರ ನಿಯಂತ್ರಣದಲ್ಲಿ ಇರುವ ಹಾರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆ ಹಡಗುಗಳ ಸಂಚಾರಕ್ಕೆ ನಿರ್ಬಂಧ ಹಾಕಿ ಜಲ ಮಾರ್ಗವನ್ನು ಮಿಲಿಟರಿ ನಿಯುಕ್ತಿ ಮಾಡಿ ಮುಚ್ಚಿ ಬಿಟ್ಟಿತು.

ಪರಿಣಾಮವಾಗಿ ಹಾರ್ಮುಜ್ ಜಲ ಸಂಧಿಯ ಮೂಲಕ ಜಗತ್ತಿನ ಪ್ರಮುಖ ದೇಶಗಳಿಗೆ ಕಚ್ಚಾ ತೈಲ ಮತ್ತು ಅನಿಲ ಸಾಗಾಟ ನಡೆಸುತ್ತಿದ್ದ ಹಡಗುಗಳು ಸಮುದ್ರ ಮಧ್ಯೆಯೇ ಲಂಗರು ಹಾಕಿದವು. ಭಾರತಕ್ಕೆ ತೈಲ ಹೊತ್ತು ಬರುತ್ತಿದ್ದ ಕನಿಷ್ಠ 21 ಹಡಗುಗಳು ಮತ್ತು ಅವುಗಳ ಸಿಬ್ಬಂದಿ ಸಮುದ್ರ ಮಧ್ಯೆ ಸಿಕ್ಕಿಹಾಕಿಕೊಂಡಿದ್ದು ವಾಸ್ತವ. ಹಾರ್ಮುಜ್ ಜಲಸಂಧಿಯನ್ನು ಇರಾನ್ ಮುಚ್ಚಿದ ಪರಿಣಾಮವಾಗಿ ಭಾರತ ಸಹಿತ ಜಗತ್ತಿನ ಪ್ರಮುಖ ದೇಶಗಳಿಗೆ ತೈಲ ಮತ್ತು ಅನಿಲ ಕೊರತೆಯ ಬಿಸಿ ಮುಟ್ಟಿ ಕಚ್ಚಾ ತೈಲ ಸಾಗಾಟ ವ್ಯತ್ಯಯದ ಕಾರಣದಿಂದ ಬೆಲೆ ಏರಿಕೆಯ ಪರಿಣಾಮವಾಗಿ ಪೆಟ್ರೋಲ್, ಡೀಸೆಲ್, ಎಲ್‌ಪಿಜಿ, ಸಿಎನ್‌ಜಿ, ಪಿಎನ್‌ಜಿ ದುಬಾರಿ ಆಯಿತು.

ಅಮೇರಿಕ ಮತ್ತು ಇಸ್ರೇಲ್ ಮಿಲಿಟರಿ ಇರಾನ್ ಮೇಲೆ ದಾಳಿ ಮಾಡಿದ ಕಾರಣದಿಂದಾಗಿ ಇರಾನಿಗೆ ಆಗಿರುವ ಹಾನಿಗಿಂತ ಹೆಚ್ಚಿನ ನಷ್ಟ ಅಮೆರಿಕಕ್ಕೆ ಆಗಿದೆ. ಆದರೆ ದೊಡ್ಡ ದೊಡ್ಡ ಶಸ್ತ್ರಾಸ್ತ್ರಗಳು ಇರಾನಿನ ಸಾಮಾನ್ಯ ಡ್ರೋನ್ ಮುಂದೆ ಕೈ ಸೋತ ಅನುಭವ ಟ್ರಂಪ್ ಅವರಿಗೆ ಆಗಿದೆ. ಎಲ್ಲವನ್ನೂ ಅರಿತುಕೊಂಡೇ ಟ್ರಂಪ್ ಯುದ್ಧ ವಿರಾಮಕ್ಕೆ ಮಾತೆತ್ತಿ ತಾತ್ಕಾಲಿಕ ಸಮರ ವಿರಾಮ ನಿರ್ಧಾರ ಈ ಹಿಂದೆಯೇ ಆಗಿದ್ದು ಅದರ ಮುಂದಿನ ಹಂತದ ಪ್ರಕ್ರಿಯೆ ಶಾಂತಿ ತಿಳುವಳಿಕೆ ಒಪ್ಪಂದಕ್ಕೆ ಅಂಕಿತ. ಇದು ಶಾಂತಿ ಪ್ರಿಯ ಜನರು ಸ್ವಾಗತಿಸುವ ಸಹಜವಾದ ಬೆಳವಣಿಗೆಯಾಗಿದೆ. ಅಮೆರಿಕದ ವಸಾಹತುಶಾಹಿ ನೀತಿಯನ್ನು ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆ ಆದ ಡೊನಾಲ್ಡ್ ಟ್ರಂಪ್ ತೀವ್ರಗೊಳಿಸಿದ ಪರಿಣಾಮದಿಂದಾಗಿ ಜಗತ್ತಿನಲ್ಲಿ ಸಾಕಷ್ಟು ಅನಾಹುತ ಆಗಿದೆ. ಅದರಲ್ಲಿ ಒಂದು ಇರಾನ್ ಮೇಲಿನ ದಾಳಿ. ಅದು ಅಮೆರಿಕ ಮತ್ತು ಇರಾನಿಗೆ ಮಾತ್ರ ಸೀಮಿತ ಆಗಿದ್ದರೆ ಯಾವುದೇ ಪ್ರಶ್ನೆ ಇರುತ್ತಿರಲಿಲ್ಲ. ಆದರೆ ಜಗತ್ತಿಗೆ ಬೇಕಾದ ಕಚ್ಚಾ ತೈಲದ ಶೇಕಡಾ 35ರಷ್ಟು ಪ್ರಮಾಣದ ಇಂಧನದ ಮೂಲ ಆಗಿರುವ ಕೊಲ್ಲಿ ರಾಷ್ಟ್ರಗಳ ಯುದ್ಧ ಇಡೀ ಜಗತ್ತನ್ನು ತೈಲ ಕೊರತೆಯ ಕೂಪಕ್ಕೆ ತಳ್ಳಿದೆ. ಪರಿಣಾಮವಾಗಿ ಅಮೆರಿಕದ ಮಿತ್ರ ರಾಷ್ಟ್ರಗಳೂ ಸೇರಿದಂತೆ ವಿಶ್ವದ ಎಲ್ಲ ದೇಶಗಳೂ ಟ್ರಂಪ್ ಯುದ್ಧ ದಾಹಕ್ಕೆ ಛೀಮಾರಿ ಹಾಕಿವೆ. ಅದರ ಒತ್ತಡವೇ ಟ್ರಂಪ್ ಅವರು ಇರಾನ್ ಜತೆಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲು ಮಂದೆ ಬಂದಿರುವುದಾಗಿದೆ.

ಅಮೆರಿಕ ಮತ್ತು ಇರಾನ್ ನಡುವೆ ಈಗ ಆಗಿರುವ ಶಾಂತಿ ಒಪ್ಪಂದ ತಾತ್ಕಾಲಿಕವಾದರೂ ಜಾಗತಿಕವಾಗಿ ಉತ್ತಮ ಹೆಜ್ಜೆಯಾಗಿದೆ. 60 ದಿನಗಳ ಕಾಲ 14 ಒಪ್ಪಂದ ಷರತ್ತುಗಳು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ಬರುತ್ತವೆ ಎಂಬ ನೆಲೆಯಲ್ಲಿ ಮುಂದಿನ ಖಾಯಂ ಶಾಂತಿ ಒಪ್ಪಂದಕ್ಕೆ ಅಮೆರಿಕ ಮತ್ತು ಇರಾನ್ ವಿವರವಾಗಿ ರಾಜತಾಂತ್ರಿಕ ನೆಲೆಯಲ್ಲಿ ಮಾತುಕತೆ ನಡೆಸಿ ಹಸ್ತಾಕ್ಷರ ಹಾಕಬೇಕಿದೆ. ಆದರೆ ಪ್ರಸಕ್ತ ಆದ ತಿಳುವಳಿಕೆ ಒಡಂಬಡಿಕೆ ಮುಖ್ಯವಾಗಿ ಹಾರ್ಮುಜ್ ಜಲ ಸಂಧಿಯಲ್ಲಿ ವಾಣಿಜ್ಯ ಹಡಗುಗಳ ಮುಕ್ತ ಸಂಚಾರ ನಡೆಯಲಿದೆ. ಅಮೆರಿಕದ ಮಿಲಿಟರಿ ದಾಳಿಯಿಂದಾಗಿ ಬಂದರುಗಳಲ್ಲಿ ನಿರ್ಬಂಧಿಸಲ್ಪಟ್ಟ ಇರಾನ್ ತೈಲ ಹಡಗುಗಳ ಸಂಚಾರ ಮತ್ತೆ ಆರಂಭ ಆಗುವುದರಿಂದ ಇರಾನ್ ಕಚ್ಚಾ ತೈಲ ಸರಬರಾಜು ಸುಲಲಿತ ಆಗಲಿದೆ. ಪರಿಣಾಮವಾಗಿ ಕಚ್ಚಾ ತೈಲ ಸರಬರಾಜು ಮುಕ್ತವಾಗಿ ಇಂಧನ ಬೆಲೆ ಕಡಿಮೆ ಆಗಲಿದೆ. ಅಮೆರಿಕ ಇರಾನಿಗೆ ಯುದ್ಧ ದಂಡ ನೀಡಬೇಕು ಮತ್ತು ಇರಾನ್ ಅದರ ಪರಮಾಣು ಅಸ್ತ್ರಗಳ ಅಭಿವೃದ್ಧಿ ಯೋಜನೆಯನ್ನು ರದ್ದು ಮಾಡಬೇಕು ಎಂಬ ಷರತ್ತುಗಳು ಒಪ್ಪಂದಲ್ಲಿ ಇವೆ ಎಂಬ ವರದಿಗಳು ಬಂದಿವೆ. ಇರಾನ್ ತನ್ನಲ್ಲಿ ಪರಮಾಣು ಅಸ್ತ್ರಗಳು ಇಲ್ಲ ಮತ್ತು ಅಣುಬಾಂಬು ತಯಾರಿ ಯೋಜನೆ ತನ್ನಲ್ಲಿ ಇಲ್ಲ ಎಂದು ಇರಾನ್ ಸರಕಾರ ಹೇಳಿಕೊಂಡಿದೆ ಎಂಬ ವರದಿಗಳು ಬಂದಿವೆ.

ಅಮೆರಿಕ ಇರಾನಿಗೆ ಅಭಿವೃದ್ಧಿ ನಿಧಿಯಾಗಿ 300 ಬಿಲಿಯನ್ ಡಾಲರ್ ನೀಡುವ ಪ್ರಸ್ತಾವಕ್ಕೆ ಅಮೆರಿಕದಲ್ಲಿ ವಿರೋಧ ವ್ಯಕ್ತವಾಗಿದೆ. ಇರಾನ್ ಕೂಡಾ ಟ್ರಂಪ್ ಅವರು ಇರಾನ್ ಮೇಲೆ ಒತ್ತಡ ಹಾಕಬಾರದು ಎಂಬ ಷರತ್ತನ್ನು ಮುಂದಿಟ್ಟಿದ್ದು ಮುಂದಿನ ಹಂತದಲ್ಲಿ ಖಾಯಂ ಶಾಂತಿ ಒಪ್ಪಂದಕ್ಕೆ ಬರಲು ಎರಡು ದೇಶಗಳು ಅತ್ಯಂತ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಯುದ್ಧದಿಂದ ಯಾವುದೇ ದೇಶಕ್ಕೆ ಯಾವುದೇ ಲಾಭ ಇಲ್ಲ ಎಂಬ ಗಂಭೀರ ಸತ್ಯವನ್ನು ಅಮೆರಿಕ ಮತ್ತು ಇರಾನ್ ಅರಿತುಕೊಂಡು ಅವುಗಳ ಹಿತಾಸಕ್ತಿಗೆ ಇತರ ದೇಶಗಳನ್ನು ಬಲಿಪಶು ಮಾಡಬಾರದು. ಅಮೆರಿಕ ಮತ್ತು ಇರಾನ್ ಪ್ರಸಕ್ತ ಶಾಂತಿ ಒಪ್ಪಂದವನ್ನು ಬದ್ಧತೆಯಿಂದ ಪಾಲಿಸಬೇಕು. ಆಗ ಮಾತ್ರ ಎರಡು ರಾಷ್ಟ್ರಗಳ ನಡುವೆ ನಂಬಿಕೆ ಮತ್ತು ವಿಶ್ವಾಸಕ್ಕೆ ಕಾರಣವಾಗಿ ಮುಂದಿನ ದೊಡ್ಡ ಖಾಯಂ ಸಮರ ಅಂತ್ಯದ ಶಾಂತಿ ಒಪ್ಪಂದ ಸಾಧ್ಯವಾಗಲಿದೆ. ಇಲ್ಲದೇ ಇದ್ದರೆ ಎರಡು ದೇಶಗಳ ಪ್ರತಿಷ್ಠೆಗೆ ಯುದ್ಧ ಮತ್ತೆ ಆರಂಭಗೊಂಡು ಜಗತ್ತಿನ ಗಂಭೀರ ಆರ್ಥಿಕ ಮತ್ತು ತೈಲ ಬಿಕ್ಕಟ್ಟಿಗೆ ಕಾರಣ ಆಗಬಹುದು ಮಾತ್ರವಲ್ಲ ಮೂರನೇ ಮಹಾಯುದ್ಧಕ್ಕೂ ಕಾರಣ ಆಗಬಹುದು. ಹಾಗಾಗದಿರಲಿ.

# ಶಿವಸೇನೆಗೆ 60 ವರ್ಷ:ಉದ್ಧವ್‌ಸೇನೆಗೆ ಅಸ್ತಿತ್ವದ ಹೋರಾಟ,ಶಿಂದೆಸೇನೆಗೆ ಪ್ರಸ್ತುತತೆಗಾಗಿನ ಸವಾಲು





ಮುಂಬಯಿ,ಜೂ.19- ಶಿವಸೇನೆಯ ಎರಡೂ ಬಣಗಳು ಶುಕ್ರವಾರ ಪಕ್ಷ ಸ್ಥಾಪನೆಯ 60 ವರ್ಷಗಳನ್ನು ಆಚರಿಸುತ್ತಿರುವ ಸಮಯದಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಒಂದು ಬಣ ಅಸ್ತಿತ್ವಕ್ಕಾಗಿ ಹೋರಾಟ ನಡೆಸುತ್ತಿದ್ದರೆ, ಏಕನಾಥ್ ಶಿಂದೆ ನೇತೃತ್ವದ ಇನ್ನೊಂದು ಬಣವು ಬಿಜೆಪಿಯ ಪ್ರಾಬಲ್ಯದ ಯುಗದಲ್ಲಿ ತನ್ನ ಪ್ರಸ್ತುತತೆಗಾಗಿನ ಸವಾಲು ಎದುರಿಸುತ್ತಿದೆ ಎಂದು ತಜ್ಞರು ಹೇಳುತ್ತಾರೆ.

ಒಂದು ಕಾಲದಲ್ಲಿ 25 ವರ್ಷಗಳ ಕಾಲ ಬಿಜೆಪಿಯ ದೃಢ ಮಿತ್ರನಾಗಿದ್ದ ಅವಿಭಜಿತ ಶಿವಸೇನೆ ಮಹಾರಾಷ್ಟ್ರದಲ್ಲಿ ಒಕ್ಕೂಟದಲ್ಲಿ ವಾಸ್ತವಿಕವಾಗಿ 'ಅಣ್ಣ'ನ ಪಾತ್ರ ಹೊಂದಿತ್ತು, ಆದರೆ ನರೇಂದ್ರ ಮೋದಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ 2014 ರಿಂದ ಅಧಿಕಾರದ ಕೇಂದ್ರ ಬದಲಾಗಿದೆ.

2014ರ ವಿಧಾನಸಭಾ ಚುನಾವಣೆಗೆ ಸ್ವಲ್ಪ ಮೊದಲು ಎರಡೂ ಪಕ್ಷಗಳ ನಡುವಿನ ಮೈತ್ರಿ ಮುರಿದುಬಿತ್ತು.ಮತ್ತೆ ನಾಲ್ಕು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಇಬ್ಬರೂ ಒಟ್ಟಿಗೆ ಸೇರಿದರು, ಆದರೆ ಸಂಬಂಧಗಳು ಮತ್ತೆ ಎಂದಿಗೂ ಸಹಜವಾಗಿ ಉಳಿಯಲಿಲ್ಲ, ಯಾವಾಗಲೂ ಕುದಿಯುತ್ತಿದ್ದ ಎರಡೂ ಪಕ್ಷಗಳ ಸಂಬಂಧ ಜ್ವಾಲಾಮುಖಿಯಾಗಿ ಸ್ಫೋಟಗೊಳ್ಳಲು ಕಾಯುತ್ತಿತ್ತು.

2019ರಲ್ಲಿ ಶಿವಸೇನೆ ಮುಖ್ಯಮಂತ್ರಿ ಹುದ್ದೆಯ ಮೇಲಿನ ಜಗಳಕ್ಕೆ ಸಂಬಂಧಿಸಿ ಬಿಜೆಪಿ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದಿಂದ ಹೊರನಡೆದಾಗ ಮತ್ತೆ ಅದೇ ದೃಶ್ಯ ಪುನರಾವರ್ತನೆಯಾಯಿತು.ಬಳಿಕ ಈ ಮೈತ್ರಿ ವಿಭಜನೆಯು ಪಕ್ಷವನ್ನು ಎರಡು ಬಣಗಳಾಗಿ ವಿಭಜಿಸುವ ಮಟ್ಟಕ್ಕೆ ಕೊಂಡೊಯ್ದಿತು.ಶಿವಸೇನೆ ಬಂಡಾಯಕ್ಕೆ ಹೊಸತಲ್ಲ. ಛಗನ್ ಭುಜಬಲ್, ಗಣೇಶ್ ನ್ಯಾಕ್, ನಾರಾಯಣ್ ರಾಣೆ, ರಾಜ್‌ಠಾಕ್ರೆ ಮುಂತಾದ ದಿಗ್ಗಜರಿಂದ ಹಿಡಿದು, ಅದು ಅನೇಕ ಬಣಗಳನ್ನು ಎದುರಿಸಿತ್ತು, ಆದರೆ 2022 ರಲ್ಲಿ ಶಿವಸೇನೆಯನ್ನು ವಿಭಜಿಸಿದ ಶಿಂದೆ ನೇತೃತ್ವದ ಬಣ ಒಂದಕ್ಕೆ ಹೊಂದಿಕೆಯಾಗಲಿಲ್ಲ.

ಶಿವಸೇನೆಯ ಶ್ರೇಣಿಯಿಂದ ಏರಿದ ಶಿಂದೆ ಬಳಿಕ ಉದ್ಧವ್ ಠಾಕ್ರೆ ಅವರಿಗೆ ಸಡ್ಡು ಹೊಡೆದು 39 ಶಾಸಕರು ಮತ್ತು 13 ಸಂಸದರೊಂದಿಗೆ ಹೊರನಡೆದರು.ಬಳಿಕ ಅವರ ಗುಂಪಿಗೆ ಪಕ್ಷದ ಹೆಸರು ಮತ್ತು ಅದರ ಬಿಲ್ಲು-ಬಾಣದ ಚಿಹ್ನೆಯೂ ಸಿಕ್ಕಿತು.

ಶಿವಸೇನೆಯನ್ನು 1966ರಲ್ಲಿ ಫೈರ್‌ಬ್ರ್ಯಾಂಡ್ ವಾಗ್ಮಿ ಬಾಳಾಸಾಹೇಬ್ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಬಾಳಾ ಕೇಶವ್ ಠಾಕ್ರೆ ಸ್ಥಾಪಿಸಿದರು. ವ್ಯಂಗ್ಯಚಿತ್ರಕಾರ ಹಾಗೂ ಸಮಾಜ ಸುಧಾರಕ ಕೇಶವ್ (ಪ್ರಬೋಧಂಕರ್) ಠಾಕ್ರೆ ಅವರ ಮಗ ಬಾಳಾಸಾಹೇಬ್. ಅವರು 'ಮರಾಠಿ ಮಾಣೂಸ್' ಅಥವಾ ಮಹಾರಾಷ್ಟ್ರದ ಮರಾಠಿ ಮಾತನಾಡುವ ಜನಸಂಖ್ಯೆಯ ಪರವಾಗಿ ಹೋರಾಡಿದರು. ಬಾಳಾಠಾಕ್ರೆ ಅವರು ಶಿವಸೇನೆಯನ್ನು ಮಹಾರಾಷ್ಟ್ರದಲ್ಲಿ, ವಿಶೇಷವಾಗಿ ಮುಂಬಯಿನಲ್ಲಿ ಒಂದು ಶಕ್ತಿಯನ್ನಾಗಿ ಮಾಡಿದರು,ಶಿವಸೈನಿಕರು ಪಕ್ಷದ ಉದ್ದೇಶಗಳನ್ನು ತೀವ್ರವಾಗಿ ಸಮರ್ಥಿಸಿಕೊಂಡ ಬೀದಿ ಮಟ್ಟದ ಕಾರ್ಯಕರ್ತರು ಎಂಬ ಖ್ಯಾತಿಯನ್ನು ಗಳಿಸಿದರು.

ಈ 60 ವರ್ಷಗಳಲ್ಲಿ ಅವಿಭಜಿತ ಶಿವಸೇನೆಯು ಮನೋಹರ್‌ಜೋಶಿ, ನಾರಾಯಣ್ ರಾಣೆ ಮತ್ತು ಉದ್ಧವ್ ಠಾಕ್ರೆ ಎಂಬ ಮೂವರು ಮುಖ್ಯಮಂತ್ರಿಗಳನ್ನು ಹೊಂದಿತ್ತು. ಆದಾಗ್ಯೂ, ಅವರಲ್ಲಿ ಯಾರಿಗೂ ಐದು ವರ್ಷಗಳ ಸಂಪೂರ್ಣ ಅಧಿಕಾರಾವಧಿಯನ್ನು ಪಡೆಯಲು ಸಾಧ್ಯವಾಗಲಿಲ್ಲ. 2022 ರಲ್ಲಿ ವಿಭಜನೆಯ ನಂತರ ಶಿಂದೆ ಎರಡೂವರೆ ವರ್ಷಗಳ ಕಾಲ ಸರಕಾರವನ್ನು ಮುನ್ನಡೆಸಿದರು.

ರಾಜಕೀಯ ವಿಶ್ಲೇಷಕ ಹೇಮಂತ್ ದೇಸಾಯಿ ಅವರು ಹೇಳುವಂತೆ, ಎರಡೂ ಬಣಗಳು, ವಿಶೇಷವಾಗಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆ (ಯುಬಿಟಿ), ಬಾಳಾಠಾಕ್ರೆ ತಮ್ಮ ಜೀವಿತಾವಧಿಯಲ್ಲಿ ಎದುರಿಸಿದ್ದಕ್ಕಿಂತ ಕಠಿಣ ಸವಾಲನ್ನು ಎದುರಿಸುತ್ತಿದೆ ಎಂದು ಹೇಳುತ್ತಾರೆ.ಬಾಳ್‌ಠಾಕ್ರೆ ಬಿಜೆಪಿ ಪ್ರಾಬಲ್ಯದ ಕಾಲದಲ್ಲಿ ಬದುಕಿರಲಿಲ್ಲ, ಆದರೆ ಸೇನಾ ಎರಡೂ ಬಣಗಳು ಪ್ರಸ್ತುತ ಆ ಯುಗದಲ್ಲಿ ಬದುಕುತ್ತಿವೆ ಎಂಬುದು ಅವರ ಅಭಿಪ್ರಾಯವಾಗಿದೆ. ಆದಾಗ್ಯೂ, ಉದ್ಧವ್ ಠಾಕ್ರೆ ನೇತೃತ್ವದ ಸೇನೆ ದೊಡ್ಡ ಬಿಕ್ಕಟ್ಟನ್ನು ಎದುರಿಸುತ್ತಿದೆ ಎಂದು ದೇಸಾಯಿ ಹೇಳಿದರು.

ಕೇವಲ 20 ಶಾಸಕರನ್ನು ಹೊಂದಿರುವ ಶಿವಸೇನೆ (ಯುಬಿಟಿ) ವಿಧಾನಸಭೆಯಲ್ಲಿ ವಿರೋಧ ಪಕ್ಷದ ದೊಡ್ಡ ಪಕ್ಷವಾಗಿರಬಹುದು, ಆದರೆ ಶಿಂದೆ ನೇತೃತ್ವದ ಸೇನೆಯು ಸದನದಲ್ಲಿ ಸುಮಾರು ಮೂರು ಪಟ್ಟು ಹೆಚ್ಚು ಶಾಸಕರನ್ನು ಹೊಂದಿದೆ.

ಠಾಕ್ರೆ ನೇತೃತ್ವದ ಅವಿಭಜಿತ ಶಿವಸೇನೆಯು 1997 ರಿಂದ 2022 ರವರೆಗೆ ನಿರಂತರ 25 ವರ್ಷಗಳ ಕಾಲ ನಗದು ಸಮೃದ್ಧ ಬೃಹನ್ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್ (ಬಿಎಂಸಿ)ನ್ನು ನಿಯಂತ್ರಿಸಿತು. 2022 ರಲ್ಲಿ ಕಾರ್ಪೊರೇಟರ್‌ಗಳ ಅಧಿಕಾರಾವಧಿ ಕೊನೆಗೊಂಡಾಗ ಪಾಲಿಕೆಯ ಮೇಲಿನ ಪಕ್ಷದ ಹಿಡಿತ ಕೊನೆಗೊಂಡಿತು. 2026 ರಲ್ಲಿ ನಡೆದ ಮುಂದಿನ ಪಾಲಿಕೆ ಚುನಾವಣೆಯಲ್ಲಿ, ಬಿಜೆಪಿ ಬಿಎಂಸಿಯಲ್ಲಿ ತನ್ನ ಮೇಯರ್‌ನ್ನು ಸ್ಥಾಪಿಸಲು ಯಶಸ್ವಿಯಾಯಿತು.ಶಿವಸೇನೆ (ಯುಬಿಟಿ) ಪ್ರಸ್ತುತ ರಾಜ್ಯದಲ್ಲಿ ಒಬ್ಬ ಮೇಯರ್‌ನ್ನು ಮಾತ್ರ ಹೊಂದಿದೆ.ಅದು ಪರ್ಭಾನಿ ಮುನ್ಸಿಪಲ್ ಕಾರ್ಪೊರೇಷನ್‌ನಲ್ಲಿ.

ಉದ್ಧವ್ ನೇತೃತ್ವದ ಬಣ ಎದುರಿಸುತ್ತಿರುವ ಬಿಕ್ಕಟ್ಟಿನಲ್ಲಿ ಒಂದು ಬೆಳ್ಳಿ ಗೆರೆ ಇದೆ ಎಂದು ದೇಸಾಯಿ ಹೇಳುತ್ತಾರೆ. ಇದು ಹೊಸದಾಗಿ ಆರಂಭವಾಗಬಹುದು, ಆದರೆ ಅದಕ್ಕಾಗಿ ಉದ್ಧವ್ ಅವರ ಮಗ ಮತ್ತು ಅವರ ಉತ್ತರಾಧಿಕಾರಿ ಆದಿತ್ಯ ಠಾಕ್ರೆ ಅವರಿಂದ ಅಪಾರ ಪ್ರಯತ್ನಗಳು ಬೇಕಾಗುತ್ತವೆ.

ಶಿಂದೆ 2014ರಿಂದ ಅಧಿಕಾರದಲ್ಲಿದ್ದಾರೆ. ಮೊದಲು ದೇವೇಂದ್ರ ಫಡ್ನವೀಸ್ ಸರಕಾರದಲ್ಲಿ ಮತ್ತು ಬಳಿಕ ಉದ್ಧವ್ ಠಾಕ್ರೆ ನೇತೃತ್ವದ ಸರಕಾರದಲ್ಲಿ, ನಂತರ 2022 ರಿಂದ 2024 ರವರೆಗೆ ಮುಖ್ಯಮಂತ್ರಿಯಾಗಿ ಮತ್ತು 2024 ರಿಂದ ಉಪಮುಖ್ಯಮಂತ್ರಿಯಾಗಿ. ಶಿಂದೆ ನೇತೃತ್ವದ ಶಿವಸೇನೆಗೆ ಹಣಕಾಸಿಗೆ ಸಂಬಂಧಿಸಿದ ವಿಷಯದಲ್ಲಿ ಸವಾಲು ಎದುರಾಗುತ್ತದೆ ಎನ್ನುತ್ತಾರೆ ದೇಸಾಯಿ.

ದಿಲ್ಲಿ ಮೂಲದ ಸೆಂಟರ್ ಫಾರ್ ಡೆವಲಪಿಂಗ್ ಸ್ಟಡೀಸ್ ಆ್ಯಂಡ್ ಸೊಸೈಟೀಸ್‌ನ ಪ್ರಾಧ್ಯಾಪಕರಾದ ರಾಜಕೀಯ ವಿಶ್ಲೇಷಕ ಸಂಜಯ್ ಕುಮಾರ್ ಅವರ ಪ್ರಕಾರ, ಎರಡು ಸೇನಾ ಬಣಗಳ ಪ್ರಸ್ತುತತೆಯನ್ನು ಪ್ರಾದೇಶಿಕ ಪಕ್ಷಗಳ ಸಂದರ್ಭದಿಂದ ನೋಡಬೇಕಾಗಿದೆ, ವಿಶೇಷವಾಗಿ ಮೊದಲ ಕುಟುಂಬದೊಳಗೆ ಅಧಿಕಾರ ವರ್ಗಾವಣೆ ನಡೆಯಬಹುದಾದ ಕಡೆಗಳಲ್ಲಿ. ಮತ ಹಂಚಿಕೆಯ ವಿಷಯದಲ್ಲಿ ಎರಡೂ ಬಣಗಳ ಪ್ರಸ್ತುತತೆ ಕಡಿಮೆಯಾಗಿದೆ ಎಂದು ಡೇಟಾ ಸೂಚಿಸುತ್ತದೆ.

ಠಾಕ್ರೆ ನೇತೃತ್ವದ ಅವಿಭಜಿತ ಶಿವಸೇನೆಯಲ್ಲಿನ ವಿಭಜನೆಯನ್ನು ಉಲ್ಲೇಖಿಸಿದ ಕುಮಾರ್,ಠಾಕ್ರೆ ಗುಂಪು ಮತ್ತೊಂದು ವಿಭಜನೆಯತ್ತ ನೋಡುತ್ತಿದೆ ಮತ್ತು ತೃಣಮೂಲ ಕಾಂಗ್ರೆಸ್‌ನಲ್ಲಿ ಉಂಟಾದ ವಿಭಜನೆ ಬಳಿಕ ಇದು ಸ್ಪಷ್ಟವಾಗಿದೆ.

ಉದ್ಧವ್ ಬಣವು ಅಧಿಕಾರದಲ್ಲಿಲ್ಲದ ಕಾರಣ ಹೆಚ್ಚಿನ ತೊಂದರೆಗೆ ಸಿಲುಕುವ ಸಾಧ್ಯತೆ ಹೆಚ್ಚು ಎಂದು ಕುಮಾರ್ ಹೇಳಿದರು.

ಸೇನಾ (ಯುಬಿಟಿ) ಆರು ಸಂಸದರನ್ನು ಕಳೆದುಕೊಳ್ಳಲಿದೆ, ಆದರೆ ವಿಧಾನಸಭಾ ಚುನಾವಣೆಯಲ್ಲಿನ ಸೋಲಿನ ಪ್ರಮಾಣವು ರಾಜ್ಯಸಭೆಗೆ ಪಕ್ಷವು ಕಳುಹಿಸುವ ಸಂಸದರ ಸಂಖ್ಯೆಯ ಮೇಲೆ ನೇರ ಪರಿಣಾಮ ಬೀರುತ್ತದೆ.ಇದು ರಾಷ್ಟ್ರೀಯ ರಾಜಕೀಯದಲ್ಲಿ ಪಕ್ಷದ ಪಾಲಿನ ಮೇಲೂ ಪರಿಣಾಮ ಬೀರುತ್ತದೆ ಎಂದು ಅವರು ತಿಳಿಸಿದರು.

ಸೇನಾ (ಯುಬಿಟಿ) ನಾಯಕತ್ವದ ಸಮಸ್ಯೆಗಳನ್ನು ಮಾತ್ರವಲ್ಲದೆ ತನ್ನ ಗುರುತನ್ನು ಕೂಡ ಎದುರಿಸುತ್ತಿದೆ ಎಂದು ಕುಮಾರ್ ಹೇಳಿದರು.

ಬಿಜೆಪಿ ತನ್ನ ಹಿಂದುತ್ವದ ನೆಲೆಯನ್ನು ಕಿತ್ತುಕೊಂಡಿರುವುದರಿಂದ ಸೇನಾ (ಯುಬಿಟಿ) ನಾಯಕತ್ವದ ಸಮಸ್ಯೆಗಳನ್ನು ಎದುರಿಸುತ್ತಿದೆ ಮಾತ್ರವಲ್ಲದೆ, ಸೈದ್ಧಾಂತಿಕ ಬಿಕ್ಕಟ್ಟನ್ನೂ ಎದುರಿಸುತ್ತಿದೆ ಎಂದು ಕುಮಾರ್ ಹೇಳಿದರು.

ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಇನ್ನೂ ಸಂಪೂರ್ಣ ಬಹುಮತವನ್ನು ಗಳಿಸದ ಕಾರಣ ಶಿಂದೆ ನೇತೃತ್ವದ ಶಿವಸೇನೆ ಸ್ವಲ್ಪ ಸಮಯದವರೆಗೆ ಪ್ರಸ್ತುತವಾಗಿ ಉಳಿಯುವ ಸಾಧ್ಯತೆಯಿದೆ ಎಂದು ಅವರು ತಿಳಿಸಿದರು. ನಿಧಾನವಾಗಿ ಮತ್ತು ಕ್ರಮೇಣವಾಗಿ ಶಿಂದೆ ನೇತೃತ್ವದ ಶಿವಸೇನೆ ಬಿಹಾರದಲ್ಲಿ ಜೆಡಿ (ಯು) ನಂತೆ ಪ್ರಸ್ತುತತೆಯನ್ನು ಕಳೆದುಕೊಳ್ಳುವತ್ತ ಸಾಗಲಿಗೆ ಎಂಬುದು ಕುಮಾರ್ ಅವರ ಅಭಿಪ್ರಾಯವಾಗಿದೆ.

# ಅಮೆರಿಕ-ಇರಾನ್ ಶಾಂತಿ ಒಪ್ಪಂದದಲ್ಲಿ ಪ್ರಮುಖ ಪಾತ್ರ ವಹಿಸಿದವರು

ದುಬೈ, ಜೂ. 19 - ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿರುವ ಅಮೆರಿಕ ಮತ್ತು ಇರಾನ್ ನಡುವಿನ ಒಪ್ಪಂದವು ಜಾರಿಗೆ ಬರುತ್ತಿದ್ದಂತೆ, ಎಲ್ಲಾ ಕಡೆಯಿಂದ ರಾಜತಾಂತ್ರಿಕತೆಯನ್ನು ರೂಪಿಸುವ ಪ್ರಮುಖ ನಾಯಕರ ಪಾತ್ರ ಇಲ್ಲಿದೆ.



**ಡೊನಾಲ್ಡ್ ಟ್ರಂಪ್:** ತಮ್ಮ ಎರಡನೇ ಅವಧಿಯ ವಿದೇಶಾಂಗ ನೀತಿಯ ಬಹುಪಾಲು ಭಾಗವನ್ನು ಶಾಂತಿಪ್ರಿಯ ಎಂದು ಬಿಂಬಿಸಿಕೊಳ್ಳುವುದರ ಮೇಲೆ ಕೇಂದ್ರೀಕರಿಸಿರುವ ಅಮೆರಿಕ ಅಧ್ಯಕ್ಷರು, ಇರಾನ್ ಜೊತೆಗಿನ ಒಪ್ಪಂದಕ್ಕೆ ಒತ್ತಾಯಿಸುವ ಹಿಂದಿನ ಪ್ರೇರಕ ಶಕ್ತಿಯಾಗಿದ್ದಾರೆ. ಅವರು ಈ ಒಪ್ಪಂದವನ್ನು ತಮ್ಮ ಎರಡನೇ ಅವಧಿಯ ವಿದೇಶಾಂಗ ನೀತಿ ಸಾಧನೆಯಾಗಿ ಇರಿಸಿದ್ದಾರೆ. ಇರಾನ್ ಜೊತೆಗಿನ ಯುದ್ಧವನ್ನು ಕೊನೆಗೊಳಿಸಲು ಟ್ರಂಪ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದರು.



**ಜೆ ಡಿ ವ್ಯಾನ್ಸ್:** ಯುಎಸ್ ಉಪಾಧ್ಯಕ್ಷರು ಆಡಳಿತದ ಯುದ್ಧ ಸಂಪುಟದಲ್ಲಿ ಪ್ರಮುಖ ವ್ಯಕ್ತಿಯಾಗಿದ್ದು, ಸಂಘರ್ಷವು ನಾಲ್ಕನೇ ತಿಂಗಳನ್ನು ಪ್ರವೇಶಿಸುತ್ತಿದ್ದಂತೆ ವಾಷಿಂಗ್ಟನ್‌ನ ಮಾತುಕತೆಯ ಭಂಗಿಯನ್ನು ರೂಪಿಸಲು ಸಹಾಯ ಮಾಡಿದ್ದಾರೆ. ಉದಯೋನ್ಮುಖ ಒಪ್ಪಂದದ ಆಧಾರವಾಗಿರುವ 14-ಅಂಶಗಳ ತಿಳುವಳಿಕೆ ಪತ್ರದ ನಿಯಮಗಳ ಕುರಿತು ಚರ್ಚೆಗಳಲ್ಲಿ ವ್ಯಾನ್ಸ್ ನಿಕಟವಾಗಿ ತೊಡಗಿಸಿಕೊಂಡಿದ್ದಾರೆ. ಏಪ್ರಿಲ್ ಆರಂಭದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಇರಾನ್ ಜೊತೆಗಿನ ಸರಣಿ ಮಾತುಕತೆಯ ಸಮಯದಲ್ಲಿ ಅವರು ಯುಎಸ್ ನಿಯೋಗವನ್ನು ಮುನ್ನಡೆಸಿದ್ದರು, ಆಗ ಎರಡೂ ಕಡೆಯವರು ಒಪ್ಪಂದವನ್ನು ಮಾಡಿಕೊಳ್ಳಲು ವಿಫಲರಾದರು.




**ಸ್ಟೀವ್ ವಿಟ್ಕಾಫ್:** ಟ್ರಂಪ್ ಅವರ ವಿಶೇಷ ರಾಯಭಾರಿ ಮತ್ತು ಪಶ್ಚಿಮ ಏಷ್ಯಾದ ಪ್ರಮುಖ ವ್ಯಕ್ತಿ ವಿಟ್ಕಾಫ್, ಇರಾನಿನ ಸಂವಾದಕರೊಂದಿಗೆ ಬ್ಯಾಕ್-ಚಾನೆಲ್ ಮಾತುಕತೆಗಳಲ್ಲಿ ಅಮೆರಿಕದ ಸಮಾಲೋಚನಾ ತಂಡವನ್ನು ಮುನ್ನಡೆಸಿದ್ದಾರೆ. ಎರಡೂ ಕಡೆಯ ನಡುವಿನ ಅಂತರವನ್ನು ಕಡಿಮೆ ಮಾಡಲು ಪಾಕಿಸ್ತಾನಿ ಮಧ್ಯವರ್ತಿಗಳೊಂದಿಗೆ ನಿಕಟವಾಗಿ ಕೆಲಸ ಮಾಡುವ ಮೂಲಕ, ಚೌಕಟ್ಟಿನ ಒಪ್ಪಂದವನ್ನು ರೂಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ.



**ಜರೆಡ್ ಕುಶ್ನರ್:** ಟ್ರಂಪ್ ಅವರ ಅಳಿಯ ಮತ್ತು ಮಾಜಿ ಹಿರಿಯ ಶ್ವೇತಭವನದ ಸಲಹೆಗಾರ, ಈಗ ಅನೌಪಚಾರಿಕ ಸಾಮರ್ಥ್ಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ, ವಿಶಾಲವಾದ ಅಮೆರಿಕನ್ ರಾಜತಾಂತ್ರಿಕ ಪ್ರಯತ್ನದ ಭಾಗವಾಗಿದ್ದಾರೆ. ಅವರು ವಿಟ್ಕಾಫ್ ಮತ್ತು ವ್ಯಾನ್ಸ್ ಜೊತೆ ಸೇರಿ ಟ್ರಂಪ್ ಅವರ ಮೊದಲ ಅವಧಿಯಿಂದಲೂ ಅವರ ಪಶ್ಚಿಮ ಏಷ್ಯಾ ಸಂಪರ್ಕಗಳನ್ನು ಬಳಸಿಕೊಂಡು ಮಾತುಕತೆಗಳನ್ನು ಸುಗಮಗೊಳಿಸಿದ್ದಾರೆ,



**ಮೊಜ್ತಾಬಾ ಖಮೇನಿ:** ಇವರು ತಮ್ಮ ತಂದೆಯ ನಂತರ ಇರಾನ್‌ನ ಸರ್ವೋಚ್ಚ ನಾಯಕರಾಗಿ ಅಧಿಕಾರ ವಹಿಸಿಕೊಂಡರು ಮತ್ತು ಶಾಂತಿ ಮಾತುಕತೆಗಳಲ್ಲಿ ನಿರ್ಣಾಯಕ, ಆದರೆ ಹೆಚ್ಚಾಗಿ ತೆರೆಮರೆಯಲ್ಲಿ ಪಾತ್ರವನ್ನು ವಹಿಸಿದರು. ಖಮೇನಿ ಅಮೆರಿಕ ಜೊತೆ ನೇರ ಮಾತುಕತೆಗಳನ್ನು ಅನುಮೋದಿಸಿದರು ಮತ್ತು ಇರಾನ್‌ನ ರಾಷ್ಟ್ರೀಯ ಹಿತಾಸಕ್ತಿಗಳು ಮತ್ತು ಪ್ರಾದೇಶಿಕ ಮಿತ್ರರಾಷ್ಟ್ರಗಳನ್ನು ರಕ್ಷಿಸಲಾಗುವುದು ಎಂಬ ಭರವಸೆಗಳನ್ನು ಪಡೆದ ನಂತರ, ಅವರ ಹಿಂಜರಿಕೆಗಳ ಹೊರತಾಗಿಯೂ, ತಿಳುವಳಿಕೆಯ ಒಪ್ಪಂದವನ್ನು ಅನುಮೋದಿಸಿದರು.



**ಮಸೌದ್ ಪೆಜೆಶ್ಕಿಯಾನ್:** ಇರಾನ್‌ನ ಅಧ್ಯಕ್ಷರು ಟೆಹ್ರಾನ್‌ನ ರಾಜತಾಂತ್ರಿಕ ಒತ್ತಡದ ಸಾರ್ವಜನಿಕ ಮುಖವಾಗಿ ಹೊರಹೊಮ್ಮಿದರು, ಇರಾನ್‌ನ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಮೂಲಕ ಮಾತುಕತೆಗಳನ್ನು ಮುನ್ನಡೆಸಲು ಸಹಾಯ ಮಾಡಿದರು ಮತ್ತು ದೇಶದ ಉನ್ನತ ನಾಯಕತ್ವದ ಬೆಂಬಲವನ್ನು ಪಡೆದರು. ಪಶ್ಚಿಮ ಏಷ್ಯಾದಲ್ಲಿ ಶಾಂತಿಯನ್ನು ಪುನಃಸ್ಥಾಪಿಸುವ ಗುರಿಯನ್ನು ಹೊಂದಿರುವ ಪೆಜೆಶ್ಕಿಯಾನ್ ಅಮೆರಿಕದೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕಿದರು.




**ಅಲಿ ಲಾರಿಜಾನಿ:** ಫೆಬ್ರವರಿ 28 ರಂದು ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಯ ನಂತರ, ಮಾರ್ಚ್ ಮಧ್ಯದಲ್ಲಿ ಯುಎಸ್-ಇಸ್ರೇಲಿ ದಾಳಿಯಲ್ಲಿ ಅವರ ಸ್ವಂತ ಹತ್ಯೆಯಾಗುವವರೆಗೂ ಪ್ರಬಲ ಸುಪ್ರೀಂ ರಾಷ್ಟ್ರೀಯ ಭದ್ರತಾ ಮಂಡಳಿಯ ಕಾರ್ಯದರ್ಶಿ ಇರಾನ್‌ನ ವಾಸ್ತವಿಕ ನಾಯಕರಾಗಿದ್ದರು.




**ಅಬ್ಬಾಸ್ ಅರಘ್ಚಿ:** ಯುಎಸ್ ಜೊತೆಗಿನ ಸಂಘರ್ಷದ ಸಮಯದಲ್ಲಿ ವಿದೇಶಾಂಗ ವ್ಯವಹಾರಗಳಲ್ಲಿ ಇರಾನ್‌ನ ಅತ್ಯಂತ ಪ್ರಭಾವಶಾಲಿ ಧ್ವನಿಗಳಲ್ಲಿ ಒಬ್ಬರಾಗಿ ವಿದೇಶಾಂಗ ಸಚಿವರು ಹೊರಹೊಮ್ಮಿದರು. ಜಾಗತಿಕ ಶಕ್ತಿಗಳು, ನೆರೆಯ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳೊಂದಿಗೆ ಇರಾನ್‌ನ ಸಂಬಂಧಗಳನ್ನು ನಿರ್ವಹಿಸುವಲ್ಲಿ ಅರಘ್ಚಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪಾಕಿಸ್ತಾನದ ಮಧ್ಯಸ್ಥಿಕೆ ತಂಡದೊಂದಿಗೆ ಚರ್ಚೆಗಳಲ್ಲಿ ಅವರು ಇರಾನ್‌ನ ಪ್ರಮುಖ ಪ್ರತಿನಿಧಿಯಾಗಿದ್ದಾರೆ.



**ಮೊಹಮ್ಮದ್ ಬಘರ್ ಗಾಲಿಬಾಫ್:** ಇರಾನ್ ಸಂಸತ್ತಿನ ಸ್ಪೀಕರ್, ಕಠಿಣವಾದಿ ಎಂದು ಪರಿಗಣಿಸಲ್ಪಟ್ಟವರು, ಅಮೆರಿಕದೊಂದಿಗೆ ಇರಾನ್‌ನ ಶಾಂತಿ ಮಾತುಕತೆಗಳಲ್ಲಿ ಪ್ರಮುಖ ವ್ಯಕ್ತಿಯಾಗಿದ್ದಾರೆ. ಏಪ್ರಿಲ್ ಆರಂಭದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ದಶಕಗಳಲ್ಲಿ ಅಮೆರಿಕದೊಂದಿಗೆ ನಡೆದ ಮೊದಲ ನೇರ ಮಾತುಕತೆಯಲ್ಲಿ ಇವರು ಇರಾನ್‌ನ ಮುಖ್ಯ ಸಮಾಲೋಚಕರಾಗಿದ್ದರು.



**ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್:** ಪಾಕಿಸ್ತಾನದ ಸೇನಾ ಮುಖ್ಯಸ್ಥರು ಇಸ್ಲಾಮಾಬಾದ್‌ನ ಮಧ್ಯಸ್ಥಿಕೆ ಪ್ರಯತ್ನಗಳನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ, ಇದು ದಶಕಗಳಲ್ಲಿ ದೇಶದ ಅತ್ಯಂತ ಮಹತ್ವದ ರಾಜತಾಂತ್ರಿಕ ಹಸ್ತಕ್ಷೇಪವಾಗಿದೆ. ಅಮೆರಿಕ ಮತ್ತು ಇರಾನ್ ಪ್ರತಿನಿಧಿಗಳೊಂದಿಗಿನ ಅವರ ತೆರೆಮರೆಯ ಸಂವಹನವು ಮಾತುಕತೆಗಳು ಮುರಿದು ಬೀಳದಂತೆ ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



**ಶೆಹಬಾಜ್ ಷರೀಫ್:** ಪಾಕಿಸ್ತಾನದ ಪ್ರಧಾನಿ ಅಮೆರಿಕ-ಇರಾನ್ ಶಾಂತಿ ಪ್ರಯತ್ನದಲ್ಲಿ ಮುಖ್ಯ ಮಧ್ಯವರ್ತಿಯಾಗಿ ಹೊರಹೊಮ್ಮಿದರು, ಇಸ್ಲಾಮಾಬಾದ್‌ನಲ್ಲಿ ಪ್ರಮುಖ ಸುತ್ತಿನ ಮಾತುಕತೆಗಳನ್ನು ಆಯೋಜಿಸಿದರು ಮತ್ತು ಮಾತುಕತೆಗಳ ಉದ್ದಕ್ಕೂ ವಾಷಿಂಗ್ಟನ್ ಮತ್ತು ಟೆಹ್ರಾನ್ ಎರಡರೊಂದಿಗೂ ನೇರ ಸಂಪರ್ಕವನ್ನು ಉಳಿಸಿಕೊಂಡರು. ಪ್ರಕ್ರಿಯೆಯನ್ನು ಅದರ ಅಂತಿಮ ಹಂತಗಳಲ್ಲಿ ಪಾಲನೆ ಮಾಡಲು ಷರೀಫ್ ಸಹಾಯ ಮಾಡಿದರು ಮತ್ತು ಮಧ್ಯವರ್ತಿಯಾಗಿ ತಮ್ಮ ಸಾಮರ್ಥ್ಯದಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.



**ಇಶಾಕ್ ದಾರ್:** ಪಾಕಿಸ್ತಾನದ ಉಪ ಪ್ರಧಾನ ಮಂತ್ರಿ ಮತ್ತು ವಿದೇಶಾಂಗ ಸಚಿವರು ಇಸ್ಲಾಮಾಬಾದ್‌ನ ಮಧ್ಯಸ್ಥಿಕೆ ಪ್ರಯತ್ನಗಳಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದಾರೆ.

ಅವರು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಇರಾನ್ ವಿದೇಶಾಂಗ ಸಚಿವ ಅರಘ್ಚಿ ಮತ್ತು ಪ್ರಪಂಚದಾದ್ಯಂತದ ಹಲವಾರು ದೇಶಗಳ ವಿದೇಶಾಂಗ ಸಚಿವರೊಂದಿಗೆ ಮಾತುಕತೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಇದಲ್ಲದೆ, ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿಯುವುದನ್ನು ಖಚಿತಪಡಿಸಿಕೊಳ್ಳಲು ಅವರು ಟರ್ಕಿ ಮತ್ತು ಕತಾರ್ ಸೇರಿದಂತೆ ಪ್ರಾದೇಶಿಕ ಪಾಲುದಾರರೊಂದಿಗೆ ಸಮನ್ವಯ ಸಾಧಿಸುತ್ತಿದ್ದಾರೆ.



**ಮೊಹ್ಸಿನ್ ನಖ್ವಿ:** ಪಾಕಿಸ್ತಾನದ ಆಂತರಿಕ ಸಚಿವರು, ಸೇನಾ ಮುಖ್ಯಸ್ಥ ಮುನೀರ್ ಅವರ ಪ್ರಮುಖ ಮಿತ್ರ, ಈ ಪ್ರದೇಶದಲ್ಲಿ ಉದ್ವಿಗ್ನತೆಯನ್ನು ಕಡಿಮೆ ಮಾಡಲು ಇಸ್ಲಾಮಾಬಾದ್‌ನ ಒತ್ತಾಯದ ಭಾಗವಾಗಿ ಇರಾನ್ ನಾಯಕತ್ವದೊಂದಿಗೆ ಸಭೆ ನಡೆಸಲು ಟೆಹ್ರಾನ್‌ಗೆ ಹಲವು ಬಾರಿ ಪ್ರಯಾಣ ಬೆಳೆಸಿದರು.

ನಿರೀಕ್ಷಿತ ಸಹಿ ಹಾಕುವ ಮೊದಲು ಅವರ ಭೇಟಿಯನ್ನು ವಿಶ್ವಾಸ ವೃದ್ಧಿಸುವ ಕ್ರಮವೆಂದು ಪರಿಗಣಿಸಲಾಗಿದೆ.

# ದಾವೂದ್ ಗ್ಯಾಂಗ್ ಸಂಪರ್ಕವಿದೆ ಎಂದು ಹೇಳಿಕೊಂಡ ವ್ಯಕ್ತಿಯಿಂದ ಡಿಆರ್‌ಐ ಅಧಿಕಾರಿಗೆ ಬೆದರಿಕೆ ಕರೆ

ಪುಣೆ, ಜೂ.19 - ಸ್ಮಗ್ಲಿಂಗ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಜತೆಗೆ ದಾವೂದ್ ಇಬ್ರಾಹಿಂ ಗ್ಯಾಂಗ್‌ನೊಂದಿಗೆ ಸಂಪರ್ಕ ಹೊಂದಿರುವುದಾಗಿ ಹೇಳಿಕೊಂಡ ವ್ಯಕ್ತಿಯಿಂದ ತನಗೆ ಬೆದರಿಕೆ ಕರೆಬಂದಿರುವುದಾಗಿ ಆರೋಪಿಸಿ ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ)ದ ಹಿರಿಯ ಅಧಿಕಾರಿಯೊಬ್ಬರು ದೂರು ದಾಖಲಿಸಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

ಡಿಆರ್‌ಐನ ಪುಣೆ ಮೂಲದ ಸಹಾಯಕ ನಿರ್ದೇಶಕ ಶ್ರೇಣಿಯ ಅಧಿಕಾರಿ ಸಲ್ಲಿಸಿದ ದೂರಿನ ಪ್ರಕಾರ, ಮೇ 3 ರಂದು ಮುಷ್ತಾಕ್ ಶೇಖ್ ಎಂದು ಗುರುತಿಸಿಕೊಂಡ ವ್ಯಕ್ತಿಯಿಂದ ಅವರಿಗೆ ಕರೆ ಬಂದಿದ್ದು,ಆತ ವರದಿಗಾರನಾಗಿ ಕೆಲಸ ಮಾಡಲು ಆಸಕ್ತಿ ವ್ಯಕ್ತಪಡಿಸಿ ಅವರೊಂದಿಗೆ ಮಾತನಾಡಲು ಪ್ರಯತ್ನಿಸಿದರು.

ಕೆಲವು ದಿನಗಳ ನಂತರ, ಕರೆ ಮಾಡಿದ ವ್ಯಕ್ತಿ ಅಧಿಕಾರಿಯನ್ನು ಮತ್ತೆ ಸಂಪರ್ಕಿಸಿ, ದುಬೈನಿಂದ ಹಿಂತಿರುಗುವಾಗ ಮುಂಬಯಿ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆಂದು ಹೇಳಲಾದ ಲ್ಯಾಪ್‌ಟಾಪ್‌ಗಳು ಮತ್ತು ಮೊಬೈಲ್ ಫೋನ್‌ಗಳನ್ನು ಬಿಡುಗಡೆ ಮಾಡಲು ಸಹಾಯ ಮಾಡುವಂತೆ ವಿನಂತಿಸಿದ್ದ.

ಅಧಿಕಾರಿ ಆ ವಿನಂತಿಯನ್ನು ನಿರಾಕರಿಸಿದ ಬಳಿಕ ಕರೆ ಮಾಡಿದ ವ್ಯಕ್ತಿ , ಅಧಿಕಾರಿ ಮತ್ತವರ ಕುಟುಂಬ ಸದಸ್ಯರಿಗೆ ಬೆದರಿಕೆ ಹಾಕುತ್ತಾ ಹಲವಾರು ವಾಟ್ಸಾಪ್ ಧ್ವನಿ ಸಂದೇಶಗಳನ್ನು ಕಳುಹಿಸಿದ್ದಾಗಿ ಆರೋಪಿಸಲಾಗಿದೆ.

ಇತ್ತೀಚೆಗೆ ಸಲ್ಲಿಸಲಾದ ದೂರಿನ ಪ್ರಕಾರ, ಕಳೆದ 30 ವರ್ಷಗಳಿಂದ ಕಳ್ಳ ಸಾಗಣೆ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದಾಗಿ ಮತ್ತು ಅಪರಾಧಿಗಳೊಂದಿಗೆ ಸಂಪರ್ಕ ಹೊಂದಿರುವುದಾಗಿ ಕರೆ ಮಾಡಿದಾಗ ಹೇಳಿಕೊಂಡಿದ್ದಾನೆ ಎಂದು ಡಿಆರ್‌ಐ ಅಧಿಕಾರಿ ಆರೋಪಿಸಿದ್ದಾರೆ. ಅಧಿಕಾರಿಗೆ 'ಪಾಠ ಕಲಿಸುತ್ತೇನೆ' ಮತ್ತು ಅವರ ಕುಟುಂಬದ ಚಲನವಲನಗಳನ್ನು ಮೇಲ್ವಿಚಾರಣೆ ಮಾಡುತ್ತೇನೆ ಎಂದು ಕರೆ ಮಾಡಿದಾತ ಎಚ್ಚರಿಸಿದ್ದಾಗಿ ಆರೋಪಿಸಲಾಗಿದೆ.ಬೇರೆ ಮೊಬೈಲ್ ಸಂಖ್ಯೆಯಿಂದ ಕರೆ ಮಾಡಿದ ಮತ್ತೊಬ್ಬ ವ್ಯಕ್ತಿ ಮೇ 6 ರಂದು ತಮ್ಮನ್ನು ಸಂಪರ್ಕಿಸಿ ಕಳೆದ ಮೂರು ದಶಕಗಳಿಂದ ದಾವೂದ್ ಇಬ್ರಾಹಿಂನ ಡಿ-ಕಂಪನಿ ಸಿಂಡಿಕೇಟ್‌ಗಾಗಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳಿಕೊಂಡಿದ್ದಾನೆ ಎಂದು ಅಧಿಕಾರಿ ಆರೋಪಿಸಿದ್ದಾರೆ.

ಭಯೋತ್ಪಾದನಾ ನಿಗ್ರಹ ದಳದಲ್ಲಿ ಸಂಪರ್ಕ ಹೊಂದಿರುವುದಾಗಿಯೂ ಕರೆ ಮಾಡಿದಾತ ಹೇಳಿಕೊಂಡಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ತನ್ನ ದೂರಿನಲ್ಲಿ, ತಮಗೆ ಮತ್ತು ಅವರ ಕುಟುಂಬಕ್ಕೆ ಮಾತ್ರವಲ್ಲದೆ ಇಡೀ ಡಿಆರ್‌ಐ ಪುಣೆ ಪ್ರಾದೇಶಿಕ ಘಟಕಕ್ಕೂ ಬೆದರಿಕೆಗಳನ್ನು ನೀಡಲಾಗಿದೆ ಎಂದು ಅಧಿಕಾರಿ ಆರೋಪಿಸಿದ್ದಾರೆ.

ಈ ವಿಷಯವನ್ನು ಪರಿಶೀಲಿಸುತ್ತಿರುವ ಪುಣೆ ಪೊಲೀಸರ ಸುಲಿಗೆ ವಿರೋಧಿ ಕೋಶಕ್ಕೆ ದೂರನ್ನು ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

## ವಾಟರ್‌ವೇಸ್ ಲೀಜರ್ ಟೂರಿಸಂ ಐಪಿಒ ಮಾರುಕಟ್ಟೆಗೆ

ಮುಂಬಯಿ,ಜೂ.19 - ಕೋರ್ಡೆಲಿಯಾ ಕ್ರೂಸ್ ಬ್ರ್ಯಾಂಡ್‌ನಡಿ ಕಾರ್ಯನಿರ್ವಹಿಸುವ ವಾಟರ್‌ವೇಸ್ ಲೀಜರ್ ಟೂರಿಸಂ ಲಿಮಿಟೆಡ್ ತನ್ನ ಆರಂಭಿಕ ಸಾರ್ವಜನಿಕ ಷೇರು ಮಾರಾಟಕ್ಕೆ (ಐಪಿಒ) ಪ್ರತಿ ಷೇರಿಗೆ 769ರೂ.ನಿಂದ 808 ರೂ.ಗಳ ದರ ನಿಗದಿಪಡಿಸಿದೆ. ಜೂ.23ರಿಂದ 25ರವರೆಗೆ ಹೂಡಿಕೆದಾರರು ಅರ್ಜಿ ಸಲ್ಲಿಸಬಹುದಾಗಿದ್ದು, ಕನಿಷ್ಠ 18 ಷೇರುಗಳಿಗೆ ಹಾಗೂ ಅದರ ಗುಣಿತಗಳಲ್ಲಿ ಹೂಡಿಕೆ ಮಾಡಬೇಕು. ಕಂಪನಿ 651.54 ಲಕ್ಷ ಈಕ್ವಿಟಿ ಷೇರುಗಳನ್ನು ಬಿಡುಗಡೆ ಮಾಡುತ್ತಿದೆ. ಸಂಗ್ರಹವಾಗುವ ಮೊತ್ತದಲ್ಲಿ 480 ಕೋಟಿ ರೂ.ಗಳನ್ನು ಸಾಲ, ಠೇವಣಿ ಹಾಗೂ ಗುತ್ತಿಗೆ ಪಾವತಿಗೆ ಬಳಸಲಾಗುವುದು. ಕಂಪನಿಯ ಎಂ.ವಿ. ಎಂಪ್ರೆಸ್ ಕ್ರೂಸ್‌ನಲ್ಲಿ 2,005 ಪ್ರಯಾಣಿಕರ ಸಾಮರ್ಥ್ಯ ಹಾಗೂ 796 ಕೇಬಿನ್‌ಗಳಿವೆ. ಶೀಘ್ರದಲ್ಲೇ ಎರಡು ಹೊಸ ಕ್ರೂಸ್ ಹಡಗುಗಳು ಸೇರ್ಪಡೆಯಾಗಲಿವೆ. 2025-26ರಲ್ಲಿ ಕಂಪನಿಯ ಆದಾಯ 580 ಕೋಟಿ ರೂ. ತಲುಪಿದ್ದು, 52 ಕೋಟಿ ರೂ. ನಿವ್ವಳ ಲಾಭ ದಾಖಲಿಸಿದೆ.

## ಷೇರು ಮಾರುಕಟ್ಟೆ

ಸೆನ್ಸೆಕ್ಸ್ : 76,802.90 + 607.08

ನಿಫ್ಟಿ : 24,013.10 + 154.90

**ಚಿನ್ನ**

22 ಕ್ಯಾರೆಟ್ : 1,33,700 ರೂ. (10 ಗ್ರಾಮ್‌ಗೆ)

24 ಕ್ಯಾರೆಟ್ : 1,45,860 ರೂ. (10 ಗ್ರಾಮ್‌ಗೆ)

ಬೆಳ್ಳಿ : 2,50,000 ರೂ. (ಒಂದು ಕೆಜಿಗೆ)

## ನಿತ್ಯ ಚಿಂತನ

ಜನರ ಆಟದಲ್ಲಿ ಮೋಸವಿರಬಹುದು. ಆದರೆ ದೇವರ ಆಟದಲ್ಲಿ ಎಂದಿಗೂ ಯಾರಿಗೂ ಮೋಸವಿರುವುದಿಲ್ಲ. ದೇವರ ಲೆಕ್ಕದಲ್ಲಿ ಯಾವುದೇ ತಾರತಮ್ಯವಿರುವುದಿಲ್ಲ. ಯಾರಿಗೆ ಏನು? ಯಾವಾಗ? ಸಿಗಬೇಕು ಅದು ಖಂಡಿತವಾಗಿಯೂ ಸಿಕ್ಕೇ ಸಿಗುತ್ತದೆ. ಕತ್ತಲೆಯ ನಂತರ ಬರುವ ಬೆಳಕು ಯಾವ ರೀತಿಯಲ್ಲಿ ಎಷ್ಟು ಆನಂದದ ವಾತಾವರಣವನ್ನು ಸೃಷ್ಟಿಸುತ್ತದೋ ಹಾಗೇ ಕಷ್ಟಗಳ ನಂತರ ಬರುವ ಸುಖ, ಆನಂದವೂ ಬಹಳ ಸಂತೋಷವನ್ನು ನೀಡುತ್ತದೆ. ಆದ್ದರಿಂದ ನಾವು ಚಿಂತಾಗ್ರಸ್ಥರಾಗಿರಬಾರದು. ಜೀವನದಲ್ಲಿ ಏನೆಲ್ಲಾ ನಡೆಯಲಿಕ್ಕಿದೆಯೋ, ಅನಭವುಸಲಿಕ್ಕಿದೆಯೋ ಅದು ನಡೆದೇ ನಡೆಯುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂಬ ದೃಢನಂಬಿಕೆಯೊಂದಿಗೆ ಬದುಕಿನಲ್ಲಿ ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ. ಕಳೆದು ಹೋದದ್ದನ್ನು ನೆನಪಿಸಿ, ಯೋಚಿಸಿ, ಬೇಸರ ಪಡುವುದಕ್ಕಿಂತ ಮುಂದೆ ಬರುವ ದಿನಗಳನ್ನು ಯಾವ ರೀತಿ ಸುಂದರವಾಗಿರಿಸಿಕೊಳ್ಳಬೇಕು ಎನ್ನುವುದರ ಬಗ್ಗೆ ಯೋಚಿಸುವ, ಯೋಗ್ಯ ಪರಿಹಾರವನ್ನು ಕಂಡುಕೊಳ್ಳುವ ಅಗತ್ಯವಿದೆ. ಜೀವನದಲ್ಲಿ ನಾವು ಯಾರನ್ನೂ ಬದಲಾಯಿಸಲು ಹೋಗಬಾರದು. ಸಮಯ ಮತ್ತು ಪರಿಸ್ಥಿತಿ ಎಲ್ಲರನ್ನೂ, ಎಲ್ಲವನ್ನೂ ಬದಲಾಯಿಸುತ್ತದೆ ಎಂಬ ತಿಳುವಳಿಕೆಯನ್ನು ಮೈಗೂಡಿಸಿಕೊಂಡು ಮುನ್ನಡೆಯಲು ಪ್ರಯತ್ನಿಸುವ ಅಗತ್ಯವಿದೆ. ಗಿಡಕ್ಕೆ ನೀರು ಹಾಕಿದಲ್ಲಿ ಯಾವ ರೀತಿ ಉತ್ತಮ ಫಲವನ್ನು ನಿರೀಕ್ಷಿಸಲು ಸಾಧ್ಯವೋ ಅದೇ ರೀತಿ ಮನಸ್ಸಿಗೆ ಒಳ್ಳೆಯ ಆಲೋಚನೆಗಳ ನೀರನ್ನು ಸುರಿದರೆ ಜೀವನ ಎನ್ನುವ ಮರದಿಂದ ಸುಂದರವಾದ, ರುಚಿಕರವಾದ ಹಣ್ಣುಗಳನ್ನು ಪಡೆಯಲು ಸಾಧ್ಯ ಎಂಬ ಜ್ಞಾನದೊಂದಿಗೆ ಬದುಕಿನ ಹಾದಿಯಲ್ಲಿ ಮುನ್ನಡೆವ ಅಗತ್ಯವಿದೆ. ಯಾವುದೇ ಯಶಸ್ಸು ಅಂತಿಮವಲ್ಲ. ಸೋಲು ಕೊನೆಯಲ್ಲ. ಸೋಲು ಮತ್ತು ಗೆಲುವನ್ನು ಸಾರಿದೂಗಿಸಿಕೊಂಡು ಸಾಗುವ ಧೈರ್ಯವೇ ಜೀವನ ಎಂಬುವುದನ್ನು ಅರಿತು ಬಾಳುವ ಅಗತ್ಯವಿದೆ.

- ಶ್ರೀಧರ್ ಉಚ್ಚಿಲ್ (99303 70553)

## ಸುಡೊಕು 1828

| | | | | | | | | |
|---|---|---|---|---|---|---|---|---|
| | | 2 | | | | 1 | | |
| | | | | 2 | 5 | 7 | 3 | |
| | 9 | 4 | | 6 | 7 | | | 2 |
| | 5 | | 4 | | 3 | | | 9 |
| | 8 | | | 9 | | | 7 | |
| 1 | | | 6 | | 8 | | 2 | |
| 6 | | | 7 | 4 | | 9 | 5 | |
| | 4 | 5 | 8 | 3 | | | | |
| | | 8 | | | | 6 | | |

MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1827

| | | | | | | | | |
|---|---|---|---|---|---|---|---|---|
| 9 | 1 | 6 | 2 | 3 | 7 | 4 | 5 | 8 |
| 8 | 2 | 3 | 4 | 5 | 9 | 1 | 7 | 6 |
| 4 | 5 | 7 | 1 | 6 | 8 | 3 | 9 | 2 |
| 5 | 6 | 8 | 7 | 1 | 2 | 9 | 3 | 4 |
| 1 | 7 | 4 | 9 | 8 | 3 | 2 | 6 | 5 |
| 2 | 3 | 9 | 5 | 4 | 6 | 8 | 1 | 7 |
| 7 | 4 | 1 | 8 | 9 | 5 | 6 | 2 | 3 |
| 3 | 8 | 5 | 6 | 2 | 1 | 7 | 4 | 9 |
| 6 | 9 | 2 | 3 | 7 | 4 | 5 | 8 | 1 |

## ಪದಬಂಧ - 1910



**ಎಡದಿಂದ ಬಲಕ್ಕೆ**

1.ಬಹಳ ಇಂಪಾದುದು -4
3.ಎಲ್ಲವನ್ನು ನೆನಪಿನಲ್ಲಿಟ್ಟುಕೊಳ್ಳುವುದು -4
5.ವಿಕಾರವಾದರೂ ಅರಳುವುದು-4
6.ಬಗೆಬಗೆಯಾದುದು -4
8.ಯೋಗ್ಯವಾಗುವಂತಿದೆ -4
10.ಮನಸ್ಸಿಗೆ ಸಂಬಂಧಿಸಿದ್ದು -4
12.ಪರಿಪರಿಯಾಗಿರುವ ಸಾಮಾನು -4
14.ಕೆಟ್ಟ ಅಪಮಾನ -4
15.ಮನೆ ಒಡೆಯ -4
16.ಗಂಡಸರು ತೊಡುವ ಯಜ್ಞೋಪವೀತ -4

**ಮೇಲಿನಿಂದ ಕೆಳಕ್ಕೆ**

1.ಮುಂಜಾವಿನಲ್ಲಿ ಹಾಡುವ ಸ್ತೋತ್ರ-4
2.ಸೂರ್ಯನಿಗೊಂದು ದಿನ -4
3.ಹೊಟ್ಟೆಕಿಚ್ಚಿಲ್ಲದ ಮಹರ್ಷಿಯ ಹೆಂಡತಿ -4
4.ಹೊಸತಾದ ಬೆಣ್ಣೆ -4
7.ವಿವಿಧ ಹಣ್ಣುಗಳ ಮಿಶ್ರಣ -4
9.ರೋಗಕ್ಕೆ ಉಪಚಾರ ಮಾಡುವವನು-4
10.ಮನುಷ್ಯನಿಗೆ ಸಂಬಂಧಪಟ್ಟದ್ದು -4
11.ಮುಖದ ಕಾಂತಿ ಕುಂದಿದೆ -4
12.ವಾಯುಪುತ್ರ -4
13.ಯುದ್ಧದಲ್ಲಿ ಹೋರಾಡುವ ಪರಾಕ್ರಮಿ -4

ಉತ್ತರ - 1909



# ಇಂದು ಅಫ್ಘಾನಿಸ್ತಾನ ವಿರುದ್ಧ ಅಂತಿಮ ಏಕದಿನ; ಕ್ಲೀನ್ ಸ್ವೀಪ್ ಸಾಧನೆಯತ್ತ ಟೀಮ್ ಇಂಡಿಯಾ ಚಿತ್ತ



ಚೆನ್ನೈ, ಜೂ.19 - ಅಫ್ಘಾನಿಸ್ತಾನ ವಿರುದ್ಧದ ನಾಳೆ ನಡೆಯಲಿರುವ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯಕ್ಕೆ ಟೀಮ್ ಇಂಡಿಯಾ ಸಜ್ಜಾಗಿದೆ. ಈಗಾಗಲೇ ಸರಣಿಯನ್ನು 2-0ಯಿಂದ ಮುನ್ನಡೆ ಸಾಧಿಸಿರುವ ಭಾರತ, ಮೂರನೇ ಪಂದ್ಯವನ್ನು ಗೆದ್ದು ಸರಣಿಯಲ್ಲಿ ಕ್ಲೀನ್ ಸ್ವೀಪ್ ಸಾಧಿಸುವ ಕನಸು ಕಾಣುತ್ತಿದೆ. ಇನ್ನು ಕೊನೆಯ ಪಂದ್ಯದಲ್ಲಿ ಗೆಲುವು ದಾಖಲಿಸಿ ಗೌರವ ಉಳಿಸಿಕೊಳ್ಳುವ ಆಸೆ ಅಫ್ಘಾನ್ ತಂಡದ್ದಾಗಿದೆ.

ಧರ್ಮಶಾಲಾದಲ್ಲಿ ನಡೆದಿದ್ದ ಮೊದಲ ಏಕದಿನ ಪಂದ್ಯವನ್ನು 7 ವಿಕೆಟ್‌ಗಳಿಂದ, ಲಕ್ನೋದಲ್ಲಿ ನಡೆದಿದ್ದ ಎರಡನೇ ಏಕದಿನ ಪಂದ್ಯವನ್ನು 170 ರನ್‌ಗಳಿಂದ ಗೆದ್ದು ಕೊಂಡಿದ್ದ ಭಾರತ, ಮೂರನೇ ಪಂದ್ಯ ಗೆದ್ದು ಕ್ಲೀನ್ ಸ್ವೀಪ್ ಸಾಧನೆ ಮಾಡುವ ಆಸೆ ಹೊಂದಿದೆ.

ಲಕ್ನೋದಲ್ಲಿ ನಡೆದಿದ್ದ ಎರಡನೇ ಏಕದಿನ ಪಂದ್ಯದಲ್ಲಿ ಟೀಮ್ ಇಂಡಿಯಾ ನಾಯಕ ಶುಭಮನ್ ಗಿಲ್ ಹಾಗೂ ಇಶಾನ್ ಕಿಶನ್ ಶತಕ ಬಾರಿಸಿ ಅಬ್ಬರಿಸಿದರು. ಅಲ್ಲದೆ ತಂಡ ದಾಖಲೆಯ ಮೊತ್ತವನ್ನು ಕಲೆ ಹಾಕುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದರು. ಈ ಇಬ್ಬರೂ ಆಟಗಾರರು ಮತ್ತೊಮ್ಮೆ ಬಿಗ್ ಇನಿಂಗ್ಸ್ ಕಟ್ಟುವ ವಿಶ್ವಾಸವನ್ನು ಹೊಂದಿದೆ. ಈ ಸರಣಿಯಲ್ಲಿ ಶುಭಮನ್ ಗಿಲ್ ಅಮೋಘ ಫಾರ್ಮ್‌ನಲ್ಲಿದ್ದು ಎಲ್ಲರ ಚಿತ್ತ ಕದ್ದಿದ್ದಾರೆ.

**ರೋಹಿತ್ ಮೇಲೆ ಒತ್ತಡ:** ಟೀಮ್ ಇಂಡಿಯಾದ ಸೂಪರ್‌ಸ್ಟಾರ್‌ಆಟಗಾರ ರೋಹಿತ್ ಶರ್ಮಾ ಅವರಿಗೆ ಮೂರನೇ ಪಂದ್ಯದಲ್ಲಿ ಬಿಗ್ ಇನಿಂಗ್ಸ್ ಕಟ್ಟಿ ತಮ್ಮನ್ನು ತಾವು ಸಾಬೀತು ಪಡಿಸಿಕೊಳ್ಳಲು ಸಿಗಲಿದೆ. ಇನ್ನು ನಾಲ್ಕನೇ ಕ್ರಮಾಂಕದಲ್ಲಿ ಶ್ರೇಯಸ್ ಅಯ್ಯರ್ ತಮ್ಮ ಮೇಲೆ ತಂಡ ಇಟ್ಟ ನಂಬಿಕೆಗೆ ಪೂರಕವಾಗಿ ಬ್ಯಾಟ್ ಮಾಡಬೇಕಿದೆ. ಕರ್ನಾಟಕದ ಕೆವಿಲ್ ರಾಹುಲ್ ಅವರು ಪರಿಸ್ಥಿತಿಗೆ ತಕ್ಕಂತೆ ಬ್ಯಾಟ್ ಮಾಡುವ ಕಲೆಯನ್ನು ಕರಗತ ಮಾಡಿಕೊಂಡಿದ್ದು ಭರವಸೆ ಮೂಡಿಸಿದ್ದಾರೆ.

ಇದೇ ಸರಣಿಯಲ್ಲಿ ಟೀಮ್ ಇಂಡಿಯಾಕ್ಕೆ ಪದಾರ್ಪಣೆ ಮಾಡಿರುವ ಬೌಲರ್ ಗೂರ್ನಾರ್ ಬ್ರಾರ್ ಬಿಗುವಿನ ದಾಳಿ ನಡೆಸಿ ತಂಡಕ್ಕೆ ಆಧಾರವಾಗಿದ್ದಾರೆ. ಹೀಗಾಗಿ ಇವರಿಗೆ ಮೂರನೇ ಏಕದಿನ ಪಂದ್ಯದಲ್ಲಿ ಆಡುವ ಅವಕಾಶ ಸಿಗುವುದು ಪಕ್ಕಾ ಎನ್ನಲಾಗುತ್ತಿದೆ. ಇನ್ನು ಎರಡನೇ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದ ಪ್ರಿನ್ಸ್ ಯಾದವ್ (2 ವಿಕೆಟ್) ಸ್ಥಿರ ಪ್ರದರ್ಶನ ನೀಡಿದ್ದರು. ಅರ್ಷದೀಪ್ ಸಿಂಗ್ ತಮ್ಮ ಅನುಭವ ಬಳಸಿಕೊಂಡು ಬೌಲ್ ಮಾಡಬಲ್ಲರು. ಈ ಸರಣಿಯಲ್ಲಿ ಕುಲ್‌ದೀಪ್ ಯಾದವ್ ವಿಕೆಟ್ ಪಡೆಯುವಲ್ಲಿ ವಿಫಲರಾಗಿದ್ದು ತಂಡದ ಚಿಂತೆಯನ್ನು ಹೆಚ್ಚಿಸಿದೆ. ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಬೌಲಿಂಗ್‌ನಲ್ಲಿ ಕಮಾಲ್ ಮಾಡಲು ಸಜ್ಜಾಗಿದ್ದಾರೆ. ಭಾರತ ಪರ ಈ ಸರಣಿಯಲ್ಲಿ ಮೂವರು ಆಟಗಾರರು ಪದಾರ್ಪಣೆ ಮಾಡಿದ್ದಾರೆ. ಎರಡು ಪಂದ್ಯಗಳನ್ನು ಆಡಿರುವ ಎಡಗೈ ವೇಗಿ ಅರ್ಶ್‌ದೀಪ್ ಸಿಂಗ್‌ಗೆ ವಿಶ್ರಾಂತಿ ನೀಡಿದರೆ ಆಗ ಹರ್ಷಿತ್ ರಾಣಾ ಆಡುವ ಸಾಧ್ಯತೆ ಅಧಿಕವಾಗಿದೆ. ಕಳೆದ ಪಂದ್ಯದಲ್ಲಿ ವಿಫಲರಾದರೂ ಯಶಸ್ವಿ ಜೈಸ್ವಾಲ್‌ಗೆ ಮತ್ತೊಂದು ಅವಕಾಶ ಸಿಗಬಹುದು.

**ಗೆಲುವಿಗೆ ರಣತಂತ್ರ:** ಅಫ್ಘಾನಿಸ್ತಾನ ತಂಡದ ಟಾಪ್ ಆರ್ಡರ್‌ಬ್ಯಾಟರ್‌ಗಳಾದ ರಹಮಾನುಲ್ಲಾ ಗುರ್ಬಾಜ್, ಇಬ್ರಾಹಿಂ ಜದ್ರಾನ್, ಸೇದಿಕುಲ್ಲಾ ಅಟಲ್, ರಹಮತ್ ಶಾ ತಮ್ಮ ಮೇಲೆ ತಂಡ ಇಟ್ಟ ನಂಬಿಕೆಗೆ ಪೂರಕವಾಗಿ ಬ್ಯಾಟ್ ಮಾಡಬೇಕಿದೆ. ಎರಡನೇ ಏಕದಿನ ಪಂದ್ಯದಲ್ಲಿ ನಂಗೇಲಿಯ ಖರೋಟೆ ಬಿಗುವಿನ ದಾಳಿ ನಡೆಸಿ ತಂಡಕ್ಕೆ ಆಧಾರವಾಗಿದ್ದರು. ಉಳಿದಂತೆ ಗಜನ್ಫರ್, ಮೊಹಮ್ಮದ್ ಸಲೀಂ, ಬಿಲಾಲ್ ಸಾಮಿ, ರಶೀದ್ ಖಾನ್ ಎದುರಾಳಿ ಬ್ಯಾಟರ್‌ಗಳನ್ನು ಕಾಡಲು ಯೋಜನೆ ರೂಪಿಸಿಕೊಂಡಿದ್ದಾರೆ. ದೇಶದ ಐಕಾನಿಕ್ ಸ್ಟೇಡಿಯಂಗಳಲ್ಲಿ ಒಂದಾಗಿರುವ ಚೆನ್ನೈನಲ್ಲಿರುವ ಎಂ.ಎ. ಚಿದಂಬರಂ ಕ್ರೀಡಾಂಗಣವು ಇತ್ತೀಚಿನ ನವೀಕರಣದ ನಂತರ ತನ್ನ ಮೊದಲ ಏಕದಿನ ಪಂದ್ಯವನ್ನು ಆಯೋಜಿಸಲು ಸಜ್ಜಾಗಿದೆ. ಈ ಹಿಂದೆ ಈ ಕ್ರೀಡಾಂಗಣದ ಪಿಚ್ ಸ್ಪಿನ್ ಸ್ನೇಹಿಯಾಗಿತ್ತು ಮತ್ತು ಮೊದಲು ಬ್ಯಾಟಿಂಗ್ ನಡೆಸಿದ ತಂಡಕ್ಕೆ ನೆರವು ನೀಡುತ್ತಿತ್ತು. ಆದರೆ ನವೀಕರಣಗೊಂಡ ಬಳಿಕ ಇಲ್ಲಿ ನಡೆಯುತ್ತಿರುವ ಮೊದಲ ಪಂದ್ಯ ಇದಾದ ಕಾರಣ ಪಿಚ್ ಹೇಗೆ ವರ್ತಿಸಲಿದೆ ಎನ್ನುದು ಕಾದು ನೋಡಬೇಕಿದೆ.

**ಪಂದ್ಯಾರಂಭ : ಮಧ್ಯಾಹ್ನ 1.30ಕ್ಕೆ**

# ವಿಶ್ವಕಪ್ ಫುಟ್‌ಬಾಲ್ : ಕೆನಡಾ, ಸ್ವಿಟ್ಜರ್‌ಲೆಂಡ್ ತಂಡಗಳಿಗೆ ಜಯ



ವ್ಯಾಂಕೋವರ್, ಜೂ.19 - ಸಹ-ಆತಿಥೇಯ ಕೆನಡಾವು ಕತಾರ್ ತಂಡವನ್ನು 6-0 ಗೋಲುಗಳ ಅಂತರದಿಂದ ಮಣಿಸಿದರೆ, ಮತ್ತೊಂದು ಪಂದ್ಯದಲ್ಲಿ ಸ್ವಿಟ್ಜರ್‌ಲೆಂಡ್ ತಂಡ 4-1 ಗೋಲುಗಳಿಂದ ಬೋಸ್ನಿಯಾವನ್ನು ಸೋಲಿಸಿತು.

ಕೆನಡಾ ಪ್ರಧಾನಿ ಮಾರ್ಕ್ ಕಾರ್ನೆ ಅವರು ತಂಡದ ಜೆರ್ಸಿ ಧರಿಸಿ ಕ್ರೀಡಾಂಗಣದಲ್ಲಿ ಹಾಜರಿದ್ದು ಆಟಗಾರರನ್ನು ಹುರಿದುಂಬಿಸಿದ್ದು ವಿಶೇಷವಾಗಿತ್ತು. ಕೋಚ್ ಜೆಸ್ಸಿ ಮಾರ್ಷ್ ತರಬೇತಿಯಲ್ಲಿ ಪಳಗಿರುವ ಕೆನಡಾ, ಮುಂದಿನ ಪಂದ್ಯದಲ್ಲಿ ಸ್ವಿಟ್ಜರ್‌ಲೆಂಡ್ ವಿರುದ್ಧ ಕೇವಲ ಒಂದು ಅಂಕ ಗಳಿಸಿದರೂ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಲಿದೆ.

ಜೊನಾಥನ್ ಡೇವಿಡ್ ಅವರು ಆಕರ್ಷಕ ಹ್ಯಾಟ್ರಿಕ್ ಗೋಲು ಹೊಡೆದು ತಂಡದ ಗೆಲುವಿನ ರೂವಾರಿಯಾದರು. ಉಳಿದಂತೆ ಸೈಲ್ ಲಾರಿನ್ ಮತ್ತು ನಾಥನ್ ಸಲಿಬಾ ತಲಾ ಒಂದು ಗೋಲು ಬಾರಿಸಿದರು. ಪಂದ್ಯದ 51ನೇ ನಿಮಿಷದಲ್ಲಿ ಕತಾರ್‌ನ ಆಸೀಂ ಅವರು ಕೆನಡಾದ ಮಿಡ್‌ಫೀಲ್ಡರ್‌ಇಸ್ಮಾಯಿಲ್ ಕೋನೆ ಅವರನ್ನು ಬಲವಾಗಿ ತಳ್ಳಿದರು. ಈ ವೇಳೆ ಕೋನೆ ಎಡಗಾಲಿಗೆ ತೀವ್ರ ಗಾಯವಾಯಿತು. ವಿಎಆರ್‌ಪರಿಶೀಲನೆ ಬಳಿಕ ಆಸೀಂ ಅವರಿಗೆ ಕೆಂಪು ಕಾರ್ಡ್ ನೀಡಿ ಮೈದಾನದಿಂದ ಹೊರಗಟ್ಟಲಾಯಿತು. ಇದಕ್ಕೂ ಮುನ್ನ ಪಂದ್ಯದ ಮೊದಲಾರ್ಧದಲ್ಲಿ ಗೋಲು ಗಳಿಸುವ ಅವಕಾಶವನ್ನು ನಿಯಮಬಾಹಿರವಾಗಿ ತಡೆದಿದ್ದ ಕ್ಕಾಗಿ ಕತಾರ್‌ನ ಎಲ್-ಅಮಿನ್ ಅವರೂ ಕೆಂಪು ಕಾರ್ಡ್ ಪಡೆದು ಹೊರನಡೆದಿದ್ದರು. ಹೀಗಾಗಿ ಕತಾರ್‌ತಂಡ 9 ಆಟಗಾರರಿಗೆ ಸೀಮಿತಗೊಂಡು ಸೋಲೊಪ್ಪಿಕೊಂಡಿತು.

**ಸ್ವಿಟ್ಜರ್‌ಲೆಂಡ್ ಗೆಲುವು...** ಸ್ವಿಟ್ಜರ್‌ಲೆಂಡ್ ತಂಡ ಬೋಸ್ನಿಯಾವನ್ನು 4-1 ಗೋಲುಗಳಿಂದ ಸೋಲಿಸಿತು. ಈ ಪಂದ್ಯದಲ್ಲಿ ಬೋಸ್ನಿಯಾ ಆಟಗಾರರು ಸ್ವಿಸ್ ಎದುರು ಸುಲಭವಾಗಿ ಮಂಡಿಯೂರಿದರು.

**ದಕ್ಷಿಣ ಕೊರಿಯಾ ಮಣಿಸಿದ ಮೆಕ್ಸಿಕೋ :** ಮೆಕ್ಸಿಕೋ ತಂಡವು ದಕ್ಷಿಣ ಕೊರಿಯಾವನ್ನು 1-0 ಅಂತರದಿಂದ ಸೋಲಿಸುವ ಮೂಲಕ ಗ್ರೂಪ್ ಎ ನಲ್ಲಿ ಅಗ್ರ ಸ್ಥಾನವನ್ನು ಪಡೆದುಕೊಂಡಿತು ಮಾತ್ರವಲ್ಲದೆ, 2026ರ ವಿಶ್ವಕಪ್ ನ ನಾಕೌಟ್ ಹಂತ ತಲುಪಿದ ಮೊದಲ ತಂಡವಾಯಿತು. ಗಮನಾರ್ಹವಾಗಿ, ಮೆಕ್ಸಿಕೋ ತನ್ನ ಆರಂಭಿಕ ಎರಡೂ ಪಂದ್ಯಗಳನ್ನು ಗೋಲು ಬಿಟ್ಟುಕೊಡದೆ ಗೆದ್ದಿತು. ಇದು 1998ರಲ್ಲಿ ಫ್ರಾನ್ಸ್ ನಂತರ ತನ್ನ ಮೊದಲ ಎರಡು ವಿಶ್ವಕಪ್ ಪಂದ್ಯಗಳನ್ನು ಕ್ಲೀನ್ ಶೀಟ್ ನೊಂದಿಗೆ ಗೆದ್ದ ಮೊದಲ ಆತಿಥೇಯ ರಾಷ್ಟ್ರವಾಯಿತು.

ಈ ಗೆಲುವಿನೊಂದಿಗೆ, ಮೆಕ್ಸಿಕೋ ಗ್ರೂಪ್ ಎ ವಿಜೇತರಾಗಿ ಮುಂದಿನ ಸುತ್ತಿಗೆ ಮುನ್ನಡೆದಿದೆ. ಜೂನ್ 30 ರಂದು ಮೆಕ್ಸಿಕೋ ನಗರದಲ್ಲಿ ನಡೆಯುವ 32ನೇ ಸುತ್ತಿನ ಪಂದ್ಯದಲ್ಲಿ ತಂಡವು ಗ್ರೂಪ್ ಸಿ, ಇ, ಎಫ್, ಹೆಚ್ ಅಥವಾ ಐ ನಿಂದ ಮೂರನೇ ಸ್ಥಾನದಲ್ಲಿರುವ ತಂಡವನ್ನು ಎದುರಿಸಲಿದೆ. ಮೆಕ್ಸಿಕೋ ತನ್ನ ನಾಕೌಟ್ ಪಂದ್ಯವನ್ನು ತವರಿನಲ್ಲಿ ಆಡುವ ಲಾಭವನ್ನು ಪಡೆಯಬಹುದಾಗಿದೆ.

**ಅಪದ್ಬಾಂಧವನಾದಗೋಲ್ ಕೀಪರ್!** ಪಂದ್ಯದಕೊನೆಯ ನಿಮಿಷಗಳಲ್ಲಿ ದಕ್ಷಿಣಕೊರಿಯಾ ಸಮಬಲ ಸಾಧಿಸುವ ಹತ್ತಿರಕ್ಕೆ ಬಂದಿತು, ಆದರೆ ಮೆಕ್ಸಿಕೋದ ಗೋಲ್ ಕೀಪರ್‌ರಾಂಗೆಲ್ ತಂಡದ ಮುನ್ನಡೆಯನ್ನು ಕಾಯ್ದುಕೊಳ್ಳಲು ಅದ್ಭುತವಾದ ಸೇವ್‌ಗಳನ್ನು ಮಾಡಿದರು. ಕೊರಿಯಾ ನಡೆಸಿದ ಸತತ ಎರಡು ಗೋಲ್ ಪ್ರಯತ್ನಗಳನ್ನು ತಡೆದರು. ರೇಂಗೆಲ್ ಅವರ ಅದ್ಭುತ ಪ್ರದರ್ಶನವು ಮೆಕ್ಸಿಕೋದ 1-0 ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

# ಅಮೆರಿಕದಲ್ಲಿ ಇರಾನ್ ತಂಡಕ್ಕೆ ಪ್ರಯಾಣ ನಿರ್ಬಂಧ; ಫಿಫಾಗೆ ದೂರು



ನ್ಯೂಯಾರ್ಕ್, ಜೂ.19 - ಫಿಫಾ ವಿಶ್ವಕಪ್ ಟೂರ್ನಿಯ ಸಹ ಆತಿಥೇಯ ರಾಷ್ಟ್ರ ಅಮೆರಿಕ, ರಾಷ್ಟ್ರೀಯ ತಂಡದ ಮೇಲೆ ವಿಧಿಸಲಾದ ಪ್ರಯಾಣ ನಿಯಮಗಳ ಕುರಿತು ಇರಾನ್‌ನ ಫುಟ್‌ಬಾಲ್ ಫೆಡರೇಶನ್ ಫಿಫಾಗೆ ದೂರು ನೀಡಲು ಮುಂದಾಗಿದೆ. ಪಂದ್ಯದ ಸಿದ್ಧತೆಗಳು ಮತ್ತು ಆಟಗಾರರ ಚೇತರಿಕೆಗೆ ಅಡ್ಡಿಯಾಗಿವೆ ಎಂದು ಇರಾನ್ ಫುಟ್‌ಬಾಲ್ ಫೆಡರೇಶನ್ ಹೇಳಿದೆ.

ಸ್ಪರ್ಧೆಯ ಮೊದಲು ತಂಡದ ಯೋಜನಾ ಪ್ರಕ್ರಿಯೆಯ ಭಾಗವಾಗಿ ಪ್ರಯಾಣದ ಬೇಡಿಕೆಗಳನ್ನು ಸರಾಗಗೊಳಿಸುವ ಗುರಿಯನ್ನು ಹೊಂದಿರುವ ವಿನಂತಿಗಳನ್ನು ಪದೇ ಪದೇ ತಿರಸ್ಕರಿಸಲಾಗಿದೆ ಎಂದು ಫೆಡರೇಶನ್ ಹೇಳಿದೆ. ಜೂನ್ 21 ರಂದು ಲಾಸ್ ಏಂಜಲೀಸ್‌ನಲ್ಲಿ ಇರಾನ್ ಮತ್ತು ಬೆಲ್ಜಿಯಂ ನಡುವಿನ ಪಂದ್ಯಕ್ಕೂ ಮುನ್ನ ಹೊಸ ವಿವಾದದ ಅಲೆ ಎದ್ದಿದೆ.

ಇರಾನಿನ ಅಧಿಕಾರಿಗಳು ತಂಡವು ಪಂದ್ಯ ಆರಂಭವಾಗುವ ಎರಡು ದಿನಗಳ ಮೊದಲು ಕ್ಯಾಲಿಫೋರ್ನಿಯಾಗೆ ಆಗಮಿಸಲು ಅನುಮೋದನೆ ಕೋರಿದ್ದರು, ಮಧ್ಯಾಹ್ನದ ಸ್ಥಳೀಯ ಆರಂಭದ ಸಮಯಕ್ಕೆ ಸಂಬಂಧಿಸಿದ ತಯಾರಿ ಅವಶ್ಯಕತೆಗಳನ್ನು ಉಲ್ಲೇಖಿಸಿದ್ದರು. ಆದರೆ ಸಂಘಟಕರು ವಿನಂತಿಯನ್ನು ತಿರಸ್ಕರಿಸಿದ್ದಾರೆ ಎಂದು ಫೆಡರೇಶನ್ ಹೇಳಿದೆ.

ಟೂರ್ನಮೆಂಟ್‌ಗಾಗಿ ತನ್ನ ತಯಾರಿ ವೇಳಾಪಟ್ಟಿಯನ್ನು ಬಹಳ ಮುಂಚಿತವಾಗಿ ಸಲ್ಲಿಸಿದ್ದರೂ, ಇರಾನ್‌ನ ರಾಷ್ಟ್ರೀಯ ಫುಟ್‌ಬಾಲ್ ತಂಡವು ಮತ್ತೊಮ್ಮೆ ಸಂಘಟಕರು ವಿಧಿಸಿರುವ ನಿರ್ಬಂಧಗಳನ್ನು ಎದುರಿಸಿದೆ, ಇದು ಅದರ ತಾಂತ್ರಿಕ ಸಿಬ್ಬಂದಿಯ ಯೋಜನೆಗಳ ಅನುಷ್ಠಾನದ ಮೇಲೆ ಪರಿಣಾಮ ಬೀರುತ್ತದೆ ಎಂದು ಇರಾನ್ ಫೆಡರೇಶನ್ ವಕ್ತಾರರು ಎಎಫ್‌ಪಿಗೆ ತಿಳಿಸಿದ್ದಾರೆ. ಸ್ಥಳೀಯ ಸಮಯ ಮಧ್ಯಾಹ್ನ 12 ಗಂಟೆಗೆ ಲಾಸ್ ಏಂಜಲೀಸ್‌ನಲ್ಲಿ ಪಂದ್ಯ ನಡೆಯುವುದರಿಂದ, ಇರಾನ್‌ನ ಫುಟ್‌ಬಾಲ್ ಫೆಡರೇಶನ್ ತಂಡವು ಪಂದ್ಯಕ್ಕೆ ಎರಡು ದಿನಗಳ ಮೊದಲು ಲಾಸ್ ಏಂಜಲೀಸ್‌ಗೆ ಪ್ರಯಾಣಿಸಲು ಅವಕಾಶ ನೀಡಬೇಕೆಂದು ವಿನಂತಿಸಿತು. ಆಟಗಾರರು ಪಂದ್ಯದ ಪರಿಸ್ಥಿತಿಗಳಿಗೆ ಹೊಂದಿಕೊಳ್ಳಲು, ಅವರ ಅಂತಿಮ ತರಬೇತಿ ಅವಧಿಯನ್ನು ಪೂರ್ಣಗೊಳಿಸಲು ಮತ್ತು ಸಿದ್ಧತೆಗಳನ್ನು ಅಂತಿಮಗೊಳಿಸಲು ಸಾಕಷ್ಟು ಸಮಯವನ್ನು ಒದಗಿಸುವುದು ಇದರ ಉದ್ದೇಶವಾಗಿತ್ತು. ಫೆಡರೇಶನ್ ಮಂಡಿಸಿದ ತಾಂತ್ರಿಕ ಕಾರಣಗಳ ಹೊರತಾಗಿಯೂ, ವಿನಂತಿಯನ್ನು ಮತ್ತೊಮ್ಮೆ ನಿರಾಕರಿಸಲಾಯಿತ್ತು ಎಂದು ವಕ್ತಾರರು ಹೇಳಿದ್ದಾರೆ.

ಲಾಸ್ ಏಂಜಲೀಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಇರಾನ್‌ನ ಆರಂಭಿಕ ಪಂದ್ಯ 2-2 ಡ್ರಾದಲ್ಲಿ ಕೊನೆಗೊಂಡ ನಂತರ ಫೆಡರೇಶನ್ ಕಳವಳ ವ್ಯಕ್ತಪಡಿಸಿದೆ. ಆ ಪಂದ್ಯದ ನಂತರ, ನಿಯೋಗವು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಉಳಿಯುವ ಬದಲು ಮೆಕ್ಸಿಕೊಗೆ ಹಿಂತಿರುಗಬೇಕಾಯಿತು. ಮುಖ್ಯ ಕೋಚ್ ಅಮೀರ್‌ಘಲೆನೊಯಿ ಈ ವ್ಯವಸ್ಥೆಯು ಸವಾಲುಗಳನ್ನು ಹೆಚ್ಚಿಸಿದೆ ಎಂದು ಹೇಳಿದ್ದರು.

# ನನ್ನೊಂದಿಗೆ ಅಖಾಡಕ್ಕೆ ಧುಮುಕುವ ತಾಕತ್ತು ನಿಮ್ಮಲ್ಲಿದೆಯೇ?': ಹರ್‌ಭಜನ್ ಸಿಂಗ್‌ಗೆ ಸವಾಲೆಸೆದ ಎಸ್ ಶ್ರೀಶಾಂತ್



ಹೊಸದಿಲ್ಲಿ, ಜೂ.19 - 2008ರಲ್ಲಿ ಇಂಡಿಯನ್ ಪ್ರೀಮಿಯರ್‌ಲೀಗ್‌ನಲ್ಲಿ ನಡೆದ ಕುಖ್ಯಾತ 'ಸ್ಲ್ಯಾಪ್‌ಗೇಟ್' ಘಟನೆಯಿಂದ ಪ್ರೇರಿತವಾದ ಜಾಹೀರಾತನ್ನು ದಂತಕಥೆ ಸ್ಪಿನ್ನರ್ ಹರ್‌ಭಜನ್ ಸಿಂಗ್ ಚಿತ್ರೀಕರಿಸಿದಾಗಿನಿಂದ ಭಾರತದ ಮಾಜಿ ಆಟಗಾರರಾದ ಶ್ರೀಶಾಂತ್ ಮತ್ತು ಭಜ್ಜಿ ನಡುವಿನ ಸಂಬಂಧವು ಇನ್ನೂ ಕಹಿಯಾಗುತ್ತಲೇ ಇದೆ. ಕ್ರೀಡೆಯ ಅತಿದೊಡ್ಡ ವಿವಾದಗಳಲ್ಲಿ ಒಂದಾದ ಹಳೆಯ ಗಾಯಗಳನ್ನು ಮಾಜಿ ಕ್ರಿಕೆಟಿಗರು ಮರೆತಂತೆ ಕಂಡುಬಂದರು; ಆದಾಗ್ಯೂ, ಹರ್‌ಭಜನ್ ಜಾಹೀರಾತನ್ನು ಚಿತ್ರೀಕರಿಸಿದ ನಂತರ ಅದು ಮತ್ತೊಮ್ಮೆ ವಿವಾದಕ್ಕೆ ಕಾರಣವಾಯಿತು. ಲಲ್ಲಂಟಾಪ್ ಜೊತೆಗಿನ ಸಂವಾದದ ವೇಳೆ ಎಸ್ ಶ್ರೀಶಾಂತ್ ಅವರಿಗೆ ಹರ್‌ಭಜನ್ ಬಾಕ್ಸಿಂಗ್ ಗೇರ್ ಧರಿಸಿರುವ ಹಳೆಯ ಫೋಟೊವನ್ನು ತೋರಿಸಲಾಯಿತು. ಆಗ ಅವರು, ಬಾಕ್ಸಿಂಗ್ ರಿಂಗ್‌ನಲ್ಲಿಯೇ ವಿಷಯಗಳನ್ನು ಇತ್ಯರ್ಥಪಡಿಸಿಕೊಳ್ಳಲು ಸಿದ್ಧವಾಗಿದ್ದೇನೆ ಎಂದು ಅವರು ಹರ್‌ಭಜನ್‌ಗೆ ನೇರ ಸವಾಲು ಹಾಕಿದರು.

'ಇದೇ ದೃಶ್ಯ, ನಿಮಗೆ ತಾಕತ್ ಇದೆಯೇ? ನನ್ನ ಜೊತೆ ಅಖಾಡಕ್ಕೆ ಇಳಿಯಲು ಧೈರ್ಯವಿದೆಯೇ? ನಿಮಗೆ ಇದು ಸಾಧ್ಯವೇ? ಎಂದು ನಾನು ಅವರನ್ನು ಕೇಳುತ್ತಿದ್ದೇನೆ. ನನ್ನ ಜೊತೆ ಅಖಾಡಕ್ಕೆ ಧುಮುಕಲು ನಿಮಗೆ ಧೈರ್ಯವಿದೆಯೇ? ಇದೇ ಕೈಗವಸು ಧರಿಸಿ... ಇದು ನಟನೆ ಅಲ್ಲ, ನಾನು ನಗುತ್ತಿದ್ದೇನೆ. ನೀನು ನಗುತ್ತಿಲ್ಲ, ನೀವು ಏನು ಮಾಡುತ್ತಿದ್ದೀರಿ ಎಂದು ನನಗೆ ತಿಳಿದಿಲ್ಲ. ನೋಡೋಣ. ಇದು ಮುಕ್ತ ಸವಾಲು' ಎಂದು ಶ್ರೀಶಾಂತ್ ಹೇಳಿದರು.

'ನಾನು ಸದ್ಯ ಬೇರ್‌ನಕಲ್ ಫೈಟ್ ಲೀಗ್ ನಲ್ಲಿದ್ದೇನೆ ಮತ್ತು ನಾನು ಕಾನರ್‌ಮೆಕ್‌ಗ್ರೆಗರ್ ಅವರ ವಿಡಿಯೋದ ಪ್ರಮುಖ ಪ್ರಾಯೋಜಕರಲ್ಲಿ ಒಬ್ಬನಾಗಿದ್ದೇನೆ; ನನ್ನ ಒಳ್ಳೆಯ ಸ್ನೇಹಿತರಲ್ಲಿ ಒಬ್ಬರು ಅದನ್ನು ಪ್ರಾಯೋಜಿಸಿದ್ದಾರೆ, ಆದ್ದರಿಂದ ಪ್ರಚಾರವೂ ಈಗಾಗಲೇ ಮುಗಿದಿದೆ. ಭಜ್ಜಿ (ಹರ್‌ಭಜನ್ ಸಿಂಗ್) ನಿಮಗೆ ನಾನು ಸವಾಲು ಹಾಕುತ್ತಿದ್ದೇನೆ' ಎಂದು ಅವರು ಹೇಳಿದರು.

ಭಜ್ಜಿ, ನಾನು ನಿಮಗೆ ಸವಾಲು ಹಾಕುತ್ತೇನೆ. ನಿಮಗೆ ಮತ್ತು ನನಗೆ ಕಪಾಳಮೋಕ್ಷದಿಂದ ಇಷ್ಟೊಂದು ಸಮಸ್ಯೆ ಇದ್ದರೆ ಮತ್ತು ನೀವು ಇಷ್ಟೊಂದು ಸಂಪಾದಿಸಿದರೆ... ನಾನು ಕೂಡ ಸಂಪಾದಿಸುವಂತಾಗಲಿ. ರಿಂಗ್‌ಗೆ ಬನ್ನಿ. ನಾನು ನಿಮ್ಮನ್ನು ಹೃದಯಪೂರ್ವಕವಾಗಿ ಕರೆಯುತ್ತಿದ್ದೇನೆ. ನಿಮಗೆ ಸ್ವಲ್ಪ ಸ್ವಾಭಿಮಾನವಿದ್ದರೆ, ಜಾಹೀರಾತುಗಳು ಮತ್ತು ಅದನ್ನೆಲ್ಲಾ ಮಾಡಬಾರದು. ನಿಜವಾದ ರೀತಿಯಲ್ಲಿ, ಎಲ್ಲಾ ಮಲಯಾಳಿಗಳು ಮತ್ತು ಎಲ್ಲ ಸರ್ದಾರ್‌ಗಳಿಗಾಗಿ, ದಯವಿಟ್ಟು ಬನ್ನಿ. ನಾನು ಕಾಯುತ್ತಿದ್ದೇನೆ' ಎಂದು ಅವರು ಹೇಳಿದರು.

ಮುಂಬೈ ಇಂಡಿಯನ್ಸ್ (ಎಂಐ) ಮತ್ತು ಪಂಜಾಬ್ ಕಿಂಗ್ಸ್ (ಆಗ ಕಿಂಗ್ಸ್ ಇಲೆವೆನ್ ಪಂಜಾಬ್) ನಡುವಿನ ಐಪಿಎಲ್ 2008ನೇ ಆವೃತ್ತಿಯ ಪಂದ್ಯದ ವೇಳೆ ಈ ಘಟನೆ ನಡೆದಿತ್ತು. ಪಂದ್ಯದ ನಂತರದ ಹ್ಯಾಂಡ್‌ಶೇಕ್ ಸಮಯದಲ್ಲಿ ಹರ್ಭಜನ್ ಸಿಂಗ್ ವೇಗಿ ಶ್ರೀಶಾಂತ್ ಅವರಿಗೆ ಕಪಾಳಮೋಕ್ಷ ಮಾಡಿದ್ದರು. ಆಗ ಹರ್ಭಜನ್ ಮುಂಬೈ ತಂಡದ ನಾಯಕರಾಗಿದ್ದರು ಮತ್ತು ಅವರ ತಂಡವು ಪಂಜಾಬ್ ವಿರುದ್ಧ 66 ರನ್‌ಗಳ ಸೋಲನ್ನು ಎದುರಿಸಿತ್ತು. ಈ ಘಟನೆಯಿಂದಾಗಿ ಹರ್‌ಭಜನ್ ಸಿಂಗ್ ಅವರನ್ನು ಎಂಟು ಪಂದ್ಯಗಳಿಂದ ನಿಷೇಧ ಹೇರಲಾಯಿತು.

# ಐಸಿಸಿ ಮಹಿಳಾ ಟಿ20 ವಿಶ್ವಕಪ್: ಸ್ಕಾಟ್ಲೆಂಡ್ ವಿರುದ್ಧ ವೆಸ್ಟ್ ಇಂಡೀಸ್‌ಗೆ 7 ರನ್‌ಗಳ ಜಯ



ಲೀಡ್ಸ್, ಜೂ. 19 - ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಗುರುವಾರ ಸ್ಕಾಟ್ಲೆಂಡ್ ತಂಡವನ್ನು ಏಳು ರನ್‌ಗಳಿಂದ ಸೋಲಿಸುವ ಮೂಲಕ ವೆಸ್ಟ್ ಇಂಡೀಸ್ ತನ್ನ ಗೆಲುವಿನ ಓಟವನ್ನು ಮುಂದುವರಿಸಿದೆ. ಸ್ಕಾಟ್ಲೆಂಡ್ ಗೆಲ್ಲಲು 154 ರನ್‌ಗಳ ಅಗತ್ಯವಿತ್ತು ಮತ್ತು ತಂಡವು 18 ಓವರ್‌ಗಳಲ್ಲಿ ಐದು ವಿಕೆಟ್‌ಗಳಿಗೆ 132 ರನ್‌ಗಳನ್ನು ಗಳಿಸಿತ್ತು. ನಂತರ ವೇಗಿ ಆಲಿಯಾ ಅಲಿನ್ ಪಂದ್ಯವನ್ನು ವೆಸ್ಟ್ ಇಂಡೀಸ್ ಕಡೆಗೆ ತಿರುಗಿಸಿದರು. 19 ನೇ ಓವರ್‌ನಲ್ಲಿ ಡಾರ್ಸಿ ಕಾರ್ಟರ್(59) ಸೇರಿದಂತೆ ಅವರು ಮೂರು ವಿಕೆಟ್‌ಗಳನ್ನು ಪಡೆದರು. ಕೊನೆಯ ಓವರ್‌ನಲ್ಲಿ ಸ್ಕಾಟ್ಲೆಂಡ್‌ಗೆ 17 ರನ್‌ಗಳು ಬೇಕಾಗಿದ್ದವು ಆದರೆ ಕೊನೆಯ ಎಸೆತದಲ್ಲಿ ತಂಡವು 146 ರನ್‌ಗಳಿಗೆ ಸೀಮಿತವಾಯಿತು.

ಗುಂಪು ಎರಡರಲ್ಲಿ ಇದುವರೆಗೆ ವೆಸ್ಟ್ ಇಂಡೀಸ್ ಮತ್ತು ಇಂಗ್ಲೆಂಡ್ ಮಾತ್ರ ತಮ್ಮ ಎರಡೂ ಪಂದ್ಯಗಳನ್ನು ಗೆದ್ದಿವೆ. ಗುಂಪಿನಿಂದ ಅಗ್ರ ಎರಡು ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯುತ್ತವೆ. ಸ್ಕಾಟ್ಲೆಂಡ್ ತಂಡವು ಎರಡೂ ಇನ್ನಿಂಗ್ಸ್‌ಗಳಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಸಂಕಷ್ಟಕ್ಕೆ ಸಿಲುಕಿಸಿತು. ಮೊದಲು, ಶಿಸ್ತುಬದ್ಧ ಬೌಲಿಂಗ್ ಮತ್ತು ಉತ್ತಮ ಫೀಲ್ಡಿಂಗ್‌ನಿಂದಾಗಿ, ತಂಡವು ವೆಸ್ಟ್ ಇಂಡೀಸ್ ತಂಡವನ್ನು 18 ಓವರ್‌ಗಳಲ್ಲಿ ಆರು ವಿಕೆಟ್‌ಗಳಿಗೆ 124 ರನ್‌ಗಳಿಗೆ ಸೀಮಿತಗೊಳಿಸಿತು. ಆದಾಗ್ಯೂ, ಅನುಭವಿ ಸ್ಟೆಫಾನಿ ಟೇಲರ್‌ತಂಡವನ್ನು 150 ರನ್‌ಗಳ ಗಡಿ ದಾಟಿಸಿದರು. ಸ್ಟೆಫನಿ 19 ಎಸೆತಗಳಲ್ಲಿ ಅಜೇಯ 47 ರನ್ ಮತ್ತು ಬೌಂಡರಿಗಳಿಂದ 34 ರನ್ ಗಳಿಸಿ ವೆಸ್ಟ್ ಇಂಡೀಸ್ 6 ವಿಕೆಟ್‌ಗೆ 153 ರನ್ ಗಳಿಸಲು ಸಹಾಯ ಮಾಡಿದರು. ವೆಸ್ಟ್ ಇಂಡೀಸ್ ಕೊನೆಯ ಎರಡು ಓವರ್‌ಗಳಲ್ಲಿ 29 ರನ್‌ಗಳನ್ನು ಸೇರಿಸಿತು, ಅದರಲ್ಲಿ ಸ್ಟೆಫಾನಿ 26 ರನ್‌ಗಳನ್ನು ಗಳಿಸಿದರು. ಸ್ಕಾಟ್ಲೆಂಡ್ ಪರ, ಕ್ಯಾಥರೀನ್ ಫ್ರೇಸರ್‌ಎರಡು ವಿಕೆಟ್‌ಗಳನ್ನು ಪಡೆದರು, ಬೌಂಡರಿಯಲ್ಲಿ ಅದ್ಭುತ ಕ್ಯಾಚ್ ಪಡೆದರು ಮತ್ತು ಶೆಮೈನ್ ಕ್ಯಾಂಪ್‌ಬೆಲ್ (36) ಅವರನ್ನು ರನೌಟ್ ಮಾಡಿದರು.

ನಂತರ ಕ್ಯಾಥರೀನ್ ಮತ್ತು ಕಾರ್ಟರ್‌ಸ್ಕಾಟ್ಲೆಂಡ್‌ಗೆ ತ್ವರಿತ ಆರಂಭ ನೀಡಿದರು. ವೆಸ್ಟ್ ಇಂಡೀಸ್ ಮಧ್ಯಮ ಓವರ್‌ನಲ್ಲಿ 13 ಎಸೆತಗಳಲ್ಲಿ ನಾಲ್ಕು ವಿಕೆಟ್‌ಗಳನ್ನು ಕಬಳಿಸಿತು, ಆದರೆ ಸ್ಕಾಟ್ಲೆಂಡ್ ಕೊನೆಯವರೆಗೂ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ನಾಲ್ಕನೇ ಓವರ್‌ನಲ್ಲಿ ಕಾರ್ಟರ್ ಕಾಲಿನ ಗಾಯಕ್ಕೆ ಒಳಗಾದರು ಮತ್ತು 19 ರನ್ ಗಳಿಸಿದ್ದಾಗ ಅವರಿಗೆ ಜೀವದಾನ ನೀಡಲಾಯಿತು. ಓಡುವಲ್ಲಿ ತೊಂದರೆ ಅನುಭವಿಸುತ್ತಿದ್ದರೂ, ಐದನೇ ಓವರ್‌ನಂತರ 18 ನೇ ಓವರ್‌ವರೆಗೆ ಅವರು ಬೌಂಡರಿ ಬಾರಿಸಲಿಲ್ಲ. ಮಧ್ಯಮ ಓವರ್‌ಗಳಲ್ಲಿ ಸ್ಕಾಟ್ಲೆಂಡ್ ಸುಮಾರು ಐದು ಓವರ್‌ಗಳ ಕಾಲ ಬೌಂಡರಿ ಬಾರಿಸಲಿಲ್ಲ, ಆದರೆ ವೆಸ್ಟ್ ಇಂಡೀಸ್‌ನ ಕಳಪೆ ಬೌಲಿಂಗ್ ಮತ್ತು ಫೀಲ್ಡಿಂಗ್ ತಂಡವನ್ನು ಪಂದ್ಯದಲ್ಲಿ ಉಳಿದುಕೊಂಡಿತು.

# ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಿಂದ ಹೊರಬಿದ್ದ ಶ್ರೇಯಾಂಕಾ; ಪ್ರೇಮಾ ರಾವತ್ ಬದಲಿ ಆಟಗಾರ್ತಿ



ಹೊಸದಿಲ್ಲಿ, ಜೂ.19 - 2026ರ ಐಸಿಸಿ ಮಹಿಳಾ ಟಿ20 ವಿಶ್ವಕಪ್ ನಲ್ಲಿ ಭಾರತಕ್ಕೆ ದೊಡ್ಡ ಹಿನ್ನಡೆಯಾಗಿದೆ, ಆಫ್-ಸ್ಪಿನ್ನರ್ ಶ್ರೇಯಾಂಕಾ ಪಾಟೀಲ್ ಪಾದದ ಗಾಯದಿಂದಾಗಿ ಪಂದ್ಯಾವಳಿಯ ಉಳಿದ ಪಂದ್ಯಗಳಿಂದ ಹೊರಗುಳಿದಿದ್ದಾರೆ. ಬುಧವಾರ ನೆದರ್ಲೆಂಡ್ಸ್ ವಿರುದ್ಧದ ಭಾರತದ ಗ್ರೂಪ್ ಎ ಮುಖಾಮುಖಿಯ ಸಂದರ್ಭದಲ್ಲಿ ಅವರು ಗಾಯಗೊಂಡಿದ್ದರು. ಶ್ರೇಯಾಂಕಗೆ ಬದಲಿಯಾಗಿ, 24 ವರ್ಷದ ಪ್ರೇಮಾ ರಾವತ್ ಅವರನ್ನು ತಂಡಕ್ಕೆ ಸೇರಿಸಿಕೊಳ್ಳಲಾಗಿದೆ.

ಬುಧವಾರ ನಡೆದಿದ್ದ ನೆದರ್ಲೆಂಡ್ಸ್ ತಂಡ ವಿರುದ್ಧದ ಪಂದ್ಯಲ್ಲಿ ಆರನೇ ಓವರ್‌ನ ಮೊದಲನೇ ಎಸೆತದಲ್ಲಿ ಶ್ರೇಯಾಂಕ ಗಾಯಕ್ಕೆ ತುತ್ತಾಗಿದ್ದರು. ಬೌಲಿಂಗ್ ನಡೆಸುತ್ತಿದ್ದ ಶ್ರೇಯಾಂಕ ಮಿಡ್ ವಿಕೆಟ್‌ನಲ್ಲಿದ್ದ ಫೀಲ್ಡರ್ ಚೆಂಡನ್ನು ಹಿಡಿಯಲು ಪ್ರಯತ್ನಿಸಿ ವಿಫಲರಾದಾಗ ಸ್ವತಃ ಶ್ರೇಯಾಂಕ ಅವರೇ ಓಡಿ ಹೋಗಿ ಚೆಂಡನ್ನು ಹಿಡಿಯುವ ವೇಳೆ ಬಲಗಾಲು ಪಾದ ಉಳುಕಿ ನೆಲಕ್ಕೆ ಉರುಳಿದರು. ತೀವ್ರ ನೋವಿನಿಂದ ಬಳಲಿದ ಅವರಿಗೆ ನಡೆಯಲಾಗದ ಸ್ಥಿತಿ ಎದುರಾಯಿತು. ಬಳಿಕ ಅವರನ್ನು ಸ್ಟ್ರೆಚರ್‌ಮೂಲಕ ಸಾಗಿಸಲಾಯಿತು. ಪ್ರೇಮಾ ರಾವತ್‌ಗೆ ಇದು ಮೊದಲ ರಾಷ್ಟ್ರೀಯ ತಂಡ ಕರೆಯಾಗಿದೆ. ಅವರು ಡಬ್ಲ್ಯೂ ಪಿಎಲ್ (ಮಹಿಳಾ ಪ್ರೀಮಿಯರ್‌ಲೀಗ್) ನಲ್ಲಿ ಸ್ಮೃತಿ ಮಂಧಾನ ನೇತೃತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಪರ ಆಡಿದ್ದಾರೆ ಮತ್ತು ಜೂನ್ 20 ರಂದು ಪ್ರಾರಂಭವಾಗಲಿರುವ ವೈಟ್ ಬಾಲ್ ಸರಣಿಗಾಗಿ ಇಂಗ್ಲೆಂಡ್‌ನಲ್ಲಿರುವ ಭಾರತ ಎ ತಂಡದ ಭಾಗವಾಗಿದ್ದರು. ಐಸಿಸಿ ಮಹಿಳಾ ಟಿ20 ವಿಶ್ವಕಪ್ 2026 ರ ಈವೆಂಟ್ ತಾಂತ್ರಿಕ ಸಮಿತಿಯು ಭಾರತ ತಂಡದಲ್ಲಿ ಶ್ರೇಯಾಂಕಾ ಪಾಟೀಲ್ ಬದಲಿಗೆ ಪ್ರೇಮಾ ರಾವತ್ ಅವರನ್ನು ಆಯ್ಕೆ ಮಾಡಿದ್ದೆ ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ. ಭಾರತ ಎ ತಂಡದ ಭಾಗವಾಗಿ ಈಗಾಗಲೇ ಇಂಗ್ಲೆಂಡ್‌ನಲ್ಲಿದ್ದ ರಾವತ್, ಈಗ ಟೂರ್ನಿಯ ಉಳಿದ ಪಂದ್ಯಗಳಿಗೆ ಹಿರಿಯರ ತಂಡದೊಂದಿಗೆ ಸ್ಥಾನ ಪಡೆಯಲಿದ್ದಾರೆ.

ಪ್ರೇಮಾ ರಾವತ್ ಡಬ್ಲ್ಯೂಪಿಎಲ್‌ನಲ್ಲಿ ಆಡಿರುವ 6 ಪಂದ್ಯಗಳಲ್ಲಿ ಮೂರು ವಿಕೆಟ್‌ಗಳನ್ನು ಪಡೆದಿದ್ದರು. ಹಾಲಿ ವಿಶ್ವಕಪ್‌ನಲ್ಲಿ ಮಹಿಳಾ ತಂಡಕ್ಕಾಗಿ ಅವರು ಹೇಗೆ ಪ್ರದರ್ಶನ ನೀಡುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ. ಒಂದೊಮ್ಮೆ ಅವರಿಗೆ ಆಡುವ ಅವಕಾಶ ಸಿಕ್ಕರೆ ಅವರಿಗೆ ಪದಾರ್ಪಣೆ ಪಂದ್ಯವಾಗಲಿದೆ. ಭಾರತ ತಂಡದ ಪ್ರಸ್ತುತ ಅಭಿಯಾನದ ಬಗ್ಗೆ ಹೇಳುವುದಾದರೆ, ತಂಡವು ಮುಂದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾವನ್ನು ಎದುರಿಸಲಿದೆ. ಜೂನ್ 21 ರಂದು ಮ್ಯಾಂಚೆಸ್ಟರ್‌ನ ಓಲ್ಡ್ ಟ್ರಾಫರ್ಡ್‌ನಲ್ಲಿ ಎರಡೂ ತಂಡಗಳು ಮುಖಾಮುಖಿಯಾಗಲಿದೆ. ಸತತ ಎರಡು ಗೆಲುವುಗಳೊಂದಿಗೆ ಅಜೇಯವಾಗಿರುವ ಭಾರತವು ದಕ್ಷಿಣ ಆಫ್ರಿಕಾ ವಿರುದ್ಧವೂ ಗೆಲ್ಲುವ ನಿರೀಕ್ಷೆಯಲ್ಲಿದೆ.

# ಬಿಸಿಸಿಐ ಆಯ್ಕೆ ಸಮಿತಿಯನ್ನು ಕೊಂಡಾಡಿದ ಭಾರತದ ದಂತಕಥೆ ಸುನೀಲ್ ಗವಾಸ್ಕರ್



ಹೊಸದಿಲ್ಲಿ, ಜೂ.19 - ಲಕ್ನೋದಲ್ಲಿ ನಡೆದ ಎರಡನೇ ಏಕದಿನ ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ಭಾರತ 170 ರನ್‌ಗಳ ಭರ್ಜರಿ ಗೆಲುವು ಸಾಧಿಸಲು ಸಹಾಯ ಮಾಡಿದ ಯುವ ವೇಗಿ ಗುರ್ನೂರ್ ಬ್ರಾರ್ ಅವರನ್ನು ಗುರುತಿಸಿ, ತಂಡದಲ್ಲಿ ಸ್ಥಾನ ನೀಡಿದ್ದಕ್ಕಾಗಿ ಭಾರತದ ಮಾಜಿ ನಾಯಕ ಸುನೀಲ್ ಗವಾಸ್ಕರ್ ಭಾರತೀಯ ಆಯ್ಕೆ ಸಮಿತಿ ಮತ್ತು ತಂಡದ ಆಡಳಿತ ಮಂಡಳಿಯನ್ನು ಶ್ಲಾಘಿಸಿದ್ದಾರೆ. ಭಾರತ ಅಫ್ಘಾನಿಸ್ತಾನವನ್ನು 44.3 ಓವರ್‌ಗಳಲ್ಲಿ 232 ರನ್‌ಗಳಿಗೆ ಆಲೌಟ್ ಮಾಡಿ ಮೂರು ಪಂದ್ಯಗಳ ಸರಣಿಯಲ್ಲಿ 2-0 ಮುನ್ನಡೆ ಸಾಧಿಸಿದೆ. ಎಡಗೈ ಸೀಮರ್ 3 ವಿಕೆಟ್ ಕಬಳಿಸಿ 60 ರನ್ ಬಿಟ್ಟುಕೊಟ್ಟು ಪ್ರವಾಸಿ ತಂಡದ ಬ್ಯಾಟಿಂಗ್ ಲೈನ್‌ಅಪ್ ಅನ್ನು ಕೆಡವುವಲ್ಲಿ ಪ್ರಮುಖ ಪಾತ್ರ ವಹಿಸಿದರು.

'ಅವರ ರನ್-ಅಪ್ ತುಂಬಾ ಚೆನ್ನಾಗಿದೆ, ಅವರ ರಿದಮ್ ತುಂಬಾ ಚೆನ್ನಾಗಿದೆ, ಅವರು ಡೆಕ್‌ಗೆ ಹೊಡೆದು ಚೆಂಡನ್ನು ಏರಿಸುತ್ತಿದ್ದರು. ಗುರ್ಬಾಜ್ ಅವರ ವಿಕೆಟ್ ಅವರು ಪಡೆದದ್ದು ವಿಶೇಷವಾಗಿ ಪ್ರಭಾವಶಾಲಿಯಾಗಿತ್ತು. ಏಕೆಂದರೆ, ಬೌನ್ಸರ್‌ಅವರನ್ನು ಹಿಂಬಾಲಿಸಿದ ರೀತಿಯಿಂದಾಗಿ ಇದು ತುಂಬಾ ನಿಖರವಾಗಿದೆ. ಅದು ಬ್ಯಾಟರ್‌ಬಯಸದ ಸ್ಥಳಕ್ಕೆ ನಿಖರವಾಗಿ ಬರುತ್ತದೆ' ಎಂದು ಗವಾಸ್ಕರ್‌ಜಿಯೋ ಹಾಟ್‌ಸ್ಟಾರ್‌ಗೆ ತಿಳಿಸಿದರು.

'ಆಯ್ಕೆ ಸಮಿತಿಯು ಎಲ್ಲ ಪ್ರಶಂಸೆಗಳಿಗೆ ಅರ್ಹವಾಗಿದೆ ಎಂದು ನಾನು ಭಾವಿಸುತ್ತೇನೆ. ನೀವು ಅವರ ಅಂಕಿಅಂಶಗಳನ್ನು ಅಥವಾ ಅವರ ಭಾರತ ಎ ಪ್ರದರ್ಶನಗಳನ್ನು ನೋಡಿದರೆ, ಅವರು ಆಯ್ಕೆಗೆ ಅರ್ಹರಾಗಿದ್ದರು. ಆದರೆ, ಅವರು ಭಾರತ ಕ್ಯಾಪ್‌ಗೆ ಅರ್ಹರು ಎಂದು ನೀವು ಹೇಳುವ ಮಟ್ಟಿಗೆ ಅಲ್ಲ. ಆದಾಗ್ಯೂ, ಅಜಿತ್ ಅಗರ್ಕರ್ ನೇತೃತ್ವದ ಆಯ್ಕೆ ಸಮಿತಿಯು ಅವರಲ್ಲಿ ವಿಶೇಷವಾದದ್ದನ್ನು ಕಂಡಿತು ಮತ್ತು ಅದಕ್ಕಾಗಿಯೇ ಅವರು ಅವರನ್ನು ಆಯ್ಕೆ ಮಾಡಿದರು. ಅವರಿಗೆ ನಿರ್ವಹಣೆಯ ಬೆಂಬಲವೂ ಇದೆ,ಅದು ತುಂಬಾ ಮುಖ್ಯವಾಗಿದೆ' ಎಂದು ಅವರು ಹೇಳಿದರು. ನಾಯಕ ಶುಭಮನ್ ಗಿಲ್ ಅವರ ಅದ್ಭುತ ಫಾರ್ಮ್ ಬಗ್ಗೆಯೂ ಗವಾಸ್ಕರ್ ಮಾತನಾಡಿದರು ಮತ್ತು ಆಟಗಾರನ ವೈಯಕ್ತಿಕ ಪ್ರದರ್ಶನವು ನಾಯಕನಾಗಿ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಹೇಗೆ ಪ್ರಭಾವ ಬೀರುತ್ತದೆ ಎಂಬುದನ್ನು ವಿವರಿಸಿದರು. ಗಿಲ್ 110 ಎಸೆತಗಳಲ್ಲಿ ಅದ್ಭುತ 154 ರನ್ ಗಳಿಸಿ ಮುಂಚೂಣಿಯಲ್ಲಿ ನಿಂತು ಮುನ್ನಡೆಸಿದರು. ಇಶಾನ್ ಕಿಶನ್ ಅವರೊಂದಿಗೆ 224 ರನ್‌ಗಳ ಜೊತೆಯಾಟವಾಡಿದರು. ಇಶಾನ್ ಕಿಶನ್ 79 ಎಸೆತಗಳಲ್ಲಿ 125 ರನ್ ಗಳಿಸಿದರು. ಭಾರತವು 402 ರನ್ ಗಳಿಸಿ ಆಲೌಟ್ ಆಯಿತು.

'ನೀವು ರನ್ ಗಳಿಸದಿದ್ದಾಗ, ನಿಮ್ಮ ಮನಸ್ಸಿನಿಂದ ಬರುವ ಆ ಕನಿಷ್ಠ ಚಲನೆಗಳನ್ನು ಮಾಡುವ ಬಗ್ಗೆ ನಿಮಗೆ ವಿಶ್ವಾಸವಿರುವುದಿಲ್ಲ, ಉದಾಹರಣೆಗೆ ಚೆನ್ನಾಗಿ ಬೌಲಿಂಗ್ ಮಾಡಿದ ಬೌಲರ್‌ನನ್ನು ತಡೆಹಿಡಿಯುವುದು, ಅವನಿಗೆ ಹೆಚ್ಚುವರಿ ಓವರ್ ನೀಡುವುದು ಅಥವಾ ಫೀಲ್ಡರ್‌ನನ್ನು ನಿರ್ದಿಷ್ಟ ಸ್ಥಾನದಿಂದ ಸ್ಥಳಾಂತರಿಸುವುದು. ನೀವು ವೈಯಕ್ತಿಕವಾಗಿ ಪ್ರದರ್ಶನ ನೀಡುವಾಗ ಆ ಆಂತರಿಕ ಭಾವನೆ ಹೆಚ್ಚು ಬಲವಾಗಿರುತ್ತದೆ' ಎಂದು ಗವಾಸ್ಕರ್ ವಿವರಿಸಿದರು.

'ಆದರೆ ನೀವು ಉತ್ತಮ ಪ್ರದರ್ಶನ ನೀಡದಿದ್ದರೆ, ನಿಮಗೆ ಒಳಗಿನ ಭಾವನೆ ಬಂದರೂ ಸಹ, ನೀವು ಆ ನಿರ್ಧಾರ ತೆಗೆದುಕೊಳ್ಳುವುದರ ಬಗ್ಗೆ ಭಯಪಡುತ್ತೀರಿ. ಏಕೆಂದರೆ, ನೀವು ತಪ್ಪು ಮಾಡುತ್ತೀರಿ ಎಂಬ ಚಿಂತೆಯಲ್ಲಿದ್ದೀರಿ. ನೀವು ಒಬ್ಬ ಆಟಗಾರನಾಗಿಯೂ ಉತ್ತಮ ಪ್ರದರ್ಶನ ನೀಡುತ್ತಿಲ್ಲವಾದ್ದರಿಂದ, ನಿಮ್ಮ ನಾಯಕತ್ವಕ್ಕಾಗಿಯೂ ನಿಮ್ಮನ್ನು ಟೀಕಿಸಲಾಗುತ್ತದೆ' ಎಂದು ಅವರು ಹೇಳಿದರು.

ಚೆನ್ನೈನಲ್ಲಿ ನಡೆಯಲಿರುವ ಮೂರನೇ ಮತ್ತು ಅಂತಿಮ ಏಕದಿನ ಪಂದ್ಯವನ್ನು ಎದುರು ನೋಡುತ್ತಿರುವ ಗವಾಸ್ಕರ್, ಭಾರತದ ಸ್ಪಿನ್ ವಿಭಾಗವು ತಂಡದ ಆಡಳಿತವು ಹೆಚ್ಚಿನ ಸ್ಪಷ್ಟತೆಯನ್ನು ಬಯಸುವ ಕ್ಷೇತ್ರವಾಗಿ ಉಳಿದಿದೆ ಎಂದು ನಂಬುತ್ತಾರೆ. 'ರೋಹಿತ್ ಮತ್ತು ಜೈಸ್ವಾಲ್ ಕೊನೆಯ ಪಂದ್ಯಕ್ಕೆ ಮತ್ತೆ ಅಗ್ರಸ್ಥಾನದಲ್ಲಿದ್ದಾರೆ ಎಂದು ನಾನು ಭಾವಿಸುತ್ತೇನೆ. ಭಾರತವು ಕೆಲವು ವಿಷಯಗಳನ್ನು ಪರಿಶೀಲಿಸಲು ನೋಡುತ್ತಿರುವ ಸ್ಥಳವೆಂದರೆ ಸ್ಪಿನ್ ವಿಭಾಗ. ಕುಲದೀಪ್ ವಿಕೆಟ್ ಪಡೆಯದೆ ಚೆನ್ನಾಗಿ ಬೌಲಿಂಗ್ ಮಾಡಿದ್ದಾರೆ ಮತ್ತು ಹರ್ಷ್ ದುಬೆ ಮೊದಲ ಪಂದ್ಯದಲ್ಲಿ ಚೆನ್ನಾಗಿ ಬೌಲಿಂಗ್ ಮಾಡಿ ಮೂರು ವಿಕೆಟ್ ಪಡೆದರು. ಆದರೆ, ಅವರು ಸ್ವಲ್ಪ ದುಬಾರಿಯಾಗಿದ್ದರು' ಎಂದು ಗವಾಸ್ಕರ್ ಹೇಳಿದರು.

# ಏಕದಿನ ವಿಶ್ವಕಪ್ : ರೋಹಿತ್-ಕೊಹ್ಲಿ ಏಕದಿನ ವಿಶ್ವಕಪ್ ಭವಿಷ್ಯ ನುಡಿದ ಬಿಸಿಸಿಐ



ಹೊಸದಿಲ್ಲಿ, ಜೂ.19 - ಮುಂದಿನ ವರ್ಷ ದಕ್ಷಿಣ ಆಫ್ರಿಕಾ, ನಮೀಬಿಯಾ ಹಾಗೂ ಜಿಂಬಾಬ್ವೆ ಜಂಟಿ ಆತಿಥ್ಯದಲ್ಲಿ 2027ರ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿ ನಡೆಯಲಿದೆ. ಈ ಟೂರ್ನಿಗೆ ಭಾರತ ತಂಡ ಇಂದಿನಿಂದಲೇ ಸಜ್ಜಾಗುತ್ತಿದೆ. ಇದರ ನಡುವೆ ಮಾಜಿ ನಾಯಕರಾದ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರು ಕೂಡ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಎದುರು ನೋಡುತ್ತಿದ್ದಾರೆ. ಆದರೆ, ಇವರಿಗೆ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಬಗ್ಗೆ ಇನ್ನೂ ಯಾವುದೇ ಖಚಿತತೆ ಇಲ್ಲ. ಈ ಬಗ್ಗೆ ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಇದೀಗ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಇಬ್ಬರೂ ಈಗಾಗಲೇ ಟಿ20 ಹಾಗೂ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ ಹಾಗೂ ಭಾರತ ತಂಡಕ್ಕೆ 2027ರ ಐಸಿಸಿ ಏಕದಿನ ವಿಶ್ವಕಪ್ ಗೆದ್ದುಕೊಡಲು ಎದುರು ನೋಡುತ್ತಿದ್ದಾರೆ. ಹಾಗಾಗಿ ಈ ಇಬ್ಬರೂ 50 ಓವರ್‌ಗಳ ಸ್ವರೂಪದಲ್ಲಿ ಸಕ್ರಿಯರಾಗಿದ್ದಾರೆ. ಇದೀಗ ಬಿಸಿಸಿಐ ಆಯ್ಕೆದಾರರು, ಏಕದಿನ ವಿಶ್ವಕಪ್ ಟೂರ್ನಿಗೆ ಅತ್ಯುತ್ತಮ ತಂಡವನ್ನು ಕಟ್ಟಲು ಪ್ರಯತ್ನ ನಡೆಸುತ್ತಿದ್ದಾರೆ. ಯುವ ಹಾಗೂ ಅನುಭವಿ ಮಿಶ್ರಣದೊಂದಗೆ ಬಲಿಷ್ಠ ತಂಡವನ್ನು ಕಟ್ಟಬೇಕೆಂಬುದು ಟೀಮ್ ಮ್ಯಾನೇಜ್‌ಮೆಂಟ್ ಉದ್ದೇಶ.

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಾಖಲೆಗಳು ಹಾಗೂ ಭಾರತೀಯ ಕ್ರಿಕೆಟ್‌ಗೆ ನೀಡಿದ ಕೊಡಗೆಗಳ ಆಧಾರದ ಮೇಲೆ ಕೊಹ್ಲಿ ಹಾಗೂ ರೋಹಿತ್ ಅವರನ್ನು ನೇರವಾಗಿ ಏಕದಿನ ವಿಶ್ವಕಪ್ ಟೂರ್ನಿಯ ತಂಡದಲ್ಲಿ ಸ್ಥಾನ ನೀಡಬಹುದು. ಆದರೆ, ಇಲ್ಲಿ ಅವರ ವಯಸ್ಸು ಮುಂದಿನ ವರ್ಷಕ್ಕೆ ಏರಿಕೆಯಾಗಲಿದೆ. ಕೊಹ್ಲಿಗೆ 38 ವರ್ಷ ವಯಸ್ಸಾದರೆ, ರೋಹಿತ್ ಶರ್ಮಾಗೆ 40 ವರ್ಷ ವಯಸ್ಸಾಗಲಿದೆ. ಹಾಗಾಗಿ ಅವರು ಫಿಟ್‌ನೆಸ್ ಹಾಗೂ ಅವರ ಫಾರ್ಮ್ ಇಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತದೆ. ಆದರೆ, ಪ್ರಸ್ತುತ ಸನ್ನಿವೇಶದಲ್ಲಿ ಈ ಇಬ್ಬರೂ ಉತ್ತಮ ಫಿಟ್‌ನೆಸ್ ಅನ್ನು ಕಾಪಾಡಿಕೊಂಡಿದ್ದಾರೆ.

ಇದೀಗ ವಿರಾಟ್ ಕೊಹ್ಲಿ ಹಾಗೂ ರೋಹಿತ್ ಶರ್ಮಾ ಅವರ ಭವಿಷ್ಯದ ಬಗ್ಗೆ ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಮ್ಮದೇ ಆದ ಅಭಿಪ್ರಾಯವನ್ನು ಮಂಡಿಸಿದ್ದಾರೆ. ಈ ಇಬ್ಬರ ಭವಿಷ್ಯ ಹಲವು ಸಂಗತಿಗಳನ್ನು ಅವಲಂಬಿಸಿದೆ ಎಂದು ಅವರು ಹೇಳಿದ್ದಾರೆ.

ಮಂಡಳಿಯ ಮುಖ್ಯಸ್ಥನಾಗಿ ಹೇಳುವುದಾದರೆ, ನಮ್ಮಲ್ಲಿ ಅತ್ಯಂತ ಸಮನ್ವಯದಿಂದ ಕಾರ್ಯನಿರ್ವಹಿಸುವ ತಂಡವಿದೆ ಮತ್ತು ಅನೇಕ ತಜ್ಞರು ಇದ್ದಾರೆ. ಎಲ್ಲ ಹಿತಾಸಕ್ತಿಪಕ್ಷಗಳ ಅಭಿಪ್ರಾಯವನ್ನು ಪರಿಗಣಿಸಲಾಗುತ್ತದೆ. ಯಾವುದೇ ನಿರ್ಧಾರ ಕೈಗೊಳ್ಳುವಾಗ ಕ್ರಿಕೆಟ್ ಸಮಿತಿ, ಆಯ್ಕೆ ಸಮಿತಿ ಹಾಗೂ ಇತರ ಎಲ್ಲ ಸಂಬಂಧಿತರಿಂದ ಚರ್ಚೆ ನಡೆಸಲಾಗುತ್ತದೆ. ಇದರಲ್ಲಿ ಸಹಾಯಕ ಸಿಬ್ಬಂದಿ, ಮುಖ್ಯ ಕೋಚ್ ಹಾಗೂ ಸಂಬಂಧಿತ ಆಟಗಾರರೂ ಸೇರಿದ್ದಾರೆ. ಈ ಕುರಿತು ನಿರಂತರವಾಗಿ ಸಂವಾದಗಳು ನಡೆಯುತ್ತಿರುತ್ತವೆ ಎಂದು ದೇವಜಿತ್ ಸೈಕಿಯಾ ಪಿಟಿಐ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಈ ಇಬ್ಬರ ಭವಿಷ್ಯದ ಬಗ್ಗೆ ನಾವು ಸಾರ್ವಜನಿಕವಾಗಿ ಬಹಿರಂಗಪಡಿಸಲು ಸಾಧ್ಯವಾಗಿಲ್ಲ. ಆದರೆ, ಈ ವಿಷಯಗಳನ್ನು ನಾವು ಸಾರ್ವಜನಿಕಗೊಳಿಸುವುದಕ್ಕೂ ಮುನ್ನ ಇದಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಚರ್ಚೆ ನಡೆಸಲಾಗುತ್ತದೆ ಎಂದು ಹೇಳಿದ್ದಾರೆ. ಆ ಕಾರಣಕ್ಕಾಗಿಯೇ ಯಾವುದೇ ವಿಶೇಷ ಸಂವಾದ ಸಭೆಯ ಅಗತ್ಯವಿಲ್ಲ. ಇದು ನಿರಂತರವಾಗಿ ನಡೆಯುವ ಪ್ರಕ್ರಿಯೆಯಾಗಿದೆ. ಜೊತೆಗೆ, ಈ ವಿಚಾರಗಳ ಬಗ್ಗೆ ಮಾಧ್ಯಮಗಳ ಮುಂದೆ ಅಥವಾ ಸಾರ್ವಜನಿಕವಾಗಿ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಬೇಕು ಎಂದು ನಾನು ಭಾವಿಸುವುದಿಲ್ಲ. ಏಕೆಂದರೆ ಇವು ಕಾರ್ಯತಂತ್ರಕ್ಕೆ ಸಂಬಂಧಿಸಿದ ಚರ್ಚೆಗಳಾಗಿವೆ. ಈ ವಿಷಯಗಳ ಬಗ್ಗೆ ಮಾಧ್ಯಮಗಳ ಮುಂದೆ ಮಾತನಾಡಲು ನನಗೆ ಅಧಿಕಾರವೂ ಇಲ್ಲ ಎಂದು ದೇವಜಿತ್ ಸೈಕಿಯಾ ತಿಳಿಸಿದ್ದಾರೆ.

**ಗೋಧಿ**

ಅಕ್ಕಿಯಂತೆ ಗೋಧಿಯನ್ನೂ ಕೂಡ ಬಟ್ಟೆ ಸ್ಟಾಚ್ ಮಾಡಲು ಬಳಸುತ್ತಾರೆ. ಗೋಧಿ ನೀರಿನಲ್ಲಿ ನಿಮ್ಮ ಬಟ್ಟೆಯನ್ನು 20 ನಿಮಿಷಗಳ ಕಾಲ ನೆನೆಸಿಡಿ, ನಂತರ ಬಿಸಿಲಿನಲ್ಲಿ ಒಣಗಿಸಿ ಇದು ನಿಮ್ಮ ಬಟ್ಟೆಗೆ ನೈಸರ್ಗಿಕ ಹೊಳಪನ್ನು ನೀಡುತ್ತದೆ.


## ಸವಿ ರುಚಿ

## ಪನ್ನೀರ್ ಬಟರ್ ಮಸಾಲ ರೆಸಿಪಿ

**ಪ**ನ್ನೀರ್ ಬಟರ್ ಮಸಾಲವನ್ನು ಚಪಾತಿ, ಬಿಸಿ-ಬಿಸಿ ಅನ್ನ ಜತೆ ಸವಿಯಲು ಆಹಾ.. ಎಷ್ಟೊಂದು ರುಚಿಕರ. ರುಚಿಯಾದ ಅಡುಗೆ ಮಾಡಲು ಸ್ವಲ್ಪ ಹೆಚ್ಚಿನ ಶ್ರಮ ಬೇಕಾಗುತ್ತದೆ. ಆದರೆ ಈ ಸವಿರುಚಿಯ ಗ್ರೇವಿ ಮಾಡಲು ಹೆಚ್ಚಿನ ಪರಿಶ್ರಮ ಬೇಕಾಗಿಲ್ಲ, ಇದರ ರೆಸಿಪಿ ನೋಡಿ ಇಲ್ಲಿದೆ:

**ಬೇಕಾಗುವ ಸಾಮಾಗ್ರಿಗಳು**

250ಗ್ರಾಂ ಪನ್ನೀರ್, ಟೊಮೆಟೊ(ಪೇಸ್ಟ್ ಮಾಡಿ), 2 ಚಿಕ್ಕ ಚಮಚ ಕೊತ್ತಂಬರಿ ಪುಡಿ, 4 ಗೋಡಂಬಿ(ಪುಡಿ ಮಾಡಿಡಿ), ಒಂದೂವರೆ ಚಮಚ ಬೆಣ್ಣೆ, 2 ಲವಂಗ, 2 ಒಣಮೆಣಸು, 6-8 ಬೆಳ್ಳುಳ್ಳಿ ಎಸಳು, 1/2 ಚಮಚ ಕಸೂರಿ ಮೇತಿ ಪೌಡರ್, 2 ಲವಂಗದ ಎಲೆ, 2 ಚಮಚ ಶುಂಠಿ ಪೇಸ್ಟ್, 1 ಚಮಚ ಖಾರದ ಪುಡಿ, 1 ಚಮಚ ಎಣ್ಣೆ, ರುಚಿಗೆ ತಕ್ಕ ಉಪ್ಪು, ಚಕ್ಕೆ, 1 ಈರುಳ್ಳಿ, 1/2 ಚಮಚ ತರಿತರಿ ಪುಡಿ ಮಾಡಿದ ಕೊತ್ತಂಬರಿ ಬೀಜ, ಸ್ವಲ್ಪ ಕೊತ್ತಂಬರಿ ಸೊಪ್ಪು.



**ಮಾಡುವ ವಿಧಾನ**

**ಸ್ಟೆಪ್ 1:** ತಳ ದಪ್ಪವಿರುವ ಪ್ಯಾನ್ ಬಿಸಿ ಮಾಡಿ ಅದಕ್ಕೆ ಬೆಣ್ಣೆ ಹಾಗೂ ಎಣ್ಣೆ ಹಾಕಿ ಬಿಸಿ ಮಾಡಿ, ನಂತರ ಚಕ್ಕೆ, ಲವಂಗ, ಜಜ್ಜಿದ ಕೊತ್ತಂಬರಿ ಬೀಜ, ಲವಂಗದ ಎಲೆ ಹಾಕಿ ಒಣ ಮೆಣಸನ್ನು ಮುರಿದು ಹಾಕಿ, ನಂತರ ಈರುಳ್ಳಿ ಹಾಕಿ ಸ್ವಲ್ಪ ಕಂದು ಬಣ್ಣ ಬರುವವರೆಗೆ ಫ್ರೈ ಮಾಡಿ.

**ಸ್ಟೆಪ್ 2:** ಶುಂಠಿ-ಬೆಳ್ಳುಳ್ಳಿ ಪೇಸ್ಟ್ ಹಾಕಿ 1 ನಿಮಿಷ ಫ್ರೈ ಮಾಡಿ. ನಂತರ ಟೊಮೆಟೊ ಪೇಸ್ಟ್, ಗೋಡಂಬಿ ಪುಡಿ ಹಾಕಿ ಕಡಿಮೆ ಉರಿಯಲ್ಲಿ ಬೆಣ್ಣೆ ಮೇಲೆ ತೇಲುವಷ್ಟು ಹೊತ್ತು ಫ್ರೈ ಮಾಡಿ. ನಂತರ ಖಾರದ ಪುಡಿ, ಕೊತ್ತಂಬರಿ ಪುಡಿ, ಅರಿಶಿಣ ಪುಡಿ ಹಾಕಿ, ರುಚಿಗೆ ತಕ್ಕ ಉಪ್ಪು ಸೇರಿಸಿ ಮಿಶ್ರಣವನ್ನು ಕಡಿಮೆ ಉರಿಯಲ್ಲಿ 10 ನಿಮಿಷ ಕುದಿಸಿ.

**ಸ್ಟೆಪ್ 3:** ಈಗ ಕಸೂರಿ ಮೇತಿ(ಕಸ್ತೂರಿ ಮೆಂತೆ) ಪುಡಿ ಹಾಕಿ ಮಿಕ್ಸ್ ಮಾಡಿ, ನಂತರ ಪನ್ನೀರ್ ಹಾಕಿ ಕುದಿಸಿ ಉರಿಯಿಂದ ಇಳಿಸಿ, ಕೊತ್ತಂಬರಿ ಸೊಪ್ಪಿನಿಂದ ಅಲಂಕರಿಸಿದರೆ ಬಟರ್ ಪನ್ನೀರ್ ಮಸಾಲ ರೆಡಿ.

## ಅಲ್ಲಿ ಇಲ್ಲಿ ಏಕೆ ಹೋಗುವಿರಿ?

## ಮನೆಯಲ್ಲಿ ಮಾಡಿ ಸರಳವಾದ ಮಸಾಜ್

**ಅ**ತಿಯಾದ ದಣಿವು, ಮೈಕೈ ನೋವು ಹಾಗೂ ತಲೆ ನೋವು ಬಂದಾಗ ಮನಸ್ಸು ಬಯಸುವುದು ಮಸಾಜ್‌ನ್ನು. ಮಸಾಜ್ ಎಂದ ಮಾತ್ರಕ್ಕೆ ಅದನ್ನು ಮನಸ್ಸಿಗೆ ಬಂದಂತೆ ಮಾಡಿಸಿಕೊಂಡರೆ ದೇಹದಲ್ಲಿ ಇನ್ನಷ್ಟು ನೋವು ಹೆಚ್ಚಾಗುವುದು. ಹಾಗಾಗಿ ಅದಕ್ಕೆ ಸೂಕ್ತ ವ್ಯಕ್ತಿಗಳಿಂದ ಮಸಾಜ್ ಮಾಡಿಸಬೇಕು. ಇಲ್ಲವೇ ಸೆಲೂನ್ ಅಥವಾ ಬಾಡಿ ಮಸಾಜ್ ಸೆಂಟರ್ ಗಳಿಗೆ ತೆರಳಬೇಕು. ಆದರೆ ನಿತ್ಯವೂ ಈ ಆರೈಕೆಗೆ ಒಳಪಡುವುದು ದುಬಾರಿಯಾದ ಮಾರ್ಗ. ಮನೆ ಮಂದಿಯಿಂದಲೇ ಕೆಲವು ಸುಲಭ ದೇಹದ ಮಸಾಜ್ ಅನು ಮಾಡಿಸಿಕೊಳ್ಳಬಹುದು. ಆದರೆ ಅವರು ಅವರದ್ದೇ ಆದ ಕೆಲಸದ ಒತ್ತಡದಲ್ಲಿರುವಾಗ ನಮ್ಮ ದೇಹದ ಮಸಾಜ್ ಮಾಡಿಸಿಕೊಳ್ಳುವುದು ಕಷ್ಟ. ಹಾಗಾಗಿ ಮನೆಯಲ್ಲಿ ನಾವೇ ಸುಲಭವಾದ ರೀತಿಯಲ್ಲಿ ಮಸಾಜ್ ಮಾಡಿಕೊಳ್ಳಬೇಕು. ಅದು ಹೇಗೆ ಎನ್ನುವ ಸಮಸ್ಯೆಯಲ್ಲಿದ್ದರೆ ಇಲ್ಲಿದೆ ನೋಡಿ ಸರಳ ವಿರಣೆ. ಮಸಾಜ್ ಪ್ರಕ್ರಿಯೆಯ ಬಗ್ಗೆ ಹಂತ ಹಂತವಾದ ಸರಳ ಹಾಗೂ ಸುಲಭ ರೀತಿಯ ವಿವರಣೆ ನೀಡಲಾಗಿದೆ. ಇದನ್ನು ತಿಳಿದ ಮೇಲೆ ತಪ್ಪದೆ ಮಾಡಿ ನೋಡಿ...


**ಮನೆ ಮಂದಿಯಿಂದಲೇ ಕೆಲವು ಸುಲಭ ದೇಹದ ಮಸಾಜ್ ಅನ್ನು ಮಾಡಿಸಿಕೊಳ್ಳಬಹುದು. ಆದರೆ ಅವರು ಅವರದ್ದೇ ಆದ ಕೆಲಸದ ಒತ್ತಡದಲ್ಲಿರುವಾಗ ನಮ್ಮ ದೇಹದ ಮಸಾಜ್ ಮಾಡಿಸಿಕೊಳ್ಳುವುದು ಕಷ್ಟ. ಹಾಗಾಗಿ ಮನೆಯಲ್ಲಿ ನಾವೇ ಸುಲಭವಾದ ರೀತಿಯಲ್ಲಿ ಮಸಾಜ್ ಮಾಡಿಕೊಳ್ಳಬೇಕು.**



● **ಹಂತ-1:** ಮಸಾಜ್ ಮಾಡಲು, ನಿತ್ಯ ದೇಹಕ್ಕೆ ಅನ್ವಯಿಸಿಕೊಳ್ಳುವ ತೆಂಗಿನ ಎಣ್ಣೆ, ಸಾಸಿವೆ ಎಣ್ಣೆ (ನೀವು ಕೆಮ್ಮು ಮತ್ತು ಶೀತ ಹೊಂದಿದ್ದರೆ), ಎಳ್ಳಿನ ಎಣ್ಣೆ ಅಥವಾ ಹೆಚ್ಚು ನೀರಿನಂಶ ಇರುವ ಬಾಡಿ ಲೋಷನ್‌ಗಳನ್ನು ಬಳಸಬಹುದು. ಮಸಾಜ್ ಮಾಡುವ ಮೊದಲು ಎಣ್ಣೆಯನ್ನು ಬಿಸಿ ಮಾಡಿಕೊಂಡಿರಬೇಕು. ಅದು ಹಚ್ಚಿಕೊಳ್ಳುವಷ್ಟು ತಾಪದಲ್ಲಿರಬೇಕು.

● **ಹಂತ-2:** ಯಾರು ಇಲ್ಲದ ವಾತಾವರಣದಲ್ಲಿ ಅಥವಾ ನಿಮ್ಮ ಕೋಣೆಯಲ್ಲಿ ಬಾಗಿಲು ಮುಚ್ಚಿಕೊಂಡು ಬಿಸಿ ಎಣ್ಣೆಯ ಮಸಾಜ್ ಮಾಡಿ. ಏಕೆಂದರೆ ಎಣ್ಣೆ ಮಸಾಜ್ ಮಾಡಿಕೊಳ್ಳುವಾಗ ಕಡಿಮೆ ಬಟ್ಟೆಯನ್ನು ತೊಟ್ಟಿರಬೇಕಾಗುತ್ತದೆ.

● **ಹಂತ-3:** ನಿಮ್ಮ ದೇಹದ ಮಸಾಜ್‌ಅನ್ನು ಪಾದದಿಂದ ಪ್ರಾರಂಭಿಸಬೇಕು. ಮೊದಲು ಕಾಲ್ಬೆರಳುಗಳ ಮಧ್ಯೆ ಸ್ವಲ್ಪ ಎಣ್ಣೆಯನ್ನು ಅನ್ವಯಿಸುತ್ತಾ ಪಾದದ ಮಧ್ಯ ಭಾಗಕ್ಕೆ ಬನ್ನಿ. ನಂತರ ಪಾದದ ಅಡಿಗಳನ್ನು ರೇಖಿಯ ದಿಕ್ಕಿನಲ್ಲಿ ಮಸಾಜ್ ಮಾಡಬೇಕು. ಅಂದರೆ ಕಾಲಿನಿಂದ ಪಾದದ ಹೆಬ್ಬೆಟ್ಟಿನ ನೇರಕ್ಕೆ ಮಸಾಜ್ ಮಾಡಬೇಕು. ನಿಧಾನವಾಗಿ ಪಾದದ ಮೇಲ್ಭಾಗ ಮತ್ತು ಕೆಳಭಾಗದಲ್ಲಿ ಮಸಾಜ್ ಮಾಡಿ 5 ನಿಮಿಷ ಬಿಡಬೇಕು. ತೈಲ ಒಣಗಿದಂತೆ ಅನಿಸಿದರೆ ಸ್ವಲ್ಪ ಎಣ್ಣೆಯನ್ನು ಅನ್ವಯಿಸಿಕೊಳ್ಳಿ.



● **ಹಂತ-4:** ಪಾದದಿಂದ ನಿಧಾನವಾಗಿ ಎರಡರಿಂದ ಮೂರು ಬಾರಿ ಕಾಲನ್ನು ತಿಕ್ಕುತ್ತಾ ಮೊಣಕಾಲಿನ ಭಾಗಕ್ಕೆ ಬನ್ನಿ. ಮೊಣಕಾಲಿನ ಪ್ರದೇಶವನ್ನು ಮಸಾಜ್ ಮಾಡುವುದು ಸಹ ಮುಖ್ಯ. ನೋವು ಇಲ್ಲದಿದ್ದರೂ ಮಸಾಜ್ ಮಾಡಬೇಕು. ಇದು ದೇಹದ ಕೆಳಭಾಗದಲ್ಲಿ ರಕ್ತ ಸಂಚಲನಕ್ಕೆ ಅನುಕೂಲವಾಗುವುದು. ಮೊಣಕಾಲಿನ ಮಸಾಜ್‌ಅನ್ನು ಎರಡು ಕೈಗಳಿಂದ, ವೃತ್ತಾಕಾರದ ಚಲನೆಯಲ್ಲಿ ಮಾಡಬೇಕು. ಮೊಣಕಾಲಿನ ಚರ್ಮವು ಶಾಂತವಾಗಿರುತ್ತದೆ.

● **ಹಂತ-5:** ಮೊಣಕಾಲಿನಿಂದ ಕೆಳತೊಡೆಯ ಭಾಗಕ್ಕೆ ಬನ್ನಿ. ಈ ಭಾಗದಲ್ಲಿ ಹೆಚ್ಚು ಎಣ್ಣೆಯ ಅಗತ್ಯವಿರುತ್ತದೆ. ಸ್ವಲ್ಪ ಬೆಚ್ಚಗಿರುವ ಎಣ್ಣೆಯನ್ನೇ ಅನ್ವಯಿಸಿ. ಮೊದಲು ಕೆಳ ತೊಡೆಯನ್ನು ಮಸಾಜ್ ಮಾಡಿ. ನಂತರ ಮೇಲ್ಭಾಗಕ್ಕೆ ಬನ್ನಿ. ಒಳತೊಡೆಯ ಮಸಾಜ್ ಮಾಡುವಾಗ ಸ್ವಲ್ಪ ಎಚ್ಚರಿಕೆ ವಹಿಸಿ. ತೊಡೆಯ ಮಸಾಜ್ ಮಾಡುವಾಗ ಮೊಣಕಾಲಿನಿಂದ ಹೊಟ್ಟೆಯ ಭಾಗದ ಕಡೆಗೆ ಮಸಾಜ್ ಮಾಡಬೇಕು.

● **ಹಂತ-6:** ಇಲ್ಲಿ ನಿಮ್ಮ ಮಸಾಜ್ ಕ್ರಿಯೆಯು ಹೊಟ್ಟೆಯನ್ನು ಕೇಂದ್ರಿಕರಿಸುತ್ತದೆ. ಈಗ ಸ್ವಲ್ಪ ಸಮಯ ಬೇಕಾಗುವುದು. ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿಯೇ ಎಣ್ಣೆಯನ್ನು ಬಳಸಬೇಕು. ವೃತ್ತಾಕಾರದ ಚಲನೆಯಲ್ಲಿ ಹೊಟ್ಟೆ ಪ್ರದೇಶವನ್ನು ಮಸಾಜ್ ಮಾಡಬೇಕು. ಎಣ್ಣೆಯನ್ನು ಅಂಗೈಅಲ್ಲಿ ಸುರಿದುಕೊಂಡು, ಸ್ತನದ ಕೇಂದ್ರ ಭಾಗದಿಂದ ಹರಡಿ. ಎಣ್ಣೆ ವಿಶಾಲ ಜಾಗದಲ್ಲಿ ಹರಡಿಕೊಂಡು ಹೊಟ್ಟೆ ಮಸಾಜ್ ಮಾಡಲು ಸಹಾಯವಾಗುವುದು.

● **ಹಂತ-7:** ಇದು ಕೊನೆಯ ಹಂತ ಎನ್ನಬಹುದು. ಈಗ ಭುಜದ ಮಸಾಜ್ ಮಾಡಿಕೊಳ್ಳುವುದು. ಒಂದೇ ಕೈಗಳಿಂದ ಮಾಡಿಕೊಳ್ಳಬೇಕಾಗುವುದರಿಂದ ಹೆಚ್ಚಿನ ಸಮಯ ಬೇಕಾಗುವುದು. ಕುತ್ತಿಗೆಯ ತುದಿಯಿಂದ ಭುಜದ ತುದಿಯವರೆಗೆ ವೃತ್ತಾಕಾರದ ಮಾದರಿಯಲ್ಲಿ ಮಸಾಜ್ ಮಾಡಬೇಕು. ಕೈಗಳ ಮೇಲೆ, ಭುಜದ ಮೇಲೆ ಬಟ್ಟೆಗಳು ಇರಬಾರದು. ಮಸಾಜ್ ಮಾಡಲು ಸಾಧ್ಯವಾಗದು.

● **ಹಂತ-8:** ದೇಹದ ಕೊನೆಯ ಮಸಾಜ್ ರೂಪದಲ್ಲಿ ಅಂಗೈಗಳನ್ನು ಮಸಾಜ್ ಮಾಡಬೇಕು. ಅಂಗೈ ಮೇಲೆ, ಕೆಳಗೆ ಎಲ್ಲಾ ಭಾಗದಲ್ಲೂ ಎಣ್ಣೆಯನ್ನು ಅನ್ವಯಿಸಿ ಮಸಾಜ್ ಮಾಡಿ. ಜೊತೆಗೆ ನಿಧಾನವಾಗಿ ತಿಕ್ಕಿರಿ.

## ಈ ನ್ಯಾಚುರಲ್ ವಿಧಾನಗಳ ಮೂಲಕ ಮಗುವಿನ ತ್ವಚೆಯ ರಂಗನ್ನು ಹೆಚ್ಚಿಸಿ

**ತಾ**ಯ್ತನ ಎಂಬುದು ಮಹಿಳೆಯ ಜೀವನದ ಮಧುರವಾದ ಹಾಗೂ ಮ್ಯಾಜಿಕಲ್ ಹಂತವಾಗಿದೆ. ನೀವು ತಾಯಿಯಾದ ಮೇಲೆ ನಿಮ್ಮ ಜೀವನದಲ್ಲೂ ಹಲವಾರು ಬದಲಾವಣೆಗಳು ಉಂಟಾಗುತ್ತವೆ. ಇನ್ನು ತಾಯಂದಿರು ತಮ್ಮ ಮಕ್ಕಳ ತ್ವಚೆಯ ಕಡೆಗೆ ತುಂಬಾನೆ ಗಮನ ಹರಿಸುತ್ತಾರೆ. ಅದಕ್ಕಾಗಿ ಲೋಶನ್, ಕ್ರೀಂ ಬಳಕೆ ಮಾಡುತ್ತಾರೆ. ಆದರ ಬದಲಾಗಿ ನೀವು ಈ ಟಿಪ್ಸ್‌ಗಳನ್ನು ಬಳಸಿದರೆ ತ್ವಚೆಯ ಬಣ್ಣ ರಂಗೇರುವುದು ಖಂಡಿತಾ...

**ಎಣ್ಣೆಯ ಮಸಾಜ್:** ಹಳೆಕಾಲದ ವಿಧಾನ ಇಂದಿಗೂ ಸಹ ಬೆಸ್ಟ್ ಆಗಿದೆ. ಅದೇನೆಂದರೆ ಮಕ್ಕಳಿಗೆ ಎಣ್ಣೆಯ ಮಸಾಜ್ ಮಾಡುವುದು. ಅದಕ್ಕಾಗಿ ನೀವು ಪ್ರತಿ ದಿನ ಮಗುವಿಗೆ ಎಣ್ಣೆ ಮಸಾಜ್ ಮಾಡಿ ಸ್ನಾನ ಮಾಡಿಸಿ. ಇದರಿಂದ ಮಗುವಿನ ತ್ವಚೆಯಲ್ಲಿ ಹೊಳಪು ಬರುತ್ತದೆ.

**ನೀರು ಉಗುರು ಬಿಸಿ ಇರಲಿ:** ಮಗುವಿಗೆ ಸ್ನಾನ ಮಾಡಿಸುವಾಗ ನೀರಿನ ಟೆಂಪ್ರೇಚರ್ ನೋಡಿಕೊಳ್ಳಿ. ಅದು ಹೆಚ್ಚು ಬಿಸಿಯಾಗಿರದಂತೆ ಹಾಗೂ ಹೆಚ್ಚು ತಣ್ಣಗೆಯೂ ಇರದಂತೆ ಇರಬೇಕು.

**ಹಳದಿ- ಚಂದನದ ಲೇಪನ:** ಮಗುವಿನ ತ್ವಚೆ ತುಂಬಾನೆ ನಾಜೂಕಾಗಿರುತ್ತದೆ. ಹಾಗಾಗಿ ಮಗುವಿನ ದೇಹಕ್ಕೆ ಬಳಸುವ ವಸ್ತುಗಳು ಕೆಮಿಕಲ್ ರಹಿತವಾಗಿರುವಂತೆ ನೋಡಿಕೊಳ್ಳಬೇಕು. ಅದಕ್ಕಾಗಿ ನೀವು ಹಳದಿ, ಹಾಲು, ಚಂದನ, ಗಂಧವನ್ನು ಮಿಕ್ಸ್ ಮಾಡಿ ಮಗುವಿಗೆ ಹಚ್ಚಿ ಸ್ನಾನ ಮಾಡಿಸಬೇಕು.

**ಮಾಯಿಶ್ಚರೈಸರ್:** ಮಗುವಿನ ಚರ್ಮವನ್ನು ಯಾವತ್ತೂ ಒಣಗಲು ಬಿಡಬೇಡಿ. ಮಾರುಕಟ್ಟೆಯಲ್ಲಿ ದೊರೆಯುವ ಬೇಬಿ ಮಾಯಿಶ್ಚರೈಸಿಂಗ್ ಕ್ರೀಮ್‌ನ್ನು ಹಚ್ಚಿ. ಕ್ರೀಮ್ ಸೆಲೆಕ್ಟ್ ಮಾಡುವಾಗ ಬೆಸ್ಟ್‌ನ್ನೇ ಸೆಲೆಕ್ಟ್ ಮಾಡಿಕೊಳ್ಳಿ.

**ಸೋಪ್ ಹಚ್ಚಬೇಡಿ:** ಸೋಪ್ ಮಗುವಿನ ತ್ವಚೆಗೆ ಹಾನಿಯುಂಟು ಮಾಡುತ್ತದೆ. ಚರ್ಮವನ್ನು ಡ್ರೈ ಆಗಿಸುತ್ತದೆ. ಕಪ್ಪಾಗಿಸುತ್ತದೆ.



## ತ್ವಚೆಯ ಸೌಂದರ್ಯಕ್ಕೆ ಕಾಸ್ಮೆಟಿಕ್ ಚಿಕಿತ್ಸೆ

**ನೀ**ವು ಮುಖಕ್ಕೆ ಅನೇಕ ಫೇಶಿಯಲ್‌ಗಳನ್ನು ಅಥವಾ ಮಸಾಜ್‌ಗಳನ್ನು ಮಾಡಿರಬಹುದು. ಆದರೆ ನಿಮ್ಮ ಮುಖದ ಕಾಂತಿ ಇನ್ನೂ ಹೆಚ್ಚಬೇಕೆಂದಾದರೆ, ಕೆಲವು ಕಾಸ್ಮೆಟಿಕ್ಸ್ ಚಿಕಿತ್ಸೆಗಳನ್ನು ಮಾಡಿಸಬೇಕಾಗುತ್ತದೆ. ಅವು ಯಾವುವೆಂದು ಒಮ್ಮೆ ನೋಡೋಣ.

**ವಾಂಪಾಯರ್ ಫೇಶಿಯಲ್:** ಈ ಸೌಂದರ್ಯ ಚಿಕಿತ್ಸೆಯಲ್ಲಿ ಒಂದಿಷ್ಟು ರಕ್ತವನ್ನು ಕೇಂದ್ರದಿಂದ ದೂರಕ್ಕೆ ಚಿಮ್ಮಿಸಿ ನಂತರ ಪುನಃ ನಿಮ್ಮ ಮುಖಕ್ಕೆ ಇಂಜೆಕ್ಟ್ ಮಾಡುವುದರ ಮೂಲಕ ನಿಮ್ಮ ಮುಖಕ್ಕೆ ಯಂಗ್ ಲುಕ್ ನೀಡುತ್ತದೆ.

**ಯಲ್ಲೋ ಪೀಲ್:** ಇದರಲ್ಲಿರುವ ರಾಸಾಯನಿಕ ಪೀಲನ್ನು ನಿಮ್ಮ ಮುಖಕ್ಕೆ ಹಚ್ಚಲಾಗುತ್ತದೆ. ಈ ಪೀಲ್ ರಿಟೈನಾಲ್ಡಿಹೈಡ್ ಹಾಗೂ ಟೈರೊಸಿನೇಸ್ ಪ್ರತಿಬಂಧಕಗಳ ಅಥವಾ ವಿಟಮಿನ್ ಸಿ, ಪಹಿಟಿಕ್ ಆಸಿಡ್, ಕೊಜಿಕ್ ಆಸಿಡ್ ಮತ್ತು ಅಜೆಲಿಕ್ ಆಸಿಡ್ ನಂಥಹ ಚರ್ಮಕ್ಕೆ ಒಳಪು ನೀಡುವ ವಸ್ತುಗಳ ಮಿಶ್ರಣವಾಗಿರುತ್ತದೆ. ಆದರೆ ಒಂದು ಬಾರಿ ಮಾಡಿದರೆ ಮುಂದಿನ ಸಿಟ್ಟಿಂಗ್‌ಗೆ ನಾಲ್ಕು ವಾರಗಳ ನಂತರ ಹೋಗಬೇಕು.



**ಮೆಡಿಕಲ್ ಫೇಶಿಯಲ್:** ಈ ಚಿಕಿತ್ಸೆಯಲ್ಲಿ ನೀವು ಮೈಕ್ರೋಡೆರ್ಮಬ್ರೇಶನ್ ಮತ್ತು ಫ್ರುಟ್ ಪೀಲ್ ನಂಥಹ ಚಿಕಿತ್ಸೆಗೆ ಆಗಾಗ ಒಳಗಾಗಬೇಕಾಗುತ್ತದೆ. ಇದರಿಂದ ನಿಮ್ಮ ಚರ್ಮದ ಕಾಂತಿ ಹೆಚ್ಚುತ್ತದೆ.

**ಮೆಸೊಗ್ಲೋ ಪೇಶಿಯಲ್:** ಈ ವಯಸ್ಸು ನಿರೋಧಕ ಚಿಕಿತ್ಸೆಯಲ್ಲಿ ಹ್ಯಾಲುರೋನಿಕ್ ಇಂಜೆಕ್ಷನ್ ಗಳನ್ನು ನೀಡುವುದರ ಮೂಲಕ ಹೊಸ ಕೊಲಾಜೆನ್ ನಿರ್ಮಾಣವಾಗುತ್ತದೆ. ಇದರಿಂದ ನಿಮ್ಮ ಮುಖದಲ್ಲಿ ಹೊಳಪು ಹಾಗೂ ಕಾಂತಿ ಹೆಚ್ಚುತ್ತದೆ.

**ಆಕ್ಸಿ ಬ್ಲಾಸ್ಟ್ ಮತ್ತು ವಾಕ್ಯೂಮ್ ಚಿಕಿತ್ಸೆ:** ಈ ಚಿಕಿತ್ಸೆಯಲ್ಲಿ, ನಿಮ್ಮ ಚರ್ಮದಲ್ಲಿನ ಫ್ರೀ ರಾಡಿಕಲ್ಸ್ ಮೇಲೆ ಈ ಚಿಕಿತ್ಸೆ ಮಾಡಲಾಗುತ್ತದೆ. ಇದು ಆಮ್ಲಜನಕವನ್ನು ನಿಮ್ಮ ಚರ್ಮಕ್ಕೆ ತುಂಬಿಸುತ್ತದೆ ಮತ್ತು ಮುಖದ ಎಲ್ಲಾ ಕಡೆಗೂ ಹರಡುವಂತೆ ಮಾಡಿ ನಿಮ್ಮ ಚರ್ಮದಲ್ಲಿನ ಫ್ರೀ ರಾಡಿಕಲ್ಸ್‌ನ್ನು ನಿವಾರಿಸಿ ಚರ್ಮ ಹೊಳೆಯುವಂತೆ ಮಾಡಲಾಗುತ್ತದೆ. ಅದೇ ರೀತಿ ವಾಕ್ಯೂಮ್ ಚಿಕಿತ್ಸೆಯ ಮೂಲಕ ನಿಮ್ಮ ಮುಖಕ್ಕೆ ವಾಕ್ಯೂಮ್ ಪ್ರೆಶರ್ ಮಾಡಿ ಸತ್ತ ಚರ್ಮವನ್ನು ತೆಗೆಯಲಾಗುತ್ತದೆ.

## ಬ್ಯೂಟಿ ಕಾಲಂ

ವಿಂಟರ್ ಸೀಸನ್‌ನಲ್ಲಿ ಕಣ್ಣಿನ ಕಾಂತಿ ಹೆಚ್ಚಿಸಲು ಬಣ್ಣ ಬಣ್ಣದ ಐ ಶ್ಯಾಡೋ ಬಳಸಬಹುದು.

**ಐ ಮೇಕಪ್ ಎಂದಾಕ್ಷಣ ಕೊಂಚ ಹಿಂಜರಿಯುತ್ತೀವೆ? ಈ ಮೇಕಪ್ ಬಗ್ಗೆ ಸಿಂಪಲ್ ಆಗಿ ಉತ್ತರಿಸಿ**

● ಮೇಕಪ್‌ನಲ್ಲಿ ಹೆಚ್ಚು ಎದ್ದು ಕಾಣುವುದು ಐ ಮೇಕಪ್. ಅದರಲ್ಲೂ ಐ ಶ್ಯಾಡೋಗಳ ಬಳಕೆ. ನೂರೆವತ್ತಕ್ಕೂ ಹೆಚ್ಚಿನ ಬಣ್ಣಗಳ ಬಳಕೆ ನಮ್ಮಲ್ಲಿ ಇದೆ. ಹಬ್ಬಕ್ಕೆ ಮಿಕ್ಸ್ ಮ್ಯಾಚ್ ಮತ್ತು ಶೆನರ್, ಗ್ಲಿಟರ್ ಉಪಯೋಗಿಸಿದರೇ ಚೆಂದ ಕಾಣುವುದು.

● ಐ ಮೇಕಪ್ ಮಾಡುವ ಮುನ್ನ ಕ್ಲೆನ್ಸರ್ ಉಪಯೋಗಿಸಿ ನಂತರ ಐ ಪ್ರೆಮರ್ ಹಚ್ಚಿಕೊಳ್ಳಿ.ನಂತರ ಲೂಸ್ ಪೌಡರನ್ನು ಕಣ್ಣಿನ ಸುತ್ತ ಲೇಪಿಸಿ. ನಂತರ ನಿಮ್ಮ ಇಷ್ಟದ ಶ್ಯಾಡೋ ಕಲರ್ ಬಳಸಿ.

● ಗೋಲ್ಡ್ ಲುಕ್ ಗಾಗಿ ಬಂಗಾರ ಬಣ್ಣದ ಐ ಶ್ಯಾಡೋ ಹಚ್ಚಿ, ಮೊದಲು ಕಣ್ಣಿನ ಒಂದು ತುದಿಯಿಂದ ಇನ್ನೊಂದು ತುದಿಯವರೆಗೂ ಬ್ರಷ್ ಸಹಾಯದಿಂದ ಹರಡಿ. ಗೋಲ್ಡ್ ಗ್ಲಿಟರ್ ಹಚ್ಚಿಕೊಳ್ಳಿ.

● ಸಂಜೆಯ ಮೇಕಪ್ ನಲ್ಲಿ ಹಸಿರು,ನೀಲಿ,ನೇರಳೆ, ಬರ್ಗೆಂಡ್ ಐ ಶ್ಯಾಡೋ ಗ್ರಾ ್ಯಂಡ್ ಲುಕ್ ನೀಡುವುದು.

**ಸಾಂಪ್ರದಾಯಿಕ ಐ ಶ್ಯಾಡೋ ಬಳಸುವುದು ಹೇಗೆ?**

● ಗುಲಾಬಿ ಬಣ್ಣದ ಐ ಶ್ಯಾಡೋ ಎಲ್ಲ ಉಡುಪಿಗೂ ಹೊಂದಿಕೊಳ್ಳುವುದರಿಂದ ಗುಲಾಬಿ ಬಣ್ಣದ ಗ್ಲಿಟೆಡ್ ಐ ಶ್ಯಾಡೋ ಉಪಯೋಗಿಸಿದರೆ ಸಾಂಪ್ರದಾಯಿಕ ಲುಕ್ ನೀಡುವುದು.

● ಟ್ರಡಿಷನಲ್ ಉಡುಗೆ ಧರಿಸಿದಾಗ ಆ ಉಡುಪಿಗೆ ಹೊಂದುವ ಬಣ್ಣದ ಐ ಶ್ಯಾಡೋ ಹಾಕಿಕೊಳ್ಳಬಹುದು ಅಥವಾ ಡಬ್ಬಲ್ ಕಲರ್ ಮಿಕ್ಸ್ ಅಂಡ್ ಮ್ಯಾಚ್ ಮಾಡಿ ಹಾಕಬಹುದು.



## ನಿಂಬೆರಸದಿಂದ ಶರೀರದ ತೂಕ ಕಡಮೆ ಮಾಡಿ



**ನಿಂಬೆಯಲ್ಲಿ ವಿಟಾಮಿನ್ ಸಿ ಇರುವುದರಿಂದ ಇದು ಆರೋಗ್ಯಕ್ಕೆ ಬಹಳ ಉಪಕಾರಿಯಾಗಿದೆ. ಚರ್ಮದ ಕಾಂತಿಗೂ ನಿಂಬೆ ಉಪಯುಕ್ತ. ನಿಂಬೆ ಹಣ್ಣಿನ ಗುಣಗಳಿಂದ ಅನೇಕ ರೋಗಗಳನ್ನು ಶಮನಮಾಡಬಹುದು.**

**■ ತೂಕ ಕಡಿಮೆ ಮಾಡಲು**

ಉಗುರು ಬೆಚ್ಚಗಿನ ನೀರಿನಲ್ಲಿ ಸ್ವಲ್ಪ ಜೇನು ಹಾಗೂ ನಿಂಬೆರಸ ಸೇರಿಸಿ ಕುಡಿದರೆ ಇದು ನಿಮ್ಮ ದೇಹದ ತೂಕವನ್ನು ಕಡಿಮೆ ಮಾಡಲು ಸಹಾಯಕವಾಗಿದೆ.

**■ ಜೀರ್ಣಕ್ರಿಯೆ**

ನಿಂಬೆಯಲ್ಲಿ ಸಿಟ್ರಿಕ್ ಆ್ಯಸಿಡ್ ಇದೆ. ನಿಂಬೆ ರಸ ಕುಡಿಯುವುದರಿಂದ ಜೀರ್ಣಕ್ರಿಯೆಯನ್ನು ಉತ್ತಮವಾಗಿಸುತ್ತದೆ. ಅಲ್ಲದೆ ಹೊಟ್ಟೆ ನೋವಿನಂತಹ ಸಮಸ್ಯೆಯನ್ನು ನಿವಾರಿಸುತ್ತದೆ.

**■ ಆಂಟಿಬ್ಯಾಕ್ಟಿರಿಯಲ್ ಗುಣ**

ನಿಂಬೆಯಲ್ಲಿ ಆಂಟಿಬ್ಯಾಕ್ಟಿರಿಯಲ್ ಗುಣ ಇರುವುದರಿಂದ ನಿಂಬೆ ರಸವು ಮಲೇರಿಯಾ, ಕಾಲರ, ಥೈರಾಯ್ಡ್‌ನಂತಹ ಹಲವು ರೋಗಾಣು ಬ್ಯಾಕ್ಟೀರಿಯಾಗಳನ್ನು ಶಮನ ಮಾಡುತ್ತದೆ.

**■ ಆಂತರಿಕ ರಕ್ತಸ್ರಾವ**

ನಿಂಬೆಯಲ್ಲಿ ನಂಜುನಿರೋಧಕ ಮತ್ತು ಹೆಪ್ಪುಗಟ್ಟಿಸುವ ಗುಣಗಳನ್ನು ಹೊಂದಿರುವುದರಿಂದ ಆಂತರಿಕ ರಕ್ತಸ್ರಾವವನ್ನು ನಿಲ್ಲಿಸುತ್ತದೆ. ನಿಂಬೆರಸವನ್ನು ಒಂದು ಸಣ್ಣ ಹತ್ತಿಯ ಉಂಡೆಯಲ್ಲಿ ಅದ್ದಿ ಅದನ್ನು ಮೂಗಿನೊಳಗೆ ಇಡುವುದರಿಂದ ರಕ್ತಸ್ರಾವ ನಿಲ್ಲುತ್ತದೆ.

**■ ಹಲ್ಲಿನ ರಕ್ಷಣೆ**

ನಿಂಬೆಯ ರಸವನ್ನು ಹೆಚ್ಚಾಗಿ ಟೂಥ್‌ಪೇಸ್ಟ್‌ಗಳಲ್ಲಿ ಬಳಸಲಾಗುತ್ತದೆ. ನಿಂಬೆ ರಸವನ್ನು ಹಲ್ಲುನೋವು ಇದ್ದ ಜಾಗಕ್ಕೆ ಹಚ್ಚುವುದರಿಂದ ಹಲ್ಲುನೋವು ಕಡಿಮೆಯಾಗುತ್ತದೆ. ನಿಂಬೆ ರಸವನ್ನು ದವಡೆಗೆ ಸವರುವುದರಿಂದ ದವಡೆಯಲ್ಲಾಗುವ ರಕ್ತಸ್ರಾವವನ್ನು ಕಡಿಮೆ ಮಾಡಬಹುದು.

**■ ಕೂದಲಿನ ಆರೈಕೆ**

ನಿಂಬೆರಸವನ್ನು ತಲೆ ಬುರುಡೆಗೆ ಹಚ್ಚುವುದರಿಂದ ತಲೆಹೊಟ್ಟು, ಕೂದಲು ಉದುರುವಿಕೆ ಹಾಗೂ ಇನ್ನಿತರ ಸಮಸ್ಯೆಯನ್ನು ನಿವಾರಿಸುತ್ತದೆ.

## ಮುಖವನ್ನು ಬೆಳ್ಳಗಾಗಿಸುವ ಫೇಸ್ ಕ್ರೀಮ್‌ನ ಹಿಂದಿರುವ ಕರಾಳ ಮುಖ

**ಯಾ**ವುದೇ ಚಾನೆಲ್ ತಿರುಗಿಸಿ ನೋಡಿದರೂ ನಿಮಗೆ ಕಾಣಸಿಗುವಂತಹ ಒಂದು ಜಾಹೀರಾತು ಎಂದರೆ ತ್ವಚೆಯನ್ನು ಬಿಳಿಯಾಗಿಸುವಂತಹ ಕ್ರೀಮ್ ಗಳದ್ದು. ಮಾರುಕಟ್ಟೆಯಲ್ಲಿ ಇಂದು ಹಲವಾರು ರೀತಿಯ ಕ್ರೀಮ್‌ಗಳು ಲಭ್ಯವಿದೆ. ಇದನ್ನು ಜನರು ಬಳಸಿಕೊಳ್ಳಬೇಕೆಂದು ಬಾಲಿವುಡ್ ನಟ, ನಟಿಯರನ್ನು ಬಳಸಿಕೊಂಡು ಜಾಹೀರಾತು ಮೂಲಕ ಜನರನ್ನು ಮರುಳುಗೊಳಿಸಲಾಗಿಸುತ್ತದೆ. ಸನ್ ಸ್ಕ್ರೀನ್ ನಲ್ಲಿ ಇರುವಂತಹ ಕೆಲವೊಂದು ಅಂಶಗಳು ಚರ್ಮದ ಬಣ್ಣವನ್ನು ಅದೇ ರೀತಿಯಲ್ಲಿ ಉಳಿಸಿಕೊಳ್ಳುವುದು. ಯಾಕೆಂದರೆ ಚರ್ಮದ ಬಣ್ಣವನ್ನು ಬಿಳಿಗೊಳಿಸುವ ಮೆಲನಿನ್ ಎನ್ನುವ ಅಂಶದ ಸ್ರವಿಸುವಿಕೆಯನ್ನು ತಡೆಯಬಹುದು. ಇದರಿಂದ ನಿಯಮಿತವಾಗಿ ಇದನ್ನು ಬಳಸಿಕೊಂಡಾಗ ತ್ವಚೆಯ ಬಣ್ಣವು ಬಿಳಿಯಾಗಬಹುದು.



ಆದರೆ ಕ್ರೀಮ್ ಹಚ್ಚಿಕೊಳ್ಳುವುದನ್ನು ನಿಲ್ಲಿಸಿದಾಗ ಮತ್ತೆ ಅದೇ ಬಣ್ಣ ಮರಳಿ ಬರಬಹುದು. ಇಂತಹ ಕ್ರೀಮ್‌ಗಳನ್ನು ಯಾವ್ಯಾವ ಸಾಮಗ್ರಿಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಸೇರಿಸಲಾಗಿದೆ ಎನ್ನುವ ಬಗ್ಗೆ ಮಾಹಿತಿಯನ್ನು ಸರಿಯಾಗಿ ನೀಡಲ್ಲ, ನಾವು ಇಂತಹ ಕ್ರೀಮ್ ಗಳಲ್ಲಿ ಇರುವ ಲೇಬಲ್ ಗಳನ್ನು ಓದಲು ಬಯಸುವುದಿಲ್ಲ, ಇದನ್ನು ಓದಿಕೊಂಡರೆ ಯಾಕೆ ಇದು ಬಳಕೆಯಾಗುವುದು ಎಂದು ನಮಗೆ ತಿಳಿಯದು. ತ್ವಚೆ ಬಿಳಿಗೊಳಿಸುವಂತಹ ಕ್ರೀಮ್‌ಗಳಲ್ಲಿ ಕಾರ್ಟಿಕೋ ಮತ್ತು ಕ್ಲೊಬೆಟಾಸೋಲ್ ಎನ್ನುವಂತಹ ಸ್ಟಿರಾಯ್ಡ್‌ಗಳನ್ನು ಬಳಸಲಾಗುತ್ತದೆ. ಇದನ್ನು ಚರ್ಮ ವೈದ್ಯರ ಸಲಹೆ ಮೇರೆಗೆ ಮಾತ್ರ ಇವುಗಳನ್ನು ಬಳಸಿಕೊಳ್ಳಬಹುದಾಗಿದೆ. ಕ್ರೀಮ್‌ನಲ್ಲಿ ಇರುವಂತಹ ಇಂತಹ ಸ್ಟಿರಾಯ್ಡ್‌ಗಳು ಬಳಕೆದಾರರಿಗೆ ಒಳ್ಳೆಯ ಹಾಗೂ ವೇಗದ ಫಲಿತಾಂಶ ನೀಡಬಹುದು.

ಆದರೆ ನಿಯಮಿತವಾಗಿ ಇದನ್ನು ಬಳಸಿಕೊಂಡರೆ ಮುಂದೆ ಚರ್ಮದಲ್ಲಿನ ಸ್ಟಿರಾಯ್ಡ್‌ಗೆ ಹಾನಿಯಾಗಬಹುದು. ಸ್ಟಿರಾಯ್ಡ್‌ನ್ನು ಬಳಸುವುದರಿಂದ ಖಾಯಂ ಆಗಿ ಕಲೆಗಳು, ಮೊಡವೆಗಳು, ಚರ್ಮದ ಅಲರ್ಜಿ ಮತ್ತು ಚರ್ಮವನ್ನು ಕಪ್ಪು ಮಾಡುವಂತಹ ಅಡ್ಡಪರಿಣಾಮಗಳು ಆಗಬಹುದು.

ತ್ವಚೆಯನ್ನು ಬಿಳಿಗೊಳಿಸುವ ಕ್ರೀಮ್‌ನಲ್ಲಿ ಹೈಡ್ರೊಕ್ವಿನೋನ್ ಎನ್ನುವ ರಾಸಾಯನಿಕವಿದೆ. ಇದು ಒಳ್ಳೆಯ ಬ್ಲೀಚಿಂಗ್ ಗುಣವನ್ನು ಹೊಂದಿದೆ. ಇದು ಚರ್ಮಕ್ಕೆ ತುಂಬಾ ಗಂಭೀರ ಪರಿಣಾಮ ಬೀರಬಹುದು. ಇದರಿಂದ ಚರ್ಮದಲ್ಲಿ ಬಿಳಿ ಕಲೆಗಳು ಮತ್ತು ಬಿಸಿಲಿನ ಸೂಕ್ಷ್ಮತೆ ಉಂಟಾಗಬಹುದು. ಶೇ.4ಕ್ಕಿಂತ ಹೆಚ್ಚು ಹೈಡ್ರೊಕ್ವಿನೋನ್ ಅಂಶವಿದ್ದರೆ ಮಾತ್ರ ಚರ್ಮವು ಬಿಳಿಯಾಗುವುದು. ತ್ವಚೆ ಬಿಳಿಗೊಳಿಸುವ ಕ್ರೀಮ್‌ಗಳಲ್ಲಿ ಕೆಲವೊಂದು ವಿಟಮಿನ್ ಅಂಶಗಳು ಕೂಡ ಇರುವುದು. ಇದು ತ್ವಚೆಗೆ ಪೋಷಣೆ ನೀಡುವುದು.



ಕೊಲಿಕ್ ಆಮ್ಲ ಮತ್ತು ರೆಟಿನೊಯಿಕ್ ಆಮ್ಲದಂತಹ ವಿಟಮಿನ್‌ಗಳು ಕ್ರೀಮ್‌ಗಳಲ್ಲಿ ಇರುವುದು. ಇದು ಚರ್ಮವು ಸೂರ್ಯನ ಬಿಸಿಲಿಗೆ ಹೊಂದಿಕೊಳ್ಳಲು ಕಷ್ಟಪಡುವುದು. ಇದನ್ನು ಬಳಸಿಕೊಂಡರೆ ಚರ್ಮದಲ್ಲಿ ಕಲೆಗಳು ಮೂಡಬಹುದು. ಇದರಲ್ಲಿ ಇರುವಂತಹ ಉನ್ನತ ಮಟ್ಟದ ಪಾದರಸವು ನರವ್ಯವಸ್ಥೆಗೂ ಹಾನಿ ಉಂಟು ಮಾಡಬಹುದು. ಇಂತಹ ಕ್ರೀಮ್‌ಗಳು ತ್ವಚೆಯನ್ನು ಬಿಳಿ ಮಾಡಬಹುದು. ಆದರೆ ಚರ್ಮದ ಬಣ್ಣವು ಅನುವಂಶೀಯವಾಗಿ ಬರುವುದು. ಇಂತಹ ಕ್ರೀಮ್‌ಗಳನ್ನು ಬಳಸಿಕೊಳ್ಳುವ ಬದಲು ನೈಸರ್ಗಿಕವಾಗಿ ಮಾಡಿದ ಫೇಸ್ ಪ್ಯಾಕ್ ಬಳಸಿ. ಮನೆಯಲ್ಲಿ ಮಾಡಿದಂತಹ ಫೇಸ್ ಪ್ಯಾಕ್ ನಲ್ಲಿ ಅಲೋವೆರಾ, ಅರಿಶಿನ, ಜೇನುತುಪ್ಪ, ಹಾಲು, ಲಿಂಬೆರಸ ಇತ್ಯಾದಿಗಳನ್ನು ಬಳಸಿಕೊಳ್ಳಲಾಗುವುದು. ಇದು ಚರ್ಮವನ್ನು ಬಿಳಿಯಾಗಿಸುವುದು.

### ವಸ್ಯಾ ಕರ್ನಾಟಕ ಸಂಘದ ಪ್ರಾಯೋಜಕತ್ವದಲ್ಲಿ ಶ್ರೀ ಕಟೀಲು ಯಕ್ಷಕಲಾ ವೇದಿಕೆಯ ಯಕ್ಷಗಾನ ತರಬೇತಿಗೆ ಚಾಲನೆ

# ಬಾಲ ಕಲಾವಿದರು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಸಂಸ್ಕಾರವಂತರಾಗಿ ಬೆಳೆಯುತ್ತಿರುವುದು ನಮಗೆಲ್ಲರಿಗೂ ಹೆಮ್ಮೆ - ಪಾಂಡು ಎಲ್. ಶೆಟ್ಟಿ





ವಸ್ಯಾ, ಜೂ. 19- ಶಿಷ್ಟ ಜಾನಪದ ಕಲೆಯಾದ ಯಕ್ಷಗಾನವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ವಸ್ಯಾ ಕರ್ನಾಟಕ ಸಂಘದ ಪ್ರಾಯೋಜಕತ್ವದಲ್ಲಿ ದಿ. ಕರ್ನಿರೆ ಶ್ರೀಧರ ಶೆಟ್ಟಿ ಮುಂದಾಳತ್ವದಲ್ಲಿ ಸ್ಥಾಪನೆಗೊಂಡ ಶ್ರೀ ಕಟೀಲು ಯಕ್ಷಕಲಾ ವೇದಿಕೆ ವತಿಯಿಂದ ಸಂಸ್ಥೆಯ ದಶಮಾನೋತ್ಸವ ವರ್ಷದ ಯಕ್ಷಗಾನ ತರಬೇತಿ ಶಿಬಿರಕ್ಕೆ ಚಾಲನೆ ಹಾಗೂ ಸಂಘದ ವಾರ್ಷಿಕ ಕಾರ್ಯಕ್ರಮದ ಪ್ರಯುಕ್ತ ನಡೆಯಲಿರುವ ಯಕ್ಷಗಾನ ಪ್ರದರ್ಶನಕ್ಕೆ 'ಅಮರಶಿಲ್ಪಿ ಶಂಭು ಕಲ್ಕುಡ' ಎಂಬ ಕಥಾ ಪ್ರಸಂಗದ ಮುಹೂರ್ತವು ಜೂ. 17ರ ಬುಧವಾರದಂದು ವೀರ ಸಾವರ್ಕರ್ ನಗರದ ವಿ.ವಿ.ಎಂ.ಸಿ. ಸಮಾಜ ಮಂದಿರದಲ್ಲಿ ಸಂಸ್ಥೆಯ ಅಧ್ಯಕ್ಷ ಪಾಂಡು ಎಲ್. ಶೆಟ್ಟಿ, ಗೌರವಾಧ್ಯಕ್ಷ ವಿಶ್ವನಾಥ ಪಿ. ಶೆಟ್ಟಿ, ವಸ್ಯಾ ಕರ್ನಾಟಕ ಸಂಘದ ಅಧ್ಯಕ್ಷ ಕರ್ನೂರು ಶಂಕರ ಕೆ. ಆಳ್ವ, ಯಕ್ಷ ಗುರು ಕಟೀಲು ಸದಾನಂದ ಶೆಟ್ಟಿ, ಯಕ್ಷಗಾನ ಸಾಹಿತ್ಯಕಾರ ಕೊಲ್ಯಾರು ರಾಜು ಶೆಟ್ಟಿ ಹಾಗೂ ಸರ್ವ ಪದಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಿತು.

ಕುಸುಮ್ ಬಿ. ಸುವರ್ಣ ಪ್ರಾರ್ಥನೆಯೊಂದಿಗೆ ಗಣ್ಯರು ದೀಪ ಪ್ರಜ್ವಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಂಸ್ಥೆಯ ಅಧ್ಯಕ್ಷ ಪಾಂಡು ಎಲ್. ಶೆಟ್ಟಿ ಮಾತನಾಡಿ, ಕನ್ನಡ ನಾಡಿನ ಕಲೆ-ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಯಕ್ಷಗಾನವನ್ನು ಕಲಿಯುತ್ತಿರುವ ಸಂಸ್ಥೆಯ ಬಾಲ ಕಲಾವಿದರು ಶೈಕ್ಷಣಿಕ ಪ್ರಗತಿಯನ್ನು ಸಾಧಿಸುವುದರ ಜೊತೆಗೆ ಸಂಸ್ಕಾರವಂತರಾಗಿ ಬೆಳೆಯುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ ಎಂದು ನುಡಿದರು.

ವಸ್ಯಾ ಕರ್ನಾಟಕ ಸಂಘ ಹಾಗೂ ಶ್ರೀ ಕಟೀಲು ಯಕ್ಷಕಲಾ ವೇದಿಕೆಯ ಗೌರವಾಧ್ಯಕ್ಷ ವಿಶ್ವನಾಥ ಪಿ. ಶೆಟ್ಟಿ ಮಾತನಾಡಿ, ಇಲ್ಲಿ ಯಕ್ಷಗಾನ ಕಲೆಯನ್ನು ಕರಗತ ಮಾಡಿಕೊಳ್ಳುತ್ತಿರುವ ಮಕ್ಕಳು ತಮ್ಮ ಯಕ್ಷಗಾನಾಭಿನಯದ ಮೂಲಕ ಮುಂಬಯಿ ಹಾಗೂ ಒಳನಾಡಿನಲ್ಲಿಯೂ ಸಂಸ್ಥೆಯ ಕೀರ್ತಿಯನ್ನು ಪಸರಿಸಿದ್ದಾರೆ. ಬಾಲ ಕಲಾವಿದರು ತಮ್ಮ ಶಾಲಾ ಶಿಕ್ಷಣದೊಂದಿಗೆ ಯಕ್ಷಗಾನವನ್ನು ಕಲಿತು ನಮ್ಮ ಸಂಸ್ಕೃತಿ-ಸಂಸ್ಕಾರವನ್ನು ಉಳಿಸಿ ಬೆಳೆಸುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು.

ವಸ್ಯಾ ಕರ್ನಾಟಕ ಸಂಘದ ಅಧ್ಯಕ್ಷ ಕರ್ನೂರು ಶಂಕರ್ ಆಳ್ವ ಸಂದರ್ಭೋಚಿತವಾಗಿ ಮಾತನಾಡಿದರು. ಕಟೀಲು ಯಕ್ಷಕಲಾ ವೇದಿಕೆಯ ಉಪಾಧ್ಯಕ್ಷ ಓ. ಪಿ. ಪೂಜಾರಿ, ಕೋಶಾಧಿಕಾರಿ ಭಾರತಿ ಎಚ್. ಶೆಟ್ಟಿ, ಸಂಚಾಲಕ ಹರೀಶ್ ಶೆಟ್ಟಿ, ವಸ್ಯಾ ಕರ್ನಾಟಕ ಸಂಘದ ಗೌರವ ಪ್ರಧಾನ ಕಾರ್ಯದರ್ಶಿ ಹರಿಪ್ರಸಾದ್ ಶೆಟ್ಟಿ ಹಾಗೂ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಉಷಾ ಶ್ರೀಧರ್ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಸ್ಥೆಯ ಗೌರವ ಪ್ರಧಾನ ಕಾರ್ಯದರ್ಶಿ ಅನಿತಾ ದೇವೇಂದ್ರ ಬುನ್ನಾನ್ ವಂದನಾರ್ಪಣೆ ಸಲ್ಲಿಸಿದರು. ಕೋಶಾಧಿಕಾರಿ ಅಮಿತಾ ಸಂತೋಷ್ ಶೆಟ್ಟಿ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಪೂರ್ಣಿಮಾ ಅನೂಪ್ ಶೆಟ್ಟಿ, ಮಮತಾ ಜಯ ಶೆಟ್ಟಿ, ಸುರೇಖಾ ಶೆಟ್ಟಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು. ಕಾರ್ಯಕ್ರಮದಲ್ಲಿ ಪಾಲಕರು ಹಾಗೂ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು

### ಶತಮಾನೋತ್ಸವದ ಹೊಸ್ತಿಲಲ್ಲಿ ಮಹಾರಾಷ್ಟ್ರ ಚೇಂಬರ್ ಆಫ್ ಕಾಮರ್ಸ್

# ಕರುಣಾಕರ ಶೆಟ್ಟಿ ಹಿರಿಯ ಉಪಾಧ್ಯಕ್ಷರಾಗಿ ಆಯ್ಕೆ



ಮುಂಬಯಿ,ಜೂ.19 - ಮಹಾರಾಷ್ಟ್ರದ ವ್ಯಾಪಾರ, ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರದ ಪ್ರತಿಷ್ಠಿತ ಸಂಸ್ಥೆಯಾದ ಮಹಾರಾಷ್ಟ್ರ ಚೇಂಬರ್‌ಆಫ್ ಕಾಮರ್ಸ್ ಇಂಡಸ್ಟ್ರಿ ಆ್ಯಂಡ್ ಅಗ್ರಿಕಲ್ಚರ್ (ಎಂಎಂಸಿಸಿಐಎ) ಶತಮಾನೋತ್ಸವದ ಹೊಸ್ತಿಲಲ್ಲಿರುವ ಸಂದರ್ಭದಲ್ಲಿ 2026-28ನೇ ಅವಧಿಯ ಪದಾಧಿಕಾರಿಗಳ ಚುನಾವಣೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ.

ಸುಮಾರು 7000 ನೇರ ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಮೂಲಕ 20 ಲಕ್ಷಕ್ಕೂ ಹೆಚ್ಚು ವ್ಯಾಪಾರಿಗಳು, ಉದ್ಯಮಿಗಳು ಮತ್ತು ಕೈಗಾರಿಕಾ ವಲಯವನ್ನು ಪ್ರತಿನಿಧಿಸುವ ಮಹಾರಾಷ್ಟ್ರ ಚೇಂಬರ್ ಅಧ್ಯಕ್ಷರಾಗಿ ಹಾಲಿ ಅಧ್ಯಕ್ಷ ರವೀಂದ್ರ ಮಾಣಗಾವೆ ಅವಿರೋಧವಾಗಿ ಮರುಆಯ್ಕೆಯಾಗಿದ್ದು, ಸದಸ್ಯರು ಅವರ ನಾಯಕತ್ವದ ಮೇಲೆ ಮತ್ತೊಮ್ಮೆ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಹಿರಿಯ ಉಪಾಧ್ಯಕ್ಷ ಸ್ಥಾನಕ್ಕೆ ಕರುಣಾಕರ ಶೆಟ್ಟಿ 1,885 ಮತಗಳಿಂದ ಜಯಗಳಿಸಿದರು. ಉಪಾಧ್ಯಕ್ಷರಾಗಿ ಸುನಿತಾ ಫಾಲ್ಗುಣೆ, ಸಂತೋಷ ರಾಣೆ ಹಾಗೂ ಮಹೇಂದ್ರ ಅಗರ್ವಾಲ್ ಆಯ್ಕೆಯಾದರು. ಡಾ. ಧನಶ್ರೀ ಹರದಾಸ್, ಕಿರಣ್ ಭೋಸ್ಲೆ,ಸಂಜಯ್ ಶೇಟೆ, ಸರ್ಜೇರಾವ್ ನಲಾವಡೆ, ಸಂಜಯ ಕಿರ್ದತ್ ಹಾಗೂ ಸಿದ್ಧಾರ್ಥ್ ರುಹಾಟಿಯಾ ವಿವಿಧ ವಿಭಾಗಗಳಿಂದ ಅವಿರೋಧವಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದು, ಆಡಳಿತ ಮಂಡಳಿಯ ಹಲವು ಸದಸ್ಯರೂ ಅವಿರೋಧವಾಗಿ ಆಯ್ಕೆಯಾದರು.

99 ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ವಿದರ್ಭ ವಿಭಾಗದಿಂದ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿರುವುದು ಈ ಬಾರಿಯ ಚುನಾವಣೆಯ ವಿಶೇಷತೆ. ಮುಖ್ಯ ಚುನಾವಣಾಧಿಕಾರಿ ಹಾಗೂ ಪ್ರಧಾನ ಕಾರ್ಯದರ್ಶಿ ಸುರೇಶ್ ಘೋರಪಡೆ ಅವರ ಮಾರ್ಗದರ್ಶನದಲ್ಲಿ ಸಂಪೂರ್ಣ ಪ್ರಕ್ರಿಯೆ ಶಾಂತಿಯುತ, ಶಿಸ್ತುಬದ್ಧ ಹಾಗೂ ಪಾರದರ್ಶಕವಾಗಿ ನಡೆದಿದ್ದು, ಹೊಸ ಪದಾಧಿಕಾರಿಗಳ ನೇತೃತ್ವದಲ್ಲಿ ವ್ಯಾಪಾರ, ಕೈಗಾರಿಕೆ ಹಾಗೂ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಚೇಂಬರ್ ಇನ್ನಷ್ಟು ಚುರುಕಾಗಿ ಕಾರ್ಯನಿರ್ವಹಿಸಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ.

### ಚಿಣ್ಣರ ಬಿಂಬ ಮುಂಬಯಿ : ಥಾಣೆ ನವೋದಯ ಶಿಬಿರ 26-27ನೇ ಶೈಕ್ಷಣಿಕ ಸಾಲಿನ ಕನ್ನಡ ತರಗತಿಯ ಉದ್ಘಾಟನೆ

# ನಿಸ್ವಾರ್ಥ ಸೇವೆಯನ್ನು ಮಾಡುತ್ತಿರುವ ಚಿಣ್ಣರ ಬಿಂಬವು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಲಿ - ನಯನಾ ಎಸ್. ಶೆಟ್ಟಿ






ಥಾಣೆ, ಜೂ. 19- ಚಿಣ್ಣರಬಿಂಬವು ಮಕ್ಕಳಿಗೆ ನಮ್ಮ ನಾಡಿನ ಮಕ್ಕಳಿಗೆ ಸಂಸ್ಕೃತಿ, ಸಂಸ್ಕಾರವನ್ನು ಕಲಿಸಿ ಉತ್ತಮ ಪ್ರಜೆಗಳನ್ನಾಗಿ ಮಾಡುವ ಸಂಸ್ಥೆ. ಇಲ್ಲಿ ಕಲಿಯುತ್ತಿರುವ ಮಕ್ಕಳು ತಮ್ಮ ಉತ್ತಮ ಗುಣ ನಡತೆಗಳಿಂದ ಸಮಾಜದಲ್ಲಿ ಉತ್ತಮ ಸ್ಥಾನವನ್ನು ಪಡೆದಿದ್ದಾರೆ. ಚಿಣ್ಣರು ಇಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳುತ್ತಾ ಮಾನಸಿಕವಾಗಿ ಸದೃಢರಾಗಿ ಬೆಳೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಮಕ್ಕಳ ಭವಿಷ್ಯವು ಉಜ್ವಲವಾಗಲೆಂದು ಸ್ಥಾಪಿಸಲ್ಪಟ್ಟ ಸಂಸ್ಥೆ ಇಡೀ ಮಹಾರಾಷ್ಟ್ರದಲ್ಲಿ ಕ್ರಾಂತಿಯನ್ನು ಮಾಡಿ ಜನರ ಮನದಂಗಳದಲ್ಲಿ ರಾರಾಜಿಸುತ್ತಿದೆ. ಇದು ಇನ್ನೂ ಮುಂದೆಯೂ ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ ಜಗತ್ತಿನಾದ್ಯಂತ ಕೀರ್ತಿ ಪತಾಕೆಯನ್ನು ಹಾರಿಸಲಿ ಎಂದು ನವೋದಯ ಕನ್ನಡ ಸೇವಾ ಸಂಘದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ನಯನಾ ಎಸ್. ಶೆಟ್ಟಿ, ಥಾಣೆ ನವೋದಯ ಶಿಬಿರದ ಚಿಣ್ಣರ ಬಿಂಬದ ಕನ್ನಡ ಮತ್ತು ಭಜನೆ ತರಗತಿಗಳ ಉದ್ಘಾಟನೆಯ ಸಮಯದಲ್ಲಿ ದೀಪ ಪ್ರಜ್ವಲಿಸಿ ಮಾತನಾಡಿದರು.

ಚಿಣ್ಣರಬಿಂಬ ಮುಂಬಯಿ ಚಾರಿಟೇಬಲ್ ಟ್ರಸ್ಟ್ ಥಾಣೆ ನವೋದಯ ಶಿಬಿರದ 2026-27ನೇ ಶೈಕ್ಷಣಿಕ ಸಾಲಿನ ತರಗತಿಗಳ ಉದ್ಘಾಟನಾ ಕಾರ್ಯಕ್ರಮವು ಜೂನ್ 14ರ ಆದಿತ್ಯವಾರದಂದು ನವೋದಯದ ಪ್ರೈಮರಿ ಸ್ಕೂಲ್‌ನಲ್ಲಿ ಸಂಪನ್ನಗೊಂಡು ಈ ಕಾರ್ಯಕ್ರಮದಲ್ಲಿ ಚಿಣ್ಣರ ಬಿಂಬವು ನಿಸ್ವಾರ್ಥ ಭಾವದಿಂದ ಕಾರ್ಯವನ್ನೆಸಗುತ್ತಿದೆ. ಸದ್ರಿ ವರ್ಷದ ಶೈಕ್ಷಣಿಕ ಸಾಲಿನ ತರಗತಿಗಳು ಉತ್ತಮ ರೀತಿಯಲ್ಲಿ ನಡೆಯುತ್ತಿರಲಿ ಎಂದು ನುಡಿದು ಅವರು ಮಕ್ಕಳಿಗೆ ಶುಭ ಹಾರೈಸಿದರು.

ಮಕ್ಕಳ ಭಜನೆಯೊಂದಿಗೆ ಪ್ರಾರಂಭಗೊಂಡ ಈ ಕಾರ್ಯಕ್ರಮದಲ್ಲಿ ಪ್ರಾದೇಶಿಕ ಮುಖ್ಯಸ್ಥೆ ಸ್ಮಿತಾ ಸುಧಾಕರ್, ಶಿಬಿರ ಮುಖ್ಯಸ್ಥೆ ಪ್ರತಿಭಾ ಶೆಟ್ಟಿ, ಭಜನಾ ಶಿಕ್ಷಕಿ ಶೋಭಾ ಜೆ. ಶೆಟ್ಟಿ ಉಪಸ್ಥಿತರಿದ್ದರು. ಈ ಕಾರ್ಯಕ್ರಮವನ್ನು ಕನ್ನಡ ಶಿಕ್ಷಕಿ ಶೋಭಾ ಎಸ್. ಶೆಟ್ಟಿ ನಿರೂಪಿಸಿ ಧನ್ಯವಾದ ಸಮರ್ಪಿಸಿದರು. ಇನ್ನೋರ್ವ ಭಜನಾ ಶಿಕ್ಷಕಿ ಶ್ರದ್ಧಾ ಶೆಟ್ಟಿ, ಮಾಜಿ ಸಾಂಸ್ಕೃತಿಕ ಮುಖ್ಯಸ್ಥೆ ಸುಕನ್ಯಾ ಪೂಜಾರಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಮತ್ತು ಅವರ ಪಾಲಕರು ಭಾಗವಹಿಸಿದ್ದರು.

ಚಿಣ್ಣರ ಬಂಬಕ್ಕೆ ಹೊಸದಾಗಿ ದಾಖಲಾತಿಗೊಂಡ ಚಿಣ್ಣರು ಮತ್ತು ಪಾಲಕರು ಆಗಮಿಸಿ ಚಿಣ್ಣರ ಬಿಂಬದ ಕಾರ್ಯವೈಖರಿಯನ್ನು ಪ್ರಶಂಸಿಸಿದರು. ಎಲ್ಲಾ ಪುಟಾಣಿಗಳು ರಾಷ್ಟ್ರೀಯ ಹಾಡು ''ವಂದೇ ಮಾತರಂ''ನ್ನು ಹಾಡಿದರು. ನಂತರ ತರಗತಿಗಳು ಆರಂಭಗೊಂಡು ಚಿಣ್ಣರು ತಾವು ಊರಿನಲ್ಲಿ ಕಳೆದ ಸವಿ ನೆನಪುಗಳನ್ನು ಮೆಲುಕು ಹಾಕಿದರು.

ಹೊಸ ಸೇರ್ಪಡೆಗೊಂಡ ಮಕ್ಕಳ ಪಾಲಕರು ಚಿಣ್ಣರ ಬಿಂಬದ ಉದ್ದೇಶ ನಮಗೆ ತುಂಬಾ ಇಷ್ಟವಾದ ಕಾರಣ ನಾವು ಮಕ್ಕಳನ್ನು ಸೇರಿಸಿದ್ದೇವೆ. ನಾವು ಕೂಡಾ ಇದರ ಒಂದು ಭಾಗವಾಗಲು ಇಚ್ಛಿಸುತ್ತೇವೆ ಎಂಬ ಆಶಯ ವ್ಯಕ್ತಪಡಿಸಿದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

### ಚಿಣ್ಣರಬಿಂಬ ಐರೋಲಿ ಶಿಬಿರದ 2026-27ನೇ ಸಾಲಿನ ಕನ್ನಡ ತರಗತಿಗಳ ಉದ್ಘಾಟನೆ

# ಚಿಣ್ಣರ ಬಿಂಬದ ಮಕ್ಕಳ ಅದ್ಭುತ ಪ್ರತಿಭೆಯ ಮುಂದೆ ನಮ್ಮ ಪ್ರತಿಭೆ ಶೂನ್ಯ : ಗಂಗಾಧರ್ ಬಂಗೇರ




ಮುಂಬಯಿ, ಜೂ.19- ಚಿಣ್ಣರಬಿಂಬ ಐರೋಲಿ ಶಿಬಿರದ 2026 - 27 ನೇ ಸಾಲಿನ ಕನ್ನಡ ತರಗತಿಗಳ ಉದ್ಘಾಟನಾ ಸಮಾರಂಭವು ಜೂನ್ 14 ರಂದು ಮಧ್ಯಾಹ್ನ 3.00 ಗಂಟೆಗೆ ಸೈಂಟ್ ಕ್ಸೇವಿಯರ್ಸ್ ಸ್ಕೂಲ್‌ನಲ್ಲಿ ನಡೆಯಿತು.

ಮಕ್ಕಳ ಪ್ರಾರ್ಥನೆಯೊಂದಿಗೆ ಆರಂಭವಾದ ಕಾರ್ಯಕ್ರಮವನ್ನು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಐರೋಲಿ ಅಯ್ಯಪ್ಪ ಸೇವಾ ಸಮಿತಿಯ ಅಧ್ಯಕ್ಷರಾದ ಗಂಗಾಧರ್ ಬಂಗೇರ ಅವರು ದೀಪ ಬೆಳಗಿಸಿ ಉದ್ಘಾಟಿಸಿದರು.

ವಲಯ ಮುಖ್ಯಸ್ಥ ಆಶಾ ಪೂಜಾರಿ ಮತ್ತು ಉಪವಲಯ ಮುಖ್ಯಸ್ಥೆ ಸುಜಾತಾ ಶೆಟ್ಟಿ ಅತಿಥಿಗಳಿಗೆ ಶಾಲು ಹೊದಿಸಿ ಪುಷ್ಪಗುಚ್ಛ ನೀಡಿ ಗೌರವಿಸಿದರು.

ಬಳಿಕ ಮಾತನಾಡಿದ ಗಂಗಾಧರ್ ಬಂಗೇರ ಅವರು ಚಿಣ್ಣರಬಿಂಬದ ಮಕ್ಕಳ ಅದ್ಭುತ ಪ್ರತಿಭೆಯ ಮುಂದೆ ನಮ್ಮ ಪ್ರತಿಭೆ ಶೂನ್ಯ, ಮಕ್ಕಳಿಗೆ ಸಂಸ್ಕಾರ ಮತ್ತು ಪ್ರತಿಭೆಗೆ ಯೋಗ್ಯವಾದ ವೇದಿಕೆಯನ್ನು ಕಲ್ಪಿಸಿಕೊಡುವಲ್ಲಿ ಚಿಣ್ಣರಬಿಂಬ ಸಂಸ್ಥೆ ಶ್ರೇಷ್ಠವಾದ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಅತಿಥಿಯಾಗಿ ಆಗಮಿಸಿದ ನೃತ್ಯ ನಿರ್ದೇಶಕಿ ಗೀತಾ ಶೆಟ್ಟಿ, ಚಿಣ್ಣರ ಬಿಂಬ ಒಂದು ಉತ್ತಮ ಸಂಸ್ಥೆ ಹಾಗೂ ನನ್ನಂಥ ಪಾಲಕರಿಗೆ ಉತ್ತಮ ತಮ್ಮ ಪ್ರತಿಭೆ ಗುರುತಿಸಿ ಜೀವನದಲ್ಲಿ ಪ್ರತಿಭೆ ಮುಂದುವರಿಸಲು ಉತ್ತಮ ಅವಕಾಶ ನೀಡಿದೆ. ಎಲ್ಲರೂ ಇನ್ನೂ ಮಕ್ಕಳನ್ನು ಈ ಸಂಸ್ಥೆಗೆ ಪ್ರವೇಶ ಪಡೆಯಲು ಸಹಕರಿಸಿ ಎಂದರು.

ಸಂಸ್ಥೆಯ ಸಮನ್ವಯಕಿ ಗೀತಾ ಹೇರಳ ಅವರು ಪಾಲಕರು ಮತ್ತು ಮಕ್ಕಳಿಗೆ ಹಿತನುಡಿ ಮತ್ತು ಮಾರ್ಗದರ್ಶನ ನೀಡಿದರು.

ಇದೆ ಸಂದರ್ಭದಲ್ಲಿ ಹಳೆಯ ವಿದ್ಯಾರ್ಥಿಗಳ ಪಾಲಕರಾದ ಮಾಲತಿ ಶೆಟ್ಟಿ,




ಪುಷ್ಪಾ ಶೆಟ್ಟಿ, ಮತ್ತು ದಾಕ್ಷಾಯಣಿ ಬಂಗೇರ ಅವರು ಚಿಣ್ಣರ ಬಿಂಬದೊಂದಿಗಿನ ತಮ್ಮ ಸುಂದರ ಅನುಭವ ಹಂಚಿ ಕೊಂಡರು. ಆಶಾ ನಾಗೇಶ್ ಪೂಜಾರಿ ವಂದಿಸಿದರು. ಶಿಬಿರದ ಮಕ್ಕಳು ಸುಸ್ರಾವ್ಯವಾಗಿ ಭಜನೆ ಹಾಗೂ ವಂದೇ ಮಾತರಂ ಗೀತೆಯನ್ನು ಹಾಡಿದರು. ಶಿಕ್ಷಕಿ ಯಶೋದ ಕಾಂಚನ್, ವಲಯ ಸಾಂಸ್ಕೃತಿಕ ಮುಖ್ಯಸ್ಥೆ ಜಗದೇವಿ ದಾಲ್ಗಡೆ, ಉಷಾ ಶೆಟ್ಟಿ ,ರಾಜೇಶ್ವರಿ ಶೆಟ್ಟಿ ಮತ್ತು ಸಮಿತಿಯ ಸದಸ್ಯರು ಉಪಸ್ಥಿತರಿದ್ದರು ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

### ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನ ಬ್ಯಾಪ್ಟಿಸ್ಟವಾಡಿ ಅಂಧೇರಿ (ಪೂ.)

# ಇಂದು 'ಈ ರಾತ್ರೆಗ್... ಪಗೆಲ್ಗ್ ಯಾನ್' ತುಳು ನಾಟಕ ಪ್ರದರ್ಶನ

ಮುಂಬಯಿ, ಜೂ. 19- ಅಂಧೇರಿ ಪೂರ್ವದಲ್ಲಿರುವ ಬ್ಯಾಪ್ಟಿಸ್ಟವಾಡಿಯಲ್ಲಿ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಾಲಯದ ಸನ್ನಿಧಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಜೂ. 20ರ ಶನಿವಾರ ಸಂಜೆ 6:30ಕ್ಕೆ ಕೆ. ವಿ. ಎಸ್. ಎಂಟರ್‌ಟೈನ್‌ಮೆಂಟ್ ಕಲಾವಿದರ ಕೂಡುವಿಕೆಯಲ್ಲಿ 'ಈ ರಾತ್ರೆಗ್... ಪಗೆಲ್ಗ್ ಯಾನ್' ಎಂಬ ತುಳು ಹಾಸ್ಯಮಯ ಸಾಂಸಾರಿಕ ನಾಟಕ ಪ್ರದರ್ಶಿಸಲ್ಪಡಲಿದೆ.

ನಾಟಕ ಪ್ರದರ್ಶನದ ಕೊನೆಯಲ್ಲಿ ಸಾರ್ವಜನಿಕ ಅನ್ನ ಸಂತರ್ಪಣೆಯು ಜರಗಲಿದೆ.

ಈ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಲಾ ರಸಿಕರು, ತುಳು - ಕನ್ನಡಿಗರು ಬಂದು ಸಹಕರಿಸುವಂತೆ ಬ್ಯಾಪ್ಟಿಸ್ಟವಾಡಿ ಶ್ರೀ ಕ್ಷೇತ್ರ ದತ್ತ ಜಗದಂಬಾ ದೇವಸ್ಥಾನದ ಮುಖ್ಯ ಸಲಹೆಗಾರರು ಹಾಗೂ ಗೌರವಾಧ್ಯಕ್ಷರುಗಳಾದ ಶಾಸಕ ಮುರ್ಜಿ ಪಟೇಲ್ (ಕಾಕಾ), ಕೋಟ್ಯಾನ್ ಮೇನ್ಸ್‌ವೇರ್‌ನ ಮಾಲಕ ಹರೀಶ್ ಆರ್. ಕೋಟ್ಯಾನ್, ಕನ್ನಡಿಗ ಕಲಾವಿದರ ಪರಿಷತ್ ಮಹಾರಾಷ್ಟ್ರದ ಅಧ್ಯಕ್ಷ ಡಾ. ಸುರೇಂದ್ರ ಕುಮಾರ್ ಹೆಗ್ಡೆ, ಪುನರ್ ನಿರ್ಮಾಣ ಸಮಿತಿಯ ಗೌರವ ಪ್ರಧಾನ ಕಾರ್ಯದರ್ಶಿ ದೀನದಾಸ್ ಬಿ. ಸನಿಲ್, ದೇವಾಲಯದ ಆಡಳಿತ ಸಮಿತಿಯ ಅಧ್ಯಕ್ಷ ದಯಾನಂದ ಸಿ. ಅಂಚನ್, ಉಪಾಧ್ಯಕ್ಷ ಏಕನಾಥ್ ಬಂಗೇರ, ಗೌರವ ಪ್ರಧಾನ ಕಾರ್ಯದರ್ಶಿ ಯಶವಂತ್ ಸಿ. ಅಮೀನ್, ಕೋಶಾಧಿಕಾರಿ ಮೋಹನ್‌ದಾಸ್ ಶ್ರೀಯಾನ್, ಜೊತೆ ಕಾರ್ಯದರ್ಶಿ ಶಂಕರ್ ದೇವಾಡಿಗ, ಜೊತೆ ಕೋಶಾಧಿಕಾರಿ ಪ್ರಕಾಶ್ ಕೋಟ್ಯಾನ್ ಹಾಗೂ ವಿವಿಧ ಸಮಿತಿಗಳ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯವರು, ಮಹಿಳಾ ಸದಸ್ಯೆಯರು ಹಾಗೂ ಸರ್ವ ಸದಸ್ಯರು ವಿನಂತಿಸಿಕೊಂಡಿದ್ದಾರೆ.

# ಬಜ್ಪೆ ಬಂಟರ ಸಂಘದ ನೂತನ ಭವನದ ಕನಸು ನನಸಾಗಲಿದೆ - ವೇಣುಗೋಪಾಲ್ ಎಲ್. ಶೆಟ್ಟಿ




ಮಂಗಳೂರು, ಜೂ. 19- ಹದಿನಾರು ಗ್ರಾಮಗಳನ್ನೊಳಗೊಂಡ ನಮ್ಮ ಈ ಬಜ್ಪೆ ಬಂಟರ ಸಂಘ ಸ್ಥಾಪನೆಯಾಗಿ ಹದಿನಾಲ್ಕು ವರ್ಷ ಸಂದಿದೆ. ಈ ಕಾಲಾವಧಿಯಲ್ಲಿ ಹಲವಾರು ಆರೋಗ್ಯ, ಶೈಕ್ಷಣಿಕ ಸಾಮಾಜಿಕ ಕ್ಷೇತ್ರದಲ್ಲಿ ಸಮಾಜಮುಖಿ ಕೆಲಸವನ್ನು ನಿರಂತರವಾಗಿ ಮಾಡುತ್ತಾ ಬಂದಿದ್ದು ಇದಕ್ಕೆ ಅರ್ಹವಾಗಿ ದ. ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ದೊರಕಿದೆ. ಆದರೆ ನಮ್ಮ ಸಂಘಕ್ಕೆ ನಮ್ಮದೇ ಆದ ಒಂದು ಭವನವನ್ನು ನಿರ್ಮಿಸುವ ಕನಸು ಈವರೆಗೂ ನನಸಾಗಿರಲಿಲ್ಲ. ಆದರೆ ಇದೀಗ ದಾನಿಗಳ ಎಲ್ಲರ ಒಮ್ಮತದ ಪ್ರೋತ್ಸಾಹದ ನೆಲೆಯಲ್ಲಿ ನಮ್ಮ ಸಂಘದ ನೂತನ ಬಂಟರ ಭವನದ ಶಿಲಾನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ಈ ಕನಸು ನನಸಾಗುವ ದಿಸೆಯತ್ತ ಸಾಗುತ್ತಿದೆ ಎಂದು ಬಂಟರ ಸಂಘ ಬಜ್ಪೆಯ ಅಧ್ಯಕ್ಷ ಮುಂಬಯಿಯ ಉದ್ಯಮಿ, ಥಾಣೆ ಬಂಟ್ಸ್ ಎಸೋಸಿಯೇಶನ್‌ನ ಮಾಜಿ ಅಧ್ಯಕ್ಷ ವೇಣುಗೋಪಾಲ್ ಎಲ್. ಶೆಟ್ಟಿ ನುಡಿದರು.

ಅವರು ಜೂ. 16ರ ಮಂಗಳವಾರ ಮಂಗಳೂರಿನಲ್ಲಿ ಸುದ್ದಿಗೋಷ್ಠಿಯನ್ನು ಆಯೋಜಿಸಿ ಈ ವಿಷಯವನ್ನು ಬಹಿರಂಗಪಡಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ, ಜುಲೈ 5ರಂದು ಬೆಳಿಗ್ಗೆ 10:00ಕ್ಕೆ ಈ ಶಿಲಾನ್ಯಾಸದ ಮಹತ್ವಪೂರ್ಣ ಯೋಜನೆಯು ಬಜ್ಪೆಯ ತಾರಿಕಂಬ್ಳ ಮುಂಡಾರಿನಲ್ಲಿ ಜರಗಲಿದೆ. ಈ ಸಂದರ್ಭದಲ್ಲಿ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು ಇತ್ಯಾದಿ ಕಾರ್ಯಕ್ರಮದೊಂದಿಗೆ ಈ ಶಿಲ್ಯಾನ್ಯಾಸ ಕಾರ್ಯಕ್ರಮವು ಜರಗಲಿದೆ. ಸುಮಾರು ಅಂದಾಜು 10 ಕೋಟಿ ರೂ. ವೆಚ್ಚದಲ್ಲಿ ಈ ಭವನವು ನಿರ್ಮಾಣಗೊಳ್ಳಲಿದೆ ಎಂದು ಈ ಸುದ್ದಿಗೋಷ್ಠಿಯಲ್ಲಿ ವೇಣುಗೋಪಾಲ್ ಎಲ್. ಶೆಟ್ಟಿ ತಿಳಿಯಪಡಿಸಿದರು.

ಹಾಗೇ ಬಂಟರ ಭವನಕ್ಕೆ ಎಂಆರ್‌ಜಿ ಗ್ರೂಪ್ ಸ್ಥಾಪಕಾಧ್ಯಕ್ಷ ಡಾ. ಕೆ. ಪ್ರಕಾಶ್ ಶೆಟ್ಟಿ ಶಿಲಾನ್ಯಾಸ ನೆರವೇರಿಸಲಿರುವರು. ಶಬರಿ ಇಂಡಸ್ಟ್ರೀಯಲ್ ಕ್ಯಾಟರಿಂಗ್ ಸರ್ವೀಸಸ್ ಮ್ಯಾನೇಜಿಂಗ್ ಡೈರೆಕ್ಟರ್ ಕೆ. ಕೆ. ಶೆಟ್ಟಿ ದೀಪ ಪ್ರಜ್ವಲನೆ ಮಾಡಲಿರುವರು. ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷ ಅಜಿತ್ ಕುಮಾರ್ ರೈ ಮಾಲಾಡಿ ಕಾರ್ಯಕ್ರಮ ಉದ್ಘಾಟಿಸಲಿರುವರು. ವಿ. ಕೆ. ಗ್ರೂಪ್ ಆಫ್ ಕಂಪೆನೀಸ್ ಆಡಳಿತ ನಿರ್ದೇಶಕ ಕರುಣಾಕರ ಶೆಟ್ಟಿ ಮಧ್ಯಗುತ್ತು ನೀಲನಕ್ಸೆ ಬಿಡುಗಡೆ ಮಾಡಲಿರುವರು. ಪುಣೆ ಬಂಟರ ಸಂಘದ ಅಧ್ಯಕ್ಷ ಅಜಿತ್ ಹೆಗ್ಡೆ ಕೆಂಜಾರುಗುತ್ತು ಪ್ರತಿಭಾ ಪುರಸ್ಕಾರವನ್ನು ವಿತರಣೆ ಮಾಡಲಿರುವರು. ಬೆಂಗಳೂರಿನ ಯುನಿವರ್ಸಲ್ ಗ್ರೂಪ್ ಆಫ್ ಇನ್ಸಿಟ್ಯೂಶನ್ ಸ್ಥಾಪಕ ಮತ್ತು ಕಾರ್ಯಾಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ ವಿದ್ಯಾರ್ಥಿ ಸಹಾಯ ಧನ ವಿತರಣೆ ಮಾಡುಲಿರುವರು ಎಂಬಿತ್ಯಾದಿ ಮಾಹಿತಿಯನ್ನು ಈ ಸಂದರ್ಭದಲ್ಲಿ ಅವರು ನೀಡಿದರು.

ಹಾಗೇ ಈ ಸಂದರ್ಭ ದಾನಿಗಳಾದ ಮುಂಬಯಿಯ ಹೇರಂಬ ಇಂಡಸ್ಟ್ರೀಸ್‌ನ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕ ನಿರ್ದೇಶಕ ಡಾ. ಕನ್ಯಾನ ಸದಾಶಿವ ಶೆಟ್ಟಿ, ಭವಾನಿ ಶಿಪ್ಪಿಂಗ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕ ಮತ್ತು ಕಾರ್ಯನಿರ್ದೇಶಕ ಕುಸುಮೋಧರ ಡಿ. ಶೆಟ್ಟಿ, ಬರೋಡಾದ ಶಶಿ ಕ್ಯಾಟರಿಂಗ್ ಸರ್ವೀಸಸ್ ವ್ಯವಸ್ಥಾಪಕ ನಿರ್ದೇಶಕ ಶಶಿಧರ ಶೆಟ್ಟಿ ಬರೋಡಾ ಅವರನ್ನು ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಿದ್ದೇವೆ.

ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ, ಶಾಸಕರಾದ ಉಮಾನಾಥ ಕೋಟ್ಯಾನ್, ಡಾ. ವೈ. ಭರತ್ ಶೆಟ್ಟಿ, ರಾಜೇಶ್ ನಾಯ್ಕ್, ಮಂಜುನಾಥ ಭಂಡಾರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಿಥುನ್ ರೈ ಮೊದಲಾದ ಗಣ್ಯರು ಮುಖ್ಯ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವರು ಎಂದು ವೇಣುಗೋಪಾಲ್ ಎಲ್. ಶೆಟ್ಟಿ ಕರಂಬಾರು ಅಂದಿನ ಕಾರ್ಯಕ್ರಮದ ಬಗ್ಗೆ ತಿಳಿಯಪಡಿಸಿದರು.

ಈ ಸುದ್ದಿಗೋಷ್ಠಿಯಲ್ಲಿ ಬಜ್ಪೆ ಬಂಟರ ಸಂಘದ ಉಪಾಧ್ಯಕ್ಷರಾದ ಡಾ. ಶಿವಪ್ರಸಾದ್ ರೈ, ಕುಸುಮಾಧರ ಶೆಟ್ಟಿ, ಮಹಿಳಾ ವಿಭಾಗ ಅಧ್ಯಕ್ಷೆ ಪ್ರೀತಿ ಹರೀಶ್ ಶೆಟ್ಟಿ, ಯುವ ವಿಭಾಗ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ, ಸುಕೇಶ್ ಶೆಟ್ಟಿ, ಅಜಿತ್ ಕುಮಾರ್ ಶೆಟ್ಟಿ ಉಪಸ್ಥಿತರಿದ್ದರು.

# 'ಆಹಾರ್' ವಲಯ-8ರ ವತಿಯಿಂದ ಉಚಿತ ಆರೋಗ್ಯ, ನೇತ್ರ ತಪಾಸಣೆ ಶಿಬಿರ



ಮುಂಬಯಿ,ಜೂ.19 - ಇಂಡಿಯನ್ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್ ಅಸೋಸಿಯೇಶನ್ (ಆಹಾರ್)ನ ವಲಯ 8ರ ವತಿಯಿಂದ ಹಿರಾನಂದಾನಿ ಆಸ್ಪತ್ರೆ ಪೊವಾಯಿ ಮತ್ತು ಎನ್‌ಎಬಿ (ನ್ಯಾಷನಲ್ ಅಸೋಸಿಯೇಶನ್ ಫಾರ್ ಬ್ಲೈಂಡ್) ಸಹಯೋಗದೊಂದಿಗೆ ವಲಯ-8 ಸದಸ್ಯರ ರೆಸ್ಟೋರೆಂಟ್‌ಗಳು/ಹೋಟೆಲ್‌ಗಳ ಉದ್ಯೋಗಿಗಳು/ಸಿಬ್ಬಂದಿಗೆ ಉಚಿತ ಆರೋಗ್ಯ ಮತ್ತು ಕಣ್ಣಿನ ತಪಾಸಣೆ ಶಿಬಿರವನ್ನು ಆಯೋಜಿಸಿತ್ತು.

ಜೂ.18 ರಂದು ವಿಲೇಪಾರ್ಲೆ ಪೂರ್ವದ ಹೋಟೆಲ್ ರಾಮಕೃಷ್ಣದಲ್ಲಿ ಬೆಳಿಗ್ಗೆ 9.30 ರಿಂದ ಅಪರಾಹ್ನ 2.30ರ ವರೆಗೆ ಈ ಶಿಬಿರ ನಡೆಯಿತು.

ಎಲ್ಲಾ ಆಹಾರ್ ವಲಯ-8 ಸದಸ್ಯರು ತಮ್ಮ ಸಿಬ್ಬಂದಿ/ನೌಕರರು ಆಹಾರ್ ಅಸೋಸಿಯೇಷನ್ ಆಯೋಜಿಸಿದ್ದ ಈ ಉಚಿತ ಕಣ್ಣು ಮತ್ತು ಆರೋಗ್ಯ ತಪಾಸಣೆ ಶಿಬಿರದ ಗರಿಷ್ಠ ಪ್ರಯೋಜನಗಳನ್ನು ಪಡೆಯಲು ಪ್ರೋತ್ಸಾಹಿಸಿದರು. ಶಿಬಿರದಲ್ಲಿ ಮೂಳೆ ಸಾಂದ್ರತೆ, ರಕ್ತದೊತ್ತಡ,ಬ್ಲಡ್ ಶುಗರ್,ದೃಷ್ಟಿ ಪರೀಕ್ಷೆ ಸಹಿತ ವಿವಿಧ ತಪಾಸಣೆಗಳನ್ನು ನಡೆಸಲಾಯಿತು.



ಹೆಚ್ಚುವರಿಯಾಗಿ ದೃಷ್ಟಿ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ ಎನ್‌ಎಬಿ ಉಚಿತ ಕನ್ನಡಕಗಳನ್ನು ಒದಗಿಸುತ್ತದೆ. ವಲಯ-8ರ ಉಪಾಧ್ಯಕ್ಷ ಪ್ರಕಾಶ್ ಶೆಟ್ಟಿ ಮತ್ತು ಎಲ್ಲಾ ಸಮಿತಿ ಸದಸ್ಯರು ಶಿಬಿರದ ಯಶಸ್ಸಿಗೆ ಸಹಕರಿಸಿದರು.

# 4th Year Remembrance



Smt. PADMAVATI SHYAMA SHETTY
Kalaiguthu, Kerama And
Uggu Guthu Moodbidri
DECEMBER 17, 1936 - JUNE 20, 2022
Fondly remembered as a loving wife,
sister, mother & grandmother
Late Shyama Shetty
Sadanand Shetty (Brother - Pune)
Vishala S. Shetty & Sisters
Devdas (Dev) & Priti Shetty
Meera Shetty
Rama & Ashok Shetty
Late Mohandas & Sukanta Shetty
Prithvi, Arjun, Mansi, Kaavya, Archita, Isha, Yukta, Ridhi,
And Management And Staff
Sudarshan | Chakra | Curry Twist | Capers | Café-0 | Vanilla Miel
Sakinaka Junction, Andheri (E) Mumbai



# ಅಭಿನಂದನೆಗಳು



ಶ್ರೀ ರಿತೇಶ ಬಂಗೇರ

ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟ್ (CA) ಪರೀಕ್ಷೆಯಲ್ಲಿ ಯಶಸ್ವಿಯಾಗಿ ಉತ್ತೀರ್ಣರಾದ ಶ್ರೀ ರಿತೇಶ ಬಂಗೇರ, ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.
ನಿಮ್ಮ ಈ ಅದ್ಭುತ ಸಾಧನೆಯು ಕಠಿಣ ಪರಿಶ್ರಮ, ಅಚಲ ಸಂಕಲ್ಪ, ಶಿಸ್ತು ಹಾಗು ಸಮರ್ಪಣೆಯ ಪ್ರತೀಕವಾಗಿದೆ. ಚಾರ್ಟರ್ಡ್ ಅಕೌಂಟೆಂಟ್ ಆಗುವುದು ಹೆಚ್ಚಿನವರ ಕನಸಾಗಿದ್ದು, ಅದನ್ನು ಸಾಕಾರಗೊಳಿಸಿರುವುದು ನಿಮ್ಮ ತಂದೆ, ಮನೋಜ್ ಬಂಗೇರ ಮತ್ತು ತಾಯಿ- ಪುಷ್ಪ ಬಂಗೇರ, ಡೊಂಬಿವಲಿ, ಕುಟುಂಬ, ಬಂಧು-ಬಳಗ ಹಾಗು ಸಮಾಜಕ್ಕೆ ಹೆಮ್ಮೆಯ ವಿಷಯವಾಗಿದೆ.
ನಿಮ್ಮ ವೃತ್ತಿ ಜೀವನವು ಇನ್ನಷ್ಟು ಯಶಸ್ಸು, ಕೀರ್ತಿ ಮತ್ತು ಸಾಧನೆಗಳಿಂದ ಕೂಡಿರಲಿ. ನಿಮ್ಮ ಪ್ರತಿಭೆ ಮತ್ತು ಪರಿಶ್ರಮದಿಂದ ಇನ್ನು ಉನ್ನತ ಶಿಖರಗಳನ್ನು ಏರಿ ಸಮಾಜಕ್ಕೆ ಮಾದರಿಯಾಗಲಿ ಎಂದು ಹಾರೈಸುತ್ತೇವೆ.
ಇಂದಿನ ಸಾಧನೆ ನಾಳಿನ ಇನ್ನಷ್ಟು ದೊಡ್ಡ ಯಶಸ್ಸಿನ ಮೆಟ್ಟಿಲಾಗಲಿ
ಅಭಿನಂದನೆಗಳು ಮತ್ತು ಶುಭಾಶಯಗಳು!

• ಶ್ರೀನಿವಾಸ್ ಸಾಫಲ್ಯ ಅಧ್ಯಕ್ಷರು ಸಾಫಲ್ಯ ಸೇವಾ ಸಂಘ ಮುಂಬಯಿ
• ಶ್ರೀಮತಿ ರತಿಕ ಎಸ್. ಸಾಫಲ್ಯ • ಕು. ದಿವ್ಯ ಎಸ್. ಸಾಫಲ್ಯ

# ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಮತಿ ವಾಗ್ದೇವಿ ರವಿರಾಜ್ ಕಾಂಚನ್**
ಅಂಬೋಲಿ, ಅಂಧೇರಿ (West) ಮುಂಬಯಿ
ಜನನ : 13.12.1961 ನಿಧನ: 08.06.2026

ಸರಳ ಸಜ್ಜನಿಕೆ, ಸಂಸ್ಕಾರಯುತ ಆದರ್ಶ ಬದುಕು ನಡೆಸಿ, ಸ್ನೇಹಜೀವಿಯಾಗಿ ಸದಾ ನಮ್ಮೊಂದಿಗೆ ಸಂಪರ್ಕದಲ್ಲಿ ಇದ್ದುಕೊಂಡು ಪ್ರೀತಿ- ವಿಶ್ವಾಸದಿಂದ ಬೆರೆತು ಬಾಳಿದ ನಿಮ್ಮ ನೆನಪು ನಮ್ಮ ಹೃದಯ ಮಂದಿರದಲ್ಲಿ ಶಾಶ್ವತ. ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನಲ್ಲಿ ಚಿರಶಾಂತಿಯನ್ನು ಪ್ರಾರ್ಥಿಸಿ ಅರ್ಪಿಸುವ ಭಾವಪೂರ್ಣ ಶ್ರದ್ಧಾಂಜಲಿ. ನಿಮ್ಮ ಆಶೀರ್ವಾದವೇ ನಮಗೆ ಶ್ರೀರಕ್ಷೆ.
ನಿಮ್ಮನ್ನು ಸದಾ ಸ್ಮರಿಸುತ್ತಿರುವ,
**1982 Batch ಬಿ.ಕಾಂ (ಬಿ) ಸಹಪಾಠಿಗಳು**
**ವಿಜಯಾ ಕಾಲೇಜು ಮೂಲ್ಕಿ**

# 6th Year Remembrance



Expired: 20.06.2020

Santoor Hosavaklu Melmane House
**Ashok Kumar Raju Shetty**
(S/o Late Smt. Appi Raju Shetty)
Director of M/s. Pariwar Hotels Pvt. Ltd., & M/s. Vala Janu Hotels Pvt. Ltd.,
*Six years have passed, yet the pain of missing you remains as strong as ever. Your go-getter spirit, determination, and unwavering guidance continue to inspire us every day. We love you, miss you, and remember you always.*
-: Deeply Missed & Fondly remembered by :-
Smt. Satyashalini Ashok Shetty (Wife)
Mr. Abhishek A. Shetty (Son)
Miss Apeksha A. Shetty (Daughter)
Mrs. Shashikala A. Mada (Sister) & Mr. Anand S. Mada (Brother-In-Law)
Mr. Sunil Raju Shetty (Brother) & Mrs. Roopa S. Shetty (Sister-In-Law)
Mrs. Shobha J. Shetty (Sister) & Mr. Jayaram K. Shetty (Brother-In-Law)
Nieces, Nephews, & Grand Nieces
And All Family Members & Relatives

# ಉತ್ತರಕ್ರಿಯೆ-UTTARAKRIYA



Death : 09-06-2026

**Shri Babu Ramesh Chowta**
(ಗುರುಪುರ ಬೆಳ್ಳೂರುಗುತ್ತು ಗರಡಿಮನೆ)

ನಮ್ಮೆಲ್ಲರ ಪ್ರೀತಿಯ ಶ್ರೀ ಬಾಬು ರಮೇಶ್ ಚೌಟ ಅವರು ಕಳೆದ ತಾ. 09-06-2026ರಂದು ದೈವಾಧೀನರಾಗಿದ್ದು, ಮೃತರ ಆತ್ಮಸದ್ಗತಿಯ ಬಗ್ಗೆ ಉತ್ತರಕ್ರಿಯೆಯನ್ನು ನಾಳೆ ತಾ. 21-06-2026ನೆಯ ರವಿವಾರ ಮಧ್ಯಾಹ್ನ ಗಂಟೆ 12.00ಕ್ಕೆ ಸರಿಯಾಗಿ ಶ್ರೀ ವೈದ್ಯನಾಥ ಸಭಾಗೃಹ, ಕುಕ್ಕುದಕಟ್ಟೆ, ಗುರುಪುರ ಇಲ್ಲಿ ಜರಗಲಿದೆ. ಆ ಪ್ರಯುಕ್ತ ಮೃತರ ಕುಟುಂಬಿಕರು, ಬಂಧು-ಮಿತ್ರರು, ಹಿತೈಷಿಗಳೆಲ್ಲರೂ ಇದನ್ನೇ ವೈಯಕ್ತಿಕ ಹೇಳಿಕೆ ಎಂದು ಪರಿಗಣಿಸಿ ಸಕಾಲದಲ್ಲಿ ಆಗಮಿಸಿ ಮೃತರ ದಿವ್ಯಾತ್ಮಕ್ಕೆ ಚಿರಶಾಂತಿ, ಸದ್ಗತಿಯನ್ನು ಕರುಣಿಸಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸಬೇಕಾಗಿ ಅಪೇಕ್ಷಿಸುವೆವು.

Deeply Missed & Mourned By :

| | |
|---|---|
| **Wife, Son, Brothers, Sisters, Brother-in-law Bellur Guthu & Adyapady Bail Pademane Family** | **Satish R. Shetty** (Brother) (Laxmi Caterers, Sion, Mumbai) / **Bola Palingeri Parari Astika Nilaya Family** |

Please Treat This as our Personal Invitation.

## ಆಹಾರ ಸುರಕ್ಷತೆಗೆ ಎಫ್‌ಎಸ್‌ಎಸ್‌ಎಐ ಕಡಕ್ ಸೂಚನೆ: ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮದ ಎಚ್ಚರಿಕೆ


ಹೊಸದಿಲ್ಲಿ,ಜೂ.19-ದೇಶಾದ್ಯಂತ ಆಹಾರ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಠಿಣ ನಿರ್ದೇಶನ ನೀಡಿದೆ. ಆಹಾರ ಪದಾರ್ಥಗಳ ತಯಾರಿಕೆ, ಸಂಸ್ಕರಣೆ ಮತ್ತು ಪ್ಯಾಕಿಂಗ್ ಸಮಯದಲ್ಲಿ ಕೇವಲ 'ಫುಡ್-ಗ್ರೇಡ್' (ಆಹಾರ-ದರ್ಜೆ), ವಿಷಮುಕ್ತ ಮತ್ತು ತುಕ್ಕುರಹಿತ ಚಾಕುಗಳು, ಬ್ಲೇಡ್‌ಗಳು ಹಾಗೂ ಇತರ ಕತ್ತರಿಸುವ ಉಪಕರಣಗಳನ್ನುಬಳಸುವುದುಇನ್ಮುಂದೆಕಡ್ಡಾಯ ವಾಗಿದೆ ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ.

ಕೆಲವು ಆಹಾರ ಉದ್ಯಮಗಳಲ್ಲಿ ತುಕ್ಕು ಹಿಡಿದ, ಬಿರುಕು ಬಿಟ್ಟ ಅಥವಾ ಬಣ್ಣ ಬಳಿದ ಚಾಕು ಮತ್ತು ಉಪಕರಣಗಳನ್ನು ಬಳಸುತ್ತಿರುವುದು ಕಂಡುಬಂದಿದ್ದು, ಇದರಿಂದಾಗಿ ಆಹಾರ ಕಲುಷಿತಗೊಂಡು ಗ್ರಾಹಕರ ಆರೋಗ್ಯಕ್ಕೆ ತೀವ್ರ ಧಕ್ಕೆಯಾಗುವ ಸಾಧ್ಯತೆಯಿದೆ ಎಂದು ಹೇಳಿದರು.

# BUNTS SANGHA MUMBAI

KURLA-BHANDUP REGIONAL COMMITTEE
Cordially invites you and your family on the occasion of our region's
Today **15[TH] ANNUAL GET-TOGETHER 2026**

On Saturday, 20th June 2026, 10:30 am to 8:00 pm at "NINJOOR MALIGEMANE VARIJA MADHAVA HEGDE VEDIKE"
Smt. Radhabai T Bhandary Auditorium, Buntara Bhavana, Buntara Bhavana Marg, Kurla (E), Mumbai - 400070.

| Presided by | Chief Guest | Special Guest & Lighting of Lamp | Guest of Honour |
|---|---|---|---|
|  |  |  |  |
| Shri Praveen Bhoja Shetty (President, Bunts Sangha Mumbai) | Shri Adarsh Shetty (Businessman & Chairman, BSM Higher Education Committee) | Shri Muralimohan Shetty (Businessman & Ex-President Goa Bunts) | Dr (Smt) Vijetha S. Shetty (Principal of Vivek College, Goregaon) |
|  |  |  |  |
| Shri Ravindranath Bhandary, Regional Coordination Chairman (Central) | Girish R. Shetty, Inna, Chairman, Kurla-Bhandup Region | Smt. Amritha A. Shetty, Chairperson, Mahila Vibhag. Kurla-Bhandup Region | Adv. Nidhi V. Shetty, Chairperson, Youth Wing Kurla-Bhandup Region |

## HEROES OF KURLA BHANDUP REGION

(Award in the Memory of Late Dr Ratnakar Shetty (Ex-Medical Cell Chairman BSM))

| | | | | |
|---|---|---|---|---|
|  |  |  |  |  |
| Shri Jaya Shetty, Sports & Social Work | Smt. Apeksha Shetty, Adventure | Shri Suresh Shetty Nandrolli, Yakshagana Writer, Director & Artist | Dr. Chetana Santosh Shetty, Education (Doctorate) | Dr. Rohini Shetty (SM Shetty School) Education (Doctorate) |

SPECIAL FELICITATION TO PRESIDENT OF AHAR



Shri Vijay Shetty

### SPORTS TALENT OF THE REGION

(Award In Memory of Late Sumalatha Shetty, Kanjurmarg)
Ms. Shamiksha Shetty - Football

### BEST PERFORMER OF THE REGION FOR THE TENURE 2023-26

(In Memory of Late Sujatha Rai, Kanjurmarg)
Mrs. Meera Taranath Shetty, Ladies Wing
Ms. Megha Balakrishna Shetty, Youth Wing

### FELICITATION OF EX-CHAIRMEN, EX-LADIES WING CHAIRPERSON & EX-YOUTH WING CHAIRMEN OF KURLA BHANDUP REGION

Cultural Programs:
Dance by Kids, Youths & Women of KBR
Fashion Show by Youth Wing of KBR
Mythological Dance Drama
"MAIMED APPE MANGLADEVI"
by artist of Arehole Nandagokula Prathisathana, Yakshagana
"AMARA SHILPI VEERA SHAMBU KALKUDE"
performed by artists of KBR,
Directed by Ajekar Balakrishna Shetty

### OFFICE BEARERS BUNTS SANGHA MUMBAI

Shri Mahesh Shetty, Vice President
Dr. R. K. Shetty, Hon. Gen. Secretary
CA Ramesh Shetty, Hon. Treasurer
Shri Girish Shetty Tellar, Jt. Secretary
Shri Shashidar Shetty, Innanje, Jt. Treasurer
Smt. Chitra R. Shetty, Chairperson, Mahila Vibhag, BSM
Shri Savin J. Shetty, Chairman, Youth Wing, BSM

### KURLA-BHANDUP REGIONAL COMMITTEE

Shri Harish A. Shetty, Convenor, Kurla-Bhandup Region
Shri Narayan K. Shetty, Nandalike, Vice-Chairman, Kurla-Bhandup Region
Shri Santosh G.Shetty, Secretary, Kurla-Bhandup Region
CA Sudesh Shetty, Treasurer, Kurla-Bhandup Region
Shri Suresh Shetty, Jt. Secretary, Kurla-Bhandup Region
Shri Krishna Kuddu Shetty, Jt. Treasurer, Kurla-Bhandup Region

ALL REGIONAL COMMITTEE MEMBERS, LADIES WING, YOUTH WING, EX-CHAIRMEN, EX-CHAIRPERSON LADIES WING, EX CHAIRMEN YOUTH WING

Lunch From 12:30Pm To 1:30Pm | Hi-Tea From 4:30Pm To 5:00 Pm Stage Programme From 5:00 Pm Onwards
Dinner From 8:30 Pm Onwards

# 24th Year Remembrance



ಜನನ : 9.05.1906
ನಿಧನ : 20.06.2002

**ಶ್ರೀ ಬೊಲ್ಯಗುತ್ತು ಐತಪ್ಪ ಶೆಟ್ಟಿ**

ನಿಮ್ಮ ಆದರ್ಶ ನಡೆ-ನುಡಿ ನಮಗೆ ದಾರಿದೀಪವಾಗಿದ್ದು, ಭಗವಂತನ ಚರಣಕಮಲದಲ್ಲಿದ್ದುಕೊಂಡು ನಮಗೆ ಬೆಳಕು ಮತ್ತು ಆಶೀರ್ವಾದವನ್ನು ನೀಡುತ್ತಿರುವ ನೀವು ನಮ್ಮನ್ನಗಲಿ ಇಂದಿಗೆ ವರುಷ 24 ಕಳೆದರೂ ನಿಮ್ಮನ್ನು ಅನುದಿನವೂ ನೆನಪಿಸುತ್ತಾ, ನಮ್ಮನ್ನಗಲಿದ ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತಾ ಸದಾ ಸ್ಮರಿಸುತ್ತಿರುವ,

**Ramesh A. Shetty (Son)**
Smt. Snehalata R. Shetty (Daughter-in-law)
Smt. Shambhavi Mahabal Shetty (Daughter)
**B. Vivek Shetty (Son)**
(Viswaat Chemicals Ltd., Mumbai)
Smt. Ramaa Vivek Shetty (Daughter-in-law)
Grand Children, Great Grand Children
And All Family Members